ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 22 ಬುಧವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 67 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com


ಕನ್ನಡ ಜಾಗೃತಿ ಹಾಡು 'ಪ್ರಜೆಗಳೇ ಪ್ರಭುಗಳು' ಲೋಕಾರ್ಪಣೆ......

















ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರರವರು

ಗೃಹ ಸಚಿವರು, ಕರ್ನಾಟಕ ಸರ್ಕಾರ ಇವರ ಅಮೃತ ಹಸ್ತದಿಂದ " ಪ್ರಜೆಗಳೇ ಪ್ರಭುಗಳು" ಜನಜಾಗೃತಿ ಮೂಡಿಸುವ ಕನ್ನಡದ ಹಾಡನ್ನು ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ವತಿಯಿಂದ ಬಿಡುಗಡೆ ಮಾಡಲಾಯಿತು. ಈ ಶುಭಸಂದರ್ಭದಲ್ಲಿ ಖ್ಯಾತನಿರ್ದೇಶಕ ಎನ್.ಓ.ಪ್ರಕಾಶ್‌ರಾವ್, ಉದಯೋನ್ಮುಖ ನಿರ್ಮಾಪಕ ಕೆ. ಪ್ರದೀಪ್‌ಸಿಂಗ್, ಎಂ.ಮಹೇಶ್ , ಸಂತೋಷ್ (ಶಂಭು), ಮನುಶೈವ್ (ಅಪ್ಪಿ) ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿಯವರ ಆದೇಶದ ಮೇರೆಗೆ

2 ಕೋಟಿ ವೆಚ್ಚದಲ್ಲಿ ಮೈಸೂರಲ್ಲಿ ಯೋಗ ಉದ್ಯಾನವನ ನಿರ್ಮಾಣ

ಮೋದಿಯವರ ನೇತೃತ್ವದಲ್ಲಿ ನಡೆದ ಯೋಗ ಪ್ರದರ್ಶನದಲ್ಲಿ ಶಾಸಕ ಎಸ್.ಎ.ರಾಮದಾಸ್ ಮಾಹಿತಿ

ಮೈಸೂರು,ಜೂ.21(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ಆದೇಶದ ಮೇರೆಗೆ 2 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನಲ್ಲಿ ಯೋಗ ಉದ್ಯಾನವನ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು, ಶೀಘ್ರದಲ್ಲಿ ಈ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಮಾಜಿ ಸಚಿವರೂ ಆದ ಶಾಸಕ ಎಸ್.ಎ.ರಾಮದಾಸ್ ತಿಳಿಸಿದರು.

ಮೈಸೂರು ಅರಮನೆ ಆವರಣದಲ್ಲಿ ಮಂಗಳವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡು ಬಳಿಕ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು.

ಮೋದಿಯವರ ಘನ ಉಪಸ್ಥಿತಿಯಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಏರ್ಪಡಿಸಬೇಕು ಎಂಬುದು ಬಹಳ ದಿನಗಳ ಕನಸು. ಅದೀಗ ನನಸಾಗಿದೆ. ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವ, 8ನೇ ಅಂತಾರಾಷ್ಟ್ರೀಯ ಯೋಗ ದಿನ ಮತ್ತು ಮೋದಿಯವರ 8 ವರ್ಷಗಳ ಆಡಳಿತದ ಈ ಸುಸಂದರ್ಭದಲ್ಲಿ ಮೈಸೂರಿನಲ್ಲಿ ಮೋದಿಯವರ ಯೋಗ ಪ್ರದರ್ಶನ ಇಡೀ ವಿಶ್ವದ ಗಮನ ಸೆಳೆದಿದೆ ಎಂದರು. ಇದಕ್ಕಾಗಿ ಮೋದಿಯವರಿಗೆ ಮೈಸೂರು ಮತ್ತು ರಾಜ್ಯದ ಜನತೆ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ. ತಾಯಿ ಚಾಮುಂಡೇಶ್ವರಿ ಆಶೀರ್ವಾದದಿಂದ ಪ್ರಕೃತಿಯ ಯಾವುದೇ ಅಡೆತಡೆ ಇಲ್ಲದೆ, ಯೋಗ ಪ್ರದರ್ಶನ ಯಶಸ್ವಿಯಾಗಿ ನೆರವೇರಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪ್ರಧಾನಿಯಿಂದ ಪ್ರೀತಿಯ ಗುದ್ದು ಇದು ಎಷ್ಟೋ ವರ್ಷಗಳ ಕಾಲದ ಬಾಂಧವ್ಯ; ಶಾಸಕ ರಾಮದಾಸ್ ಭಾವುಕ ನುಡಿ

ಮೈಸೂರು: ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಸಮಾವೇಶದಲ್ಲಿ ಪ್ರಧಾನಿ ಮೋದಿಯವರು ತಮ್ಮ ಬೆನ್ನು ತಟ್ಟಿ, ಪ್ರೀತಿಯ ಗುದ್ದು ನೀಡಿ ಕುಶಲೋಪರಿ ವಿಚಾರಿಸಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಶಾಸಕ ಎಸ್.ಎ.ರಾಮದಾಸ್, ಇದು ಎಷ್ಟೋ ವರ್ಷಗಳ ಕಾಲದ ಬಾಂಧವ್ಯ ಎಂದು ಭಾವುಕರಾಗಿ ಸಂತಸ ವ್ಯಕ್ತಪಡಿಸಿದರು.

ವ್ಯಕ್ತಪಡಿಸಲಾಗದಷ್ಟು ಆನಂದ ನೀಡಿದ ಕ್ಷಣವದು. ನಾನು ನಿರೀಕ್ಷೆ ಮಾಡಿರಲಿಲ್ಲ. ಇದು ಎಷ್ಟೋ ವರ್ಷಗಳ ಕಾಲದ ಬಾಂಧವ್ಯ. ಇದನ್ನು ಸಾರ್ವಜನಿಕವಾಗಿ ನಾನೆಲ್ಲೂ ಪ್ರಕಟ ಮಾಡಿರಲಿಲ್ಲ. ಆದರೆ ಅವರಾಗಿಯೇ ಕರೆದು ಪ್ರೀತಿಯಿಂದ ಬೆನ್ನು ತಟ್ಟಿದರು ಎಂದು ಹರ್ಷ ವ್ಯಕ್ತಪಡಿಸಿದರು.

ಇದು 'ಯೋಗ ವರ್ಷ': ಮೋದಿಯವರು ಮೈಸೂರಿಗೆ ಭೇಟಿ ನೀಡಿ ಯೋಗ ಪ್ರದರ್ಶನ ಯಶಸ್ವಿಗೊಳಿಸಿದ್ದಾರೆ. ಹಾಗಾಗಿ ಮುಂದಿನ ವರ್ಷದವರೆಗೆ ಮೈಸೂರಿನಲ್ಲಿ 'ಯೋಗ ವರ್ಷ' ಎಂದು ಆಚರಿಸಲಿದ್ದೇವೆ. ಇದರ ಭಾಗವಾಗಿ ಮೈಸೂರಿನ ಎಲ್ಲಾ ಯೋಗ ಶಿಕ್ಷಣ ಸಂಸ್ಥೆಗಳು, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸರ್ಕಾರಿ ಕಾಲೇಜು ಜೊತೆಗೂಡಿ 'ಮನೆ ಮನೆಗೆ ಯೋಗ' ಎಂಬ ಪರಿಕಲ್ಪನೆಯಡಿ ಮೈಸೂರಿನ ಎಲ್ಲಾ ಮನೆಗಳಿಗೆ ಯೋಗ ಪರಿಚಯಿಸಿ, ಜೀವನದಲ್ಲಿ ಇದನ್ನು ರೂಢಿಸಿಕೊಳ್ಳಲು ಉತ್ತೇಜನ ನೀಡಲಾಗುವುದು ಎಂದರು.



ಜೊತೆಗೆ ನಗರದ 65 ವಾರ್ಡ್‌ಗಳ ಪೈಕಿ ಒಂದು ವಾರ್ಡ್ ಅನ್ನು ಟೋಟಲ್ ಹೆಲ್ತ್ ಪ್ರೋಗ್ರಾಂ ಅಡಿಯಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಬಗ್ಗೆ ಅರಿವು ಮೂಡಿಸಿ, ವರ್ಷದಲ್ಲಿ ವಾರ್ಡಿನ ಜನತೆಯ ಆರೋಗ್ಯದಲ್ಲಿ ಸುಧಾರಣೆ ತರುವ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗುವುದು. ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ. ಈ ಕಾರ್ಯಕ್ರಮ ಒಂದು ಮಾದರಿಯಾಗಿ ನಡೆಯಲಿದೆ ಎಂದರು.

ಯೋಗ ವಸ್ತು ಪ್ರದರ್ಶನ: ವಸ್ತು ಪ್ರದರ್ಶನ ಆವರಣದಲ್ಲಿ ಯೋಗ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಸುಮಾರು 7 ಕೋಟಿ ರೂ. ವೆಚ್ಚದಲ್ಲಿ ಯೋಗದ ಪ್ರಯೋಜನ ಕುರಿತು ಅರಿವು ಮೂಡಿಸಲು ಆಧುನಿಕ ಸಂವಹನ ತಂತ್ರಜ್ಞಾನಗಳ ಬಳಕೆ ಮೂಲಕ ಏರ್ಪಡಿಸಿರುವ ಈ ಡಿಜಿಟಲ್ ವಸ್ತು ಪ್ರದರ್ಶನ ನಮ್ಮ ದೇಹ ಮತ್ತು ಮನಸ್ಸು ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಲಿದೆ. ಇಂದು ಮತ್ತು ನಾಳೆ (ಜೂ.22) ಬೆಳಗ್ಗೆ 9ರಿಂದ ಸಂಜೆ 6ರವರೆಗೆ ಸಾರ್ವಜನಿಕರು ಭೇಟಿ ನೀಡಬಹುದು ಎಂದು ಮಾಹಿತಿ ನೀಡಿದರು.





ವಸ್ತುಪ್ರದರ್ಶನ ಆವರಣದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಇನ್ನಿತರರು ಉಪಸ್ಥಿತರಿದ್ದಾರೆ.

ಜೂ.30, ಬೃಹತ್ ಉದ್ಯೋಗ ಮೇಳ

ಮೈಸೂರು, ಜೂ.21– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿ ವತಿಯಿಂದ ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಸ್ಥೆಯು ಜೂನ್ 30ರಂದು ಬೆಳಗ್ಗೆ 9 ಗಂಟೆಗೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಕರ್ಜನ್ ಪಾರ್ಕ್ ಹತ್ತಿರವಿರುವ ಮೈಸೂರಿನ ತೋಟಗಾರಿಕಾ ಇಲಾಖೆಯ ಕಚೇರಿ ಆವರಣದಲ್ಲಿರುವ ಡಾ.ಎಂ.ಹೆಚ್. ಮರಿಗೌಡ ಆಡಿಟೋರಿಯಂನಲ್ಲಿ ವಿಕಲಚೇತನರ ಉದ್ಯೋಗ ಮೇಳವನ್ನು ಆಯೋಜಿಸಲಾಗಿದ್ದು, ವಿಕಲಚೇತನ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ವೀರಭದ್ರ ಪಾಟೀಲ್ ಮೊ.ಸಂ :9480812121 placements @samarthanam.org ಸುಭಾಷ್ ಮೊ.ಸಂ: 9449864693 centrehead_banglore@samarthanam.org ವೆಬ್‌ಸೈಟ್ ಸಂಪರ್ಕಿಸಬಹುದು.

ಸೋನಿಯಾ, ರಾಹುಲ್ ಇಡಿ ತನಿಖೆ ಖಂಡಿಸಿ ಹೋರಾಟ

ಶಾಸಕರು, ಪದಾಧಿಕಾರಿಗಳಿಗೆ ಡಿಕೆಶಿ ದೆಹಲಿಗೆ ಬುಲಾವ್

ಬೆಂಗಳೂರು, ಜೂ.21(ಕೆಎಂಶಿ)– ರಾಜಕೀಯ ದ್ವೇಷದಿಂದ ಸುಳ್ಳು ಪ್ರಕರಣ ದಾಖಲಿಸಿ ಕಾಂಗ್ರೆಸ್ ಪಕ್ಷದ ಧ್ವನಿ ಅಡಗಿಸಲು ಬಿಜೆಪಿ ಸರ್ಕಾರ ಮುಂದಾಗಿದ್ದು, ಇದರ ವಿರುದ್ಧ ಹೋರಾಡಲು ದೆಹಲಿಗೆ ಬರುವಂತೆ ಪಕ್ಷದ ಶಾಸಕರು ಹಾಗೂ ಪದಾಧಿಕಾರಿಗಳಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಲಾವ್ ಮಾಡಿದ್ದಾರೆ.



ಕಾಂಗ್ರೆಸ್ ದೆಹಲಿಯಲ್ಲಿ ನಾಳೆ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಇದರಲ್ಲಿ ಪಾಲ್ಗೊಳ್ಳಲು ತಾವು ತಪ್ಪದೇ ಬರುವಂತೆ ಆದೇಶ ಮಾಡಿದ್ದಾರೆ. ಪ್ರತಿಭಟನೆಯಲ್ಲಿ ಭಾಗವಹಿಸಲು ನಿನ್ನೆಯೇ ದೆಹಲಿಗೆ ತೆರಳಿರುವ ಶಿವಕುಮಾರ್ ಮಂಗಳವಾರ ರಾಷ್ಟ್ರೀಯ ನಾಯಕರೊಟ್ಟಿಗೆ ಚರ್ಚೆ ನಡೆಸಿದ ನಂತರ ರಾಜ್ಯದ ಶಾಸಕರು ಮತ್ತು ನೂತನ ಪದಾಧಿಕಾರಿಗಳು ಹಾಗೂ ಕೆಲವು ಮುಖಂಡರಿಗೆ ಆಹ್ವಾನ ನೀಡಿದ್ದಾರೆ.

ಪಕ್ಷದ ಅಧ್ಯಕ್ಷರಾದ ಸೋನಿಯಾ ಗಾಂಧಿ, ಪೂರ್ವಾಧ್ಯಕ್ಷ ರಾಹುಲ್ ಗಾಂಧಿ ಹಾಗೂ ಎಐಸಿಸಿ ಕಚೇರಿ ಮೇಲೆ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳ ಮೂಲಕ ದಾಳಿ ನಡೆಸುತ್ತಿದೆ. ಪಕ್ಷದ ಕಚೇರಿ ನಮಗೆ ದೇವಾಲಯವಿದ್ದಂತೆ. ಆದರೆ ಕೇಂದ್ರ ಸರ್ಕಾರ ಪೊಲೀಸರನ್ನು ಬಳಸಿಕೊಂಡು, ಅಲ್ಲಿಗೂ ಯಾರೂ ಬರಬಾರದು, ಅಲ್ಲಿ ಯಾರೂ ಸೇರುವಂತಿಲ್ಲ ಎಂದು ದಬ್ಬಾಳಿಕೆ ನಡೆಸುತ್ತಿದೆ. ಅದನ್ನು ಖಂಡಿಸಿ ಪ್ರತಿಭಟನೆ ವ್ಯಕ್ತಪಡಿಸಲು ಇಲ್ಲಿಗೆ ಬನ್ನಿ ಎಂದಿದ್ದಾರೆ. ರಾಜಕೀಯದಲ್ಲಿ ದಿನಗಳು ಬದಲಾಗುತ್ತವೆ. ಬಿಜೆಪಿಯವರು ಇದನ್ನು ಅರ್ಥ ಮಾಡಿಕೊಂಡಂತೆ ಕಾಣುತ್ತಿಲ್ಲ. ಏನೇ ಆದರೂ ನಾವು ನಮ್ಮ ನಾಯಕರ ಜತೆ ಇರುತ್ತೇವೆ, ಕಷ್ಟಕಾಲದಲ್ಲಿ ಅವರ ಜತೆ ನಿಂತು, ಅವರಿಗೆ ಧೈರ್ಯ ತುಂಬುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇವೆ ಎಂದರು. ದೆಹಲಿಯಲ್ಲಿ ಸುದ್ದಿಗಾರ ರೊಂದಿಗೆ ಮಾತನಾಡಿದ ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕರು, ಪರಿಷತ್ ಸದಸ್ಯರು ಸೇರಿದಂತೆ ಎಲ್ಲ ಶಾಸಕರನ್ನು ದೆಹಲಿಗೆ ಬರುವಂತೆ ಕರೆ ನೀಡಲಾಗಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ನಮ್ಮ ಸಂಸದರು ಈಗಾಗಲೇ ಬಂದು ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಮಾಡಿದ್ದಾರೆ. ಅವರನ್ನು ಬಂಧಿಸಿ, 3 ದಿನ ದೆಹಲಿಯ ಹೊರಗಿರುವ ಠಾಣೆಯಲ್ಲಿ ಇಟ್ಟಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

> “ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಏಕೈಕ ಸಂಸದರನ್ನು ಪೊಲೀಸರು ಯಾವ ರೀತಿ ನಡೆಸಿಕೊಂಡಿದ್ದಾರೆ ಎಂದು ನೋಡಿದ್ದೇವೆ. ನಮ್ಮ ನಾಯಕರು, ಯುವ ಕಾಂಗ್ರೆಸ್ ಅಧ್ಯಕ್ಷರನ್ನು ಯಾವ ರೀತಿ ನಡೆಸಿಕೊಂಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಯುವ ಕಾಂಗ್ರೆಸ್ ಅಧ್ಯಕ್ಷರು ಹೋರಾಟ ಮಾಡದೇ ಇನ್ಯಾರು ಮಾಡಲು ಸಾಧ್ಯ. ಅವರು ದೇಶದ ಯುವಕರ ಪ್ರತಿನಿಧಿ. ಸರ್ಕಾರ ಇವರೆಲ್ಲರಿಗೂ ಯಾವ ರೀತಿ ಕಿರುಕುಳ ನೀಡುತ್ತಿದೆ ಎಂದು ನಾವು ನೋಡಿದ್ದೇವೆ. ರಾಹುಲ್ ಗಾಂಧಿ ಅವರನ್ನು 40 ತಾಸು ವಿಚಾರಣೆ ಮಾಡುವುದೇನಿತ್ತು. ಇದರಲ್ಲಿ ಷಡ್ಯಂತ್ರವಿದೆ. ನಮ್ಮ ನಾಯಕರು ಎಲ್ಲವನ್ನು ಎದುರಿಸಲು ಸಿದ್ಧರಾಗಿದ್ದಾರೆ. ಇನ್ನು ಸೋನಿಯಾ ಗಾಂಧಿ ಅವರು ನಿನ್ನೆ ರಾತ್ರಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ಅವರನ್ನು 23ರಂದು ವಿಚಾರಣೆಗೆ ಕರೆದಿದ್ದಾರೆ. ವಿಚಾರಣೆಗೆ ನಾವು ಹೆದರುವುದಿಲ್ಲ. ನಾವು ಅದನ್ನು ಗೌರವಿಸುತ್ತೇವೆ. ಆದರೆ ವಿಚಾರಣೆ ಮಾಡುತ್ತಿರುವ ಸಮಯ, ವಿಧಾನ ನೋಡಿದರೆ ಅಧಿಕಾರ ದುರ್ಬಳಕೆ ಮಾಡಿಕೊಂಡು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಗೌರವ ತರುತ್ತಿದ್ದಾರೆ. **–ಡಿಕೆಶಿ**

ಪರಿಷ್ಕೃತ ಪಠ್ಯಪುಸ್ತಕ ವಾಪಸ್ ಪಡೆಯಲು ಮಾಜಿ ಪ್ರಧಾನಿ ದೇವೇಗೌಡರ ಒತ್ತಾಯ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ
- ಬರಗೂರು ರಾಮಚಂದ್ರಪ್ಪ ನೇತೃತ್ವದಲ್ಲಿ ಪರಿಷ್ಕೃತ ಪಠ್ಯಪುಸ್ತಕಗಳನ್ನೇ ಈ ವರ್ಷವೂ ಮುಂದುವರೆಸಲು ಮನವಿ

ಬೆಂಗಳೂರು, ಜೂ.21(ಕೆಎಂಶಿ)– ಪರಿಷ್ಕರಣೆ ಮಾಡಿರುವ ಶಾಲಾ ಪಠ್ಯ ಪುಸ್ತಕಗಳನ್ನು ವಾಪಸ್ ಪಡೆದು ಸಾಹಿತಿ ಬರಗೂರು ರಾಮಚಂದ್ರಪ್ಪ ನೇತೃತ್ವದ 27 ಸಮಿತಿಗಳು ಪರಿಷ್ಕರಿಸಿದ್ದ ಪಠ್ಯ ಪುಸ್ತಕಗಳನ್ನೇ ಈ ವರ್ಷ ಮುಂದುವರೆಸಬೇಕೆಂದು ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ.



ಈ ಸಂಬಂಧ ಮುಖ್ಯಮಂತ್ರಿಗೆ ಪತ್ರ ಬರೆದಿರುವ ಅವರು, ಪಠ್ಯ ಪುಸ್ತಕಗಳಲ್ಲಿನ ಅಸಂಖ್ಯಾತ ದೋಷ ಮತ್ತು ಅನ್ಯಾಯಗಳನ್ನು ಕೇವಲ ತಪ್ಪೋಲೆ ಅಥವಾ ಪ್ರತ್ಯೇಕ ಪುಟಗಳ ಮುದ್ರಣದಿಂದ ಸರಿಪಡಿಸಲು ಸಾಧ್ಯವಿಲ್ಲ. ಹೀಗಾಗಿ ರಾಮಚಂದ್ರಪ್ಪ ನೇತೃತ್ವದ ಸಮಿತಿಯ ಪಠ್ಯ ಪುಸ್ತಕಗಳನ್ನೇ ಈ ವರ್ಷವೂ ಮುಂದುವರೆಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ.

ಜೂ.18ರಂದು ವಿಶ್ವ ಮಾನವ, ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಿದ್ದು, ಸಮಾವೇಶದಲ್ಲಿ ಕೈಗೊಂಡ ಹಕ್ಕೊತ್ತಾಯದ ಅಂಶಗಳನ್ನು ಬೆಂಬಲಿಸಿದ್ದೇನೆ. ಈ ವಿಷಯವಾಗಿ ತಾವು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ. ಸಮಾಜ ವಿಜ್ಞಾನ ಪಠ್ಯ ಪುಸ್ತಕದ ಏಕೀಕರಣ ಪಾಠದಿಂದ ಕುವೆಂಪು ಅವರ ಭಾವಚಿತ್ರವನ್ನು ತೆಗೆದುಹಾಕಲಾಗಿದೆ. ಬಸವಣ್ಣನವರ ಚಳವಳಿಯ ಆಶಯವುಳ್ಳ ಭಾಗಗಳನ್ನು ಕೈಬಿಡಲಾಗಿದೆ. ಸಿದ್ಧಗಂಗಾ ಮತ್ತು ಆದಿಚುಂಚನಗಿರಿ ಶ್ರೀಗಳ ಸೇವೆಯ ವಿವರವನ್ನು ತೆಗೆಯಲಾಗಿದೆ. ಅಂಬೇಡ್ಕರ್ ಅವರಿಗೆ ಸಂವಿಧಾನ ಶಿಲ್ಪಿ ಎಂದಿದ್ದ ವಿಶೇಷಣವನ್ನು ತೆಗೆಯಲಾಗಿದೆ. ಕನಕದಾಸ, ಪುರಂದರದಾಸ, ಷರೀಫರಂತಹ ಮಹಾನ್ ದಾರ್ಶನಿಕರ ಪಠ್ಯಗಳನ್ನೇ ತೆಗೆಯಲಾಗಿದೆ ಎಂದು ದೇವೇಗೌಡರು ಉಲ್ಲೇಖಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ, ಸುರಪುರ ನಾಯಕರ ವಿಷಯಗಳನ್ನು ಕಡಿತಗೊಳಿಸಿದ್ದು, ಡಾ.ಅಂಬೇಡ್ಕರ್ ಮತ್ತು ಕುವೆಂಪು ಅವರು ಸಾರಿದ ಸಾಮಾಜಿಕ ನ್ಯಾಯ, ಸಮಾನತೆ, ಜಾತ್ಯತೀತತೆ ಮತ್ತು ವಿಶ್ವ ಮಾನವತ್ವದ ಪರಿಕಲ್ಪನೆಗಳನ್ನು ಕಡೆಗಣಿಸಿರುವುದು ಪುನರ್ ಪರಿಷ್ಕರಣೆಯಲ್ಲಿ ಎದ್ದು ಕಾಣುತ್ತದೆ ಎಂದಿದ್ದಾರೆ.

ಗೌಡರ ಸಲಹೆ ಪರಿಗಣನೆ: ಸಿಎಂ

ಬೆಂಗಳೂರು: ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು ಮಾಜಿ ಪ್ರಧಾನಿ ದೇವೇಗೌಡರು ನೀಡಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಆರ್‌ಟಿ ನಗರದ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಪ್ರಧಾನಿಗಳು ಬರೆದಿರುವ ಪತ್ರದ ವಿವರಗಳ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳ ಜತೆ ಚರ್ಚೆ ಮಾಡುತ್ತೇನೆ. ಮಾಜಿ ಪ್ರಧಾನಿಗಳು ನಮಗೆಲ್ಲರಿಗೂ ಹಿರಿಯರು. ಅವರು ಪಠ್ಯಕ್ರಮದ ಬಗ್ಗೆ ಪತ್ರ ಬರೆದಿದ್ದಾರೆ. ನಾನು ನಾಳೆ (ಬುಧವಾರ) ಶಿಕ್ಷಣ ಇಲಾಖೆ ಮುಖ್ಯಸ್ಥರ ಜತೆ ಚರ್ಚಿಸುತ್ತೇನೆ ಎಂದರು.



ದಕ್ಷಿಣ ಪದವೀಧರ ಕ್ಷೇತ್ರದಿಂದ ಪರಿಷತ್‌ಗೆ ಆಯ್ಕೆಯಾದ ಮಧು ಜಿ. ಮಾದೇಗೌಡರನ್ನು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಗೌರವಾಧ್ಯಕ್ಷ ಕುಮಾರ್‌ಗೌಡ, ಉಪಾಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಚೇತನ್‌ಕುಮಾರ್, ನಿರ್ದೇಶಕರಾದ ಗುರುರಾಜ್, ಲೋಕೇಶ್, ರವಿ, ಗಿರೀಶ್, ಸುಶೀಲ ನಂಜಪ್ಪ, ತಾಲೂಕು ಒಕ್ಕಲಿಗರ ಸಂಘದ ಜಯರಾಮು, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಜೆ.ಯೋಗೇಶ್, ಮಹದೇಶ್, ಶಿವಪ್ಪ ಇನ್ನಿತರರು ಉಪಸ್ಥಿತರಿದ್ದರು.

ಮರಳಲಿದೆ ನಗರದ ಸಹಜ ಸೌಂದರ್ಯ

ಪ್ರಧಾನಿ ಭೇಟಿ ಹಿನ್ನೆಲೆ; ರಸ್ತೆಗಳಲ್ಲಿ ಅಳವಡಿಸಿದ್ದ ಬಿಜೆಪಿ ಬಂಟಿಂಗ್ಸ್ ತೆರವು ಆರಂಭ

ಮೈಸೂರು,ಜೂ.21(ಪಿಎಂ)– ಯೋಗ ದಿನಾಚರಣೆ ಅಂಗವಾಗಿ ಪ್ರಧಾನಿ ಮೋದಿಯವರ ಮೈಸೂರು ಭೇಟಿ ಹಿನ್ನೆಲೆಯಲ್ಲಿ ನಗರದ ಹೃದಯಭಾಗವೂ ಸೇರಿದಂತೆ ಹೊರವಲಯದ ಮುಖ್ಯ ರಸ್ತೆಗಳಲ್ಲಿ ಅಳವಡಿಸಿದ್ದ ಬಿಜೆಪಿಯ ಬಂಟಿಂಗ್ಸ್, ಧ್ವಜ ಮತ್ತು ಬ್ಯಾನರ್‌ಗಳ ತೆರವು ಕಾರ್ಯಾಚರಣೆ ಆರಂಭಗೊಂಡಿದೆ.

ಮಂಗಳವಾರ ಪ್ರಧಾನಿಯವರು ಮೈಸೂರಿನಿಂದ ನಿರ್ಗಮಿಸುತ್ತಿದ್ದಂತೆ ತೆರವು ಕಾರ್ಯಾಚರಣೆ ಆರಂಭಿಸಿ, ನಗರದ ಸಹಜ ಸೌಂದರ್ಯ ಮರಳುವಂತೆ ಮಾಡಲಾಗುತ್ತಿದೆ. ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಸದ ಪ್ರತಾಪ್ ಸಿಂಹ, ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಮೈಸೂರು ಭೇಟಿ ನಿಮ್ಮೆಲ್ಲರ ಸಹಕಾರದಿಂದ ಅಭೂತಪೂರ್ವ ಯಶಸ್ಸು ಕಂಡಿದೆ ಎಂದು ಸಾರ್ವಜನಿಕರಿಗೆ ಧನ್ಯವಾದ ತಿಳಿಸಿದ್ದಾರೆ.

ಪ್ರಧಾನಿಯವರ ಭೇಟಿ ಹಿನ್ನೆಲೆಯಲ್ಲಿ ರಸ್ತೆ ಮತ್ತು ವೃತ್ತಗಳಲ್ಲಿ ಅಳವಡಿಸಿದ್ದ ಪಕ್ಷದ ಬಂಟಿಂಗ್ಸ್, ಬ್ಯಾನರ್‌ಗಳ ತೆರವು ಕಾರ್ಯ ಆರಂಭಿಸಲಾಗಿದೆ. ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಅರಮನೆವರೆಗೆ, ಇಲವಾಲದಿಂದ ನಗರದ ಹೃದಯ ಭಾಗದವರೆಗೆ ಹಾಗೂ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಅಳವಡಿಸಿದ್ದ ಬಂಟಿಂಗ್ಸ್ ಮತ್ತು ಬ್ಯಾನರ್‌ಗಳನ್ನು ಕಾರ್ಯಕ್ರಮ ಪೂರ್ಣಗೊಂಡ ಕೂಡಲೇ ತೆರವು ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ನಮಗೆ ಹಾಗೂ ನಮ್ಮ ಮುಂದಿನ ಪೀಳಿಗೆಗೆ ಮೈಸೂರನ್ನು ಸ್ವಚ್ಛವಾಗಿಟ್ಟುಕೊಳ್ಳಲು ನಾವು ಕೈಜೋಡಿಸಿ ಪ್ರಯತ್ನಿಸೋಣ ಎಂದು ಸಂಸದರು ಕೋರಿದ್ದಾರೆ.



ಛಾಯಾಚಿತ್ರ ಪ್ರದರ್ಶನ; ಯೋಗದ ರೋಚಕತೆ ಅನಾವರಣ

ಮೈಸೂರು,ಜೂ.21(ಪಿಎಂ)– ಪುಟಾಣಿಗಳಿಂದ ಹಿಡಿದು 50ರ ವಯೋಮಾನದವರೆಗಿನ ಯೋಗ ಸಾಧಕರ ಯೋಗಾಸನ ಭಂಗಿಗಳ ಛಾಯಾಚಿತ್ರ ಪ್ರದರ್ಶನ ನೋಡುಗರನ್ನು ರೋಮಾಂಚನಗೊಳಿಸಿತು.

ರಂಗಾಯಣದ ಭೂಮಿಗೀತ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ರಂಗಾಯಣ, ನವಾಯು ಕೇರ್ ಸೆಂಟರ್ ಹಾಗೂ ಹಿಮಾಲಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಯೋಗ ಛಾಯಾಚಿತ್ರ ಸ್ಪರ್ಧೆ ಮತ್ತು ಪ್ರದರ್ಶನದಲ್ಲಿ ಇಂತಹ ರೋಚಕ ಯೋಗ ಭಂಗಿಗಳ ಛಾಯಾಚಿತ್ರಗಳು ನೋಡುಗರ ಮನ ಸೆಳೆದವು.

ಉದ್ಘಾಟನೆ ನೆರವೇರಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಯೋಗಾಭ್ಯಾಸದಿಂದ ಆರೋಗ್ಯಯುತ ಜೀವನ ನಡೆಸಬಹುದಲ್ಲದೆ, ಆರೋಗ್ಯಕರ ಅಂತ್ಯವನ್ನೂ ಕಾಣಬಹುದು. ಪ್ರತಿಯೊಬ್ಬರೂ ಯೋಗವನ್ನು ಅಭ್ಯಾಸ ಮಾಡಿದರೆ ಬದುಕಿನಲ್ಲಿ ಸಾರ್ಥಕತೆ ದೊರೆಯಲಿದೆ. ಯೋಗವು ನಮ್ಮನ್ನು ಶಿಸ್ತಿನ ವ್ಯಕ್ತಿಯಾಗಿ ರೂಪಿಸಿ, ಸಕಾರಾತ್ಮಕ ಭಾವ ಬೆಳೆಯುವಂತೆ ಮಾಡುತ್ತದೆ ಎಂದು ಹೇಳಿದರು.

ವಿವೇಕಾನಂದ ಯೋಗ ಸಂಶೋಧನಾ ಕೇಂದ್ರದ ಯೋಗ ಶಿಕ್ಷಕ ಡಾ. ಪಿ.ಎನ್. ಗಣೇಶ್‌ಕುಮಾರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಮಧು ಮೇಹ ತಜ್ಞ ಡಾ.ರೇಣುಕಾ ಪ್ರಸಾದ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ. ನಾಗೇಂದ್ರ ಬಾಬು ಮತ್ತಿತರರು ಹಾಜರಿದ್ದರು.



ರಂಗಾಯಣದ ಭೂಮಿಗೀತ ಆವರಣದಲ್ಲಿ ಯೋಗಪಟುಗಳ ಯೋಗಾಭ್ಯಾಸದ ಛಾಯಾಚಿತ್ರಗಳನ್ನು ವೀಕ್ಷಿಸುತ್ತಿರುವ ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಶಾರದಾ ವಿಲಾಸ ಕಾನೂನು ಕಾಲೇಜಿನಲ್ಲಿ ಮೂಟ್‌ಕ್ಲಬ್‌ನ ಕಾರ್ಯಚಟುವಟಿಕೆ ಉದ್ಘಾಟನೆ

ಮೈಸೂರು,ಜೂ.21–ಶಾರದಾ ವಿಲಾಸ ಕಾನೂನು ಕಾಲೇಜಿನಲ್ಲಿ 2022–23ನೇ ಸಾಲಿನ ಮೂಟ್‌ಕ್ಲಬ್‌ನ ಕಾರ್ಯ ಚಟುವಟಿಕೆಗಳ ಉದ್ಘಾಟನೆ ಮತ್ತು ಮೂಟಿಂಗ್‌ನ ಕಾರ್ಯಾಗಾರವನ್ನು ವೆಂಕಟ ಕೃಷ್ಣಯ್ಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.




ಮುಖ್ಯ ಅತಿಥಿಗಳಾಗಿದ್ದ ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಜ್ಯೋತಿ ಬೆಳಗಿಸಿ, ವಿದ್ಯಾರ್ಥಿಗಳು ಕಾರ್ಯಚಟುವಟಿಕೆ ಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವೃತ್ತಿಪರರಾಗಿ ಪರಿಣತಿ ಹೊಂದಬೇಕೆಂದು ನುಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಶಾರದಾ ವಿಲಾಸ ಕಾನೂನು ಕಾಲೇಜಿನ ಶೈಕ್ಷಣಿಕ ಸಲಹೆಗಾರ ಡಾ.ಎಂ.ಎನ್. ಭೀಮೇಶ್ ಮಾತನಾಡಿ, ವಿದ್ಯಾರ್ಥಿಗಳು ಅಣಕು ನ್ಯಾಯಾಲಯದಲ್ಲಿ ಭಾಗವಹಿಸಿ, ಮುಂದೆ ನ್ಯಾಯಾವಾದಿಗಳಾದಾಗ ಹೇಗೆ ಕಾರ್ಯ ಚಟುವಟಿಕೆಗಳನ್ನು, ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬಹುದೆಂದು ತಿಳಿಸಿಕೊಟ್ಟರು.


ವೇದಿಕೆಯಲ್ಲಿ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಪಿ.ಕೆ.ವಿನೀತಾ ಉಪಸ್ಥಿತರಿದ್ದು, ಅತಿಥಿಗಳನ್ನು ಹಾಗೂ ಕಾರ್ಯಕ್ರಮದ ಬಗ್ಗೆ ಪರಿಚಯಿಸಿದರು. ವಿದ್ಯಾರ್ಥಿ ವಿನಾಯಕ ಪ್ರಾರ್ಥನೆ ಸಲ್ಲಿಸಿದರು. ಕಾನೂನು ಸಹಾಯಕ ಪ್ರಾಧ್ಯಾಪಕ ಹಾಗೂ ಮೂಟ್‌ಕ್ಲಬ್‌ನ ಸಂಚಾಲಕಿ ವಾಣಿ ನಿರೂಪಿಸಿದರೆ, ಶಾರದಾ ವಿಲಾಸ ಕಾನೂನು ಕಾಲೇಜಿನ ಕಾನೂನು ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಭಾಗ್ಯಮ್ಮ ವಂದಿಸಿದರು.

ಕೆ.ಎಸ್.ಶಶಾಂಕಗೆ ಪಿಎಚ್.ಡಿ



ಮೈಸೂರು, ಜೂ.21 –ಡಾ. ಹೆಚ್.ಎಂ. ವರದರಾಜು ಅವರ ಮಾರ್ಗದರ್ಶನದಲ್ಲಿ ಕೆ.ಎಸ್.ಶಶಾಂಕ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.06.2022 ಬುಧವಾರ, ಮಳೆ ನಕ್ಷತ್ರ : ಆರ್ದ್ರೆ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ನವಮೀ, ನಕ್ಷತ್ರ : ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ (ಆರ್‌ಎಸ್‌ಹೆಚ್‌ಪಿ), ಚೈಲ್ಡ್ ಲೈನ್–1098, ಕರ್ನಾಟಕ ಪಬ್ಲಿಕ್ ಶಾಲೆ:** ವಿಶ್ವ ಬಾಲಕಾರ್ಮಿಕರ ಪದ್ಧತಿ ವಿರೋಧಿ ದಿನ, ಜಾಥಾ ಉದ್ಘಾಟನೆ: ಕಾಮಿಕ ಇಲಾಖೆ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ ಸ್ಥಳ: ಕರ್ನಾಟಕ ಪಬ್ಲಿಕ್ ಶಾಲೆ ಆವರಣ, ರಾಜೇಂದ್ರನಗರ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾ ಸಂಘ:** ಪೌರಕಾರ್ಮಿಕರ ಖಾಯಂಗೆ ಆಗ್ರಹಿಸಿ ಹೋರಾಟ ನಡೆಸುವ ಬಗ್ಗೆ ಸಭೆ ಸ್ಥಳ: ಜಲದರ್ಶಿನಿ ಅತಿಥಿ ಗೃಹ, ಬೆಳಗ್ಗೆ 11ಕ್ಕೆ

■ **ಸರ್ಕಾರಿ ಪ್ರೌಢಶಾಲೆ, ಒಂಟಿಕೊಪ್ಪಲು, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಮುಖ್ಯ ಶಿಕ್ಷಕರಾದ ಆರ್. ಪುಷ್ಪ, ಅಭಿನಂದನಾ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಂಸ್ಕೃತಿ ಪೋಷಕ ರಘುರಾಂ ವಾಜಪೇಯಿ, ಡಾ. ವಿಜಿ, ಮುಖ್ಯ ಅತಿಥಿಗಳು : ಕಾವೇರಿ ಬಳಗದ ಅಧ್ಯಕ್ಷೆ ಎನ್.ಕೆ.ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಒಂಟಿಕೊಪ್ಪಲು, ಮಧ್ಯಾಹ್ನ 2ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್:** ಸಾಧಕರಿಗೆ ಧ್ವನಿಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಕಾಲೇಜು ಶಿಕ್ಷಣ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಎಸ್‌ವಿಐಇ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಪ್ರಭಾಕರ ಶೆಟ್ಟಿ, ಜಯದೇವರಾಜೇ ಅರಸ್, ಕೊಳ್ಳೆಬೈಲ್ ಗಣೇಶ್ ನಾರಾಯಣ್ ಹೆಗ್ಡೆ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಡಾ. ಬೆ.ನಾ. ವಿಜಯೇಂದ್ರಚಾರ್ಯರಿಂದ 'ಶ್ರೀ ಮಹಾಭಾರತದ ಉದ್ಯೋಗ ಪರ್ವ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರೋಟರಿ ಐವರಿ ಸಿಟಿ ಮೈಸೂರು, ಇಮ್ಯಾಜಿನ್ ರೋಟರಿ :** ರೋ. ಎಂ.ಎನ್. ರಮೇಶ್ ಮತ್ತು ತಂಡದ ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು : ಡಾ.ರವಿ ವಾಡ್ಲಮನಿ, ಎಸ್. ಬಾಲಚಂದರ್, ಎಸ್. ರಾಮಚಂದ್ರ ರಾಜೇ ಅರಸ್, ಸ್ಥಳ: ಹೋಟೆಲ್ ರುಚಿ ದಿ ಪ್ರಿನ್ಸ್, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ –ಕೆ.ಬಿ.ಸುನೀತಾ ಆಚಾರ್ಯ ಮತ್ತು ಬಿ.ಶ್ರೀರಾಂಭಟ್, 7.15 ಮಂಗಳ ಮಾರ್ಗದರ್ಶಿ 2022, ಪ್ರಾಯೋಜಕರು ಮಂಗಳ ಶಿಕ್ಷಣ ಸಂಸ್ಥೆಗಳು ಮಂಗಳೂರು, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ಬಡೇ ಗ್ಲಾಂ ಅಲಿಖಾನ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ರೂಪ ಮತ್ತು ದೀಪ, ವಿರೂಪಾಕ್ಷ ವಂದಲಿ, 12.45ಲಾಕ್‌ಡೌನ್ ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, "ಯಾರನ್ನು ದೂರಲಿ", ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು ಮಂಗಳ ಮುಖಿ ಹಾಗೂ ಕವಯಿತ್ರಿ ಚಾಂದಿನಿ, ಪ್ರಸ್ತುತಿ– ಶಫಿಯಾ ಫರಿನ್ – ಸಂಶೋಧಕರು, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, ಸಮಗ್ರ ಕೃಷಿಯಲ್ಲಿ ಸಾಧನೆಯ ಸಂತಸಾ ಕುರಿತು ಹೆಚ್.ಜಿ. ಶಿವಕುಮಾರ್ ಅವರೊಂದಿಗೆ ಸಂದರ್ಶನ, 9.05 ಕ್ಷಿತಿಜ–Literacy ಗುರು, ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳಿಹಾಡು–ಭಾಗವಹಿಸುವವರು ಮಳವಳ್ಳಿ ಕೀರ್ತನಗ್ರಾದ ಚಿಕ್ಕಮಾದಮ್ಮ ಮತ್ತು ತಂಡ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 22 ಬುಧವಾರ 2022

ಸಂಪುಟ: 43 | ಸಂಚಿಕೆ: 67 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನಮೋ ಯೋಗ



ಅಂತಾರಾಷ್ಟ್ರೀಯ ಯೋಗ ದಿನದಂದು ಐತಿಹಾಸಿಕ ಮೈಸೂರು ಅಂಬಾವಿಲಾಸ ಅರಮನೆ ಅಂಗಳದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಾವಿರಾರು ಜನರೊಂದಿಗೆ ಯೋಗ ಪ್ರದರ್ಶಿಸಿದರು. (ಚಿತ್ರ: ಲಕ್ಷ್ಮಿನಾರಾಯಣ ಯಾದವ್)

ಮೈಸೂರು,ಜೂ.21(ಎಂಟಿವೈ)–ನಸುಕಿನ ಜಾವ ಚುಮು ಚುಮು ಚಳಿ, ತಂಗಾಳಿಯ ನಡುವೆ ಮೈಸೂರು ಅರಮನೆ ಆವರಣದಲ್ಲಿ ಯೋಗದ ಸಂಭ್ರಮ ಕಳೆಗಟ್ಟಿತ್ತು. '8ನೇ ಅಂತಾರಾಷ್ಟ್ರೀಯ ಯೋಗ ದಿನ'ದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಯಶಸ್ವಿ ಯೋಗ ಪ್ರದರ್ಶನ ದಾಖಲೆ ಪುಟ ಸೇರಿತು.

ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವುದರೊಂದಿಗೆ ಅತೀ ಮಹತ್ವ ಪಡೆದುಕೊಂಡಿತು. ಅದಕ್ಕಾಗಿ ವಿವಿಧ ಶಾಲಾ–ಕಾಲೇಜು, ಯೋಗ ಸಂಸ್ಥೆಗಳು ಜೊತೆಗೆ ಹಲವಾರು ಸ್ವಯಂ ಸಂಸ್ಥೆಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅರಮನೆ ಆವರಣದಲ್ಲಿ ನಡೆಯುವ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಆಕಾಂಕ್ಷೆ ಹೊಂದಿದ್ದರು. ಆದರೆ ಭದ್ರತೆಯ ದೃಷ್ಟಿಯಿಂದ 12 ಸಾವಿರ ಸಾರ್ವಜನಿಕರು ಹಾಗೂ 3 ಸಾವಿರ ಗಣ್ಯರು, ಒಟ್ಟು 15 ಸಾವಿರ ಮಂದಿ ಯೋಗಾಸನ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಅರಮನೆ ಆವರಣ ಮಾತ್ರವಲ್ಲದೆ, ಮೈಸೂರು ನಗರದ ಹೃದಯಭಾಗದಲ್ಲಿ ಯೋಗ ಸಂಭ್ರಮ ಮನೆ ಮಾಡಿತ್ತು.

ಮುಂಜಾನೆಯಿಂದಲೇ ಯೋಗ ವೈಭವ: ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಯೋಗ ಪ್ರದರ್ಶನಕ್ಕೆ ಹೆಸರು ನೋಂದಾಯಿಸಿದವರು ತಂಡೋಪತಂಡದಲ್ಲಿ ಮುಂಜಾನೆ 2 ಗಂಟೆಯಿಂದಲೇ ಮೈಸೂರು ಅರಮನೆಯತ್ತ ಧಾವಿಸುತ್ತಿದ್ದ ದೃಶ್ಯ ಕಂಡು ಬಂದಿತು.

ಅಚ್ಚುಕಟ್ಟಾದ ವ್ಯವಸ್ಥೆ: ಅರಮನೆ ಆವರಣದಲ್ಲಿ 53 ಬ್ಲಾಕ್‌ಗಳ ವ್ಯವಸ್ಥೆ ಮಾಡಿ, ನಿಗದಿತ ಸ್ಥಳದಲ್ಲೇ ಯೋಗ ಪ್ರದರ್ಶನಕ್ಕೆ ಸೂಚಿಸಲಾಗಿತ್ತು. ಅಲ್ಲದೆ, ಎಲ್ಲೆಂದರಲ್ಲಿ ಓಡಾಡಿ ಮುಜುಗರಕ್ಕೆ ಅವಕಾಶವಾಗದಂತೆ ಬ್ಯಾರಿಕೇಡ್ ಅಳವಡಿಸಲಾಗಿತ್ತು. ಇದರಿಂದ ಪ್ರಧಾನಿ ಮೋದಿ ▶ 8ನೇ ಪುಟಕ್ಕೆ

ಯೋಗದಿಂದ ಶಾಂತಿ, ಸಮಾಧಾನ

- **ಪ್ರಧಾನಿ ಮೋದಿ ಯೋಗ ದಿನಾಚರಣೆ ಸಂದೇಶ**
- **ಅರಮನೆ ಆವರಣದಲ್ಲಿ ಜನರ ನಡುವೆ ಪ್ರಧಾನಿ ಯೋಗ ಪ್ರದರ್ಶನ**
- **ದಾಖಲೆ ಪುಟ ಸೇರಿದ ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನ**

ಮೈಸೂರು,ಜೂ.21 (ಆರ್‌ಕೆ)– ಯೋಗವು ಶಾಂತಿ, ಸಮಾಧಾನ ಮತ್ತು ನೆಮ್ಮದಿ ನೀಡುತ್ತದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರಿನ ಅರಮನೆ ಆವರಣದಲ್ಲಿ ಮಂಗಳವಾರ ನಡೆದ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಯೋಗವು ರಾಷ್ಟ್ರಕ್ಕೆ ಮಾತ್ರವಲ್ಲ ವಿಶ್ವಕ್ಕೆ, ಅಲ್ಲದೆ ಇಡೀ ಮನುಕುಲಕ್ಕೇ ಶಾಂತಿಯನ್ನು ಕಲ್ಪಿಸುತ್ತದೆ ಎಂದರು.

ಈ ಹಿಂದೆ ಆಧ್ಯಾತ್ಮಿಕ ಮತ್ತು ಸಾಂಪ್ರದಾಯಿಕ ಸ್ಥಳಗಳಲ್ಲಿ ಮಾತ್ರ ಕಂಡು ಬರುತ್ತಿದ್ದ ಯೋಗ ಈಗ ಜಗತ್ತಿನ ಮೂಲೆ ಮೂಲೆಗಳ ತಲುಪಿದೆ. ಅದು ವಿಶ್ವಕರ್ಮವೂ ಆಗಿದೆ. ಯೋಗವು ನಿರ್ದಿಷ್ಟ ಸ್ಥಳ, ಸಮಯಕ್ಕೆ ಸೀಮಿತವಾಗಿರದೆ, ಸರ್ವಕಾಲಕ್ಕೂ ಸರ್ವರೂ ಅಳವಡಿಸಿಕೊಳ್ಳುವ ನಿತ್ಯದ ಕೆಲಸವಾಗಿದೆ ಎಂದು ಯೋಗದ ಮಹತ್ವವನ್ನು ತಿಳಿಸಿದರು.

ಅದರ ಮಹತ್ವ ತಿಳಿದ ನಂತರ ಈಗ ಯೋಗವು ವಿಶ್ವಾದ್ಯಂತ ಪ್ರಾಮುಖ್ಯತೆ ಪಡೆದಿದೆ. ಅದು ಜೀವನದ ಒಂದು ಭಾಗ ಮಾತ್ರವಲ್ಲ ಜೀವನದ ಮಾರ್ಗವೂ ಆಗಿದೆ. ಆದ್ದರಿಂದ ನಾವು ಆರೋಗ್ಯ, ಸಂತೋಷ ಹಾಗೂ ಶಾಂತಿಗಾಗಿ ಯೋಗ ದಿನ ಆಚರಿಸುತ್ತಿದ್ದೇವೆ ಎಂದ ಅವರು, ಮೈಸೂರಿನಂತಹ ಭಾರತದ ಆಧ್ಯಾತ್ಮಿಕ ಕೇಂದ್ರಗಳಲ್ಲಿ ಶತಮಾನಗಳಿಂದ ಪ್ರಚಲಿತವಾಗಿದ್ದ ಯೋಗವು ಈಗ ವಿಶ್ವದ ಆರೋಗ್ಯ ಸ್ವಾಸ್ಥ್ಯವಾಗಿದೆ ಎಂದು ಪ್ರಧಾನಿ ಹೇಳಿದರು.

ಮಹಾಮಾರಿ ಕೊರೊನಾದಂತಹ ಪರಿಸ್ಥಿತಿಯನ್ನೂ 2 ವರ್ಷಗಳಿಂದ ಸಮರ್ಥವಾಗಿ ಎದುರಿಸಲು ಸಾಧ್ಯವಾಗಿದ್ದೂ ಸಹ ಯೋಗಾಭ್ಯಾಸದಿಂದಲೇ. ಯೋಗ ಈಗ ವಿಶ್ವದ ಹಬ್ಬವಾಗಿದೆ. ಇದು ಕೇವಲ ಒಬ್ಬ ವ್ಯಕ್ತಿಗಲ್ಲದೇ ಇಡೀ ಮನುಕುಲಕ್ಕೇ ಸಹಕಾರಿಯಾಗಿದೆ. ಅದೇ ಕಾರಣಕ್ಕಾಗಿ ಈ ವರ್ಷ **ಮಾನವೀಯತೆಗಾಗಿ ಯೋಗ** ಧ್ಯೇಯದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಪ್ರಧಾನಿಗಳು ನುಡಿದರು.

ಭಾರತ ಸ್ವಾತಂತ್ರ್ಯ ಗಳಿಸಿ 75 ವರ್ಷ ಪೂರೈಸಿದ ಅಮೃತ ಮಹೋತ್ಸವ ಆಚರಣೆಯೊಂದಿಗೆ ಯೋಗ ದಿನ ಆಚರಿಸುತ್ತಿರುವುದನ್ನು ಪ್ರಪಂಚದಾದ್ಯಂತ ಎಲ್ಲಾ ರಾಷ್ಟ್ರಗಳೂ ಒಪ್ಪಿ ಕೊಂಡು ಆಚರಿಸುತ್ತಿರುವುದು ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ನೀಡಿದಂತಾಗಿದೆ. ಅದೇ ಕಾರಣಕ್ಕೆ ▶ 8ನೇ ಪುಟಕ್ಕೆ



ಮೋದಿ ಪರಿಪಕ್ವ ಯೋಗ ಪ್ರದರ್ಶನ

ಮೈಸೂರು, ಜೂ.21 (ಎಂಟಿವೈ)– ಮೈಸೂರು ಅರಮನೆ ಆವರಣದಲ್ಲಿ ಮಂಗಳವಾರ ನಡೆದ ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಕೆಲವು ಕ್ಲಿಷ್ಟಕರ ಆಸನಗಳೂ ಸೇರಿದಂತೆ ನುರಿತ ಯೋಗಪಟುಗಳಿಗೆ ಸರಿಸಮಾನವಾಗಿ 45 ನಿಮಿಷ ಯೋಗಾಸನ ಮಾಡಿ, ಎಲ್ಲರ ಗಮನ ಸೆಳೆದರು.

ವೇದಿಕೆ ಕಾರ್ಯಕ್ರಮದಲ್ಲಿ ಭಾಷಣ ಮುಗಿಸಿದ ಬಳಿಕ ನೇರವಾಗಿ ಯೋಗಪಟುಗಳ ಮಧ್ಯೆ ತಮಗೆ ಮೀಸಲಾಗಿದ್ದ ಮ್ಯಾಟ್ ಮೇಲೆ ಆಸೀನರಾಗಿ ಯೋಗ ಪ್ರದರ್ಶನಕ್ಕೆ ಸಜ್ಜಾದರು. ▶ 8ನೇ ಪುಟಕ್ಕೆ

> “ವಿಶ್ವದ 79 ರಾಷ್ಟ್ರಗಳು ಮತ್ತು ಯುನೈಟೆಡ್ ನೇಷನ್ಸ್‌ನಲ್ಲಿ ಗಾರ್ಡಿಯನ್ ಯೋಗ ರಿಂಗ್ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಿ, ಭಾರತೀಯ ಯೋಗದ ಸತ್ವ ಪ್ರದರ್ಶಿಸುತ್ತಿರುವುದು ಮತ್ತೊಂದು ವಿಶೇಷ. ಪೂರ್ವದಿಂದ ಪಶ್ಚಿಮಕ್ಕೆ ಸಾಗುವ ಸೂರ್ಯನನ್ನು ವಿಶ್ವದ ಯಾವುದೇ ಸ್ಥಳದಲ್ಲಿ ನಿಂತು ನೋಡಿದರೂ ಕಾಣಿಸುವ ಆಗೆ ಯೋಗವು ಎಲ್ಲಾ ರಾಷ್ಟ್ರಗಳಲ್ಲೂ ಪ್ರದರ್ಶನವಾಗುತ್ತಿದೆ. ಯೋಗವು ಆರೋಗ್ಯ, ಸಹಕಾರ, ನೆಮ್ಮದಿಗೆ ಸ್ಫೂರ್ತಿ ನೀಡುತ್ತದೆ. ಕೆಲ ನಿಮಿಷ ಧ್ಯಾನ ಮಾಡಿದರೆ ನಮ್ಮ ಒತ್ತಡಗಳು ಮಾಯವಾಗುತ್ತವೆ. ಯೋಗವನ್ನು ಹೆಚ್ಚುವರಿ ಚಟುವಟಿಕೆ ಎಂದು ಭಾವಿಸಬೇಕಿಲ್ಲ. ಅದನ್ನು ಮೈಗೂಡಿಸಿಕೊಂಡರೆ ಜೀವನದ ಒಂದು ಭಾಗವಾಗಿ ಮಾತ್ರ ಅಲ್ಲ ಅದು ಜೀವನ ದಾರಿಯಾಗಲಿದೆ.
>
> –ನರೇಂದ್ರ ಮೋದಿ, ಪ್ರಧಾನ ಮಂತ್ರಿ.

ನಕ್ಕರೆ ಅದೇ ಸ್ವರ್ಗ

ಆತ : "ಐ ಲವ್ ಟೂ ಮಚ್"
ಆಕೆ : "ಐ ಲವ್ ಟೂ... ಆದರೆ ವರಕ್ಷಿಣೆ ವಿಷಯ ಎತ್ತಬಾರದು ಆಯ್ತಾ?"
ಆತ : ಅಯ್ಯೋ? ವರದಕ್ಷಿಣೆ ವಿಷಯನಾ,
ಒಟ್ಟಾರೆ ಮದ್ವೆ ವಿಷಯಾನೇ ಎತ್ತೋಲ್ಲ ಬಿಡು!"

ಮೈಸೂರು ಮಿತ್ರ
ಬುಧವಾರ, 22 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಳ್ಳೆಯ ಸಮಾಜ ಕಾಣಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿಗೆ ಅನ್ಯರ ಒಳಿತಿಗಾಗಿ, ಆ ಬಳಿಕ ತನ್ನ ಒಳಿತಿಗಾಗಿ ದುಡಿಯುವ ಮನೋಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ – ಡಾ. ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ

ನಿಮ್ಮ ಪತ್ರಗಳು

ಶೈಕ್ಷಣಿಕ ವರ್ಷ ಪ್ರಾರಂಭವಾದರೂ ಮಕ್ಕಳಿಗೆ ಸಿಗದ ಪುಸ್ತಕಗಳು

ಮಾನ್ಯರೆ,

ಶೈಕ್ಷಣಿಕ ವರ್ಷ ಆರಂಭವಾದರೂ ಪರಿಷ್ಕೃತ ಪಠ್ಯ ಪುಸ್ತಕಗಳು ಮಕ್ಕಳಿಗೆ ಸಿಗದೆ ಪರದಾಡುವಂತಾಗಿದೆ. ಅಧಿಕಾರಿಗಳು ಹೇಳುತ್ತಾರೆ ಶೇ. 85ರಷ್ಟು ಪಠ್ಯ ಪುಸ್ತಕಗಳ ಮುದ್ರಣ ಮತ್ತು ಶೇ. 75 ರಷ್ಟು ಸರಬರಾಜು ಕಾರ್ಯ ಮುಗಿದಿದೆ ಎಂದು. ಪರಿಷ್ಕರಣೆ ಆಗಿರುವ ಪಠ್ಯ ಪುಸ್ತಕಗಳು ನಮಗೆ ತಲುಪಿಲ್ಲ ಎಂದು ಶಿಕ್ಷಕರು ಹೇಳುತ್ತಿದ್ದಾರೆ. ಇದನ್ನು ನೋಡಿದರೆ ಪಠ್ಯಪುಸ್ತಕ ಮುದ್ರಣ ಮತ್ತು ಸರಬರಾಜು ಗೊಂದಲಮಯವಾದಂತಿದೆ.

ಪಠ್ಯಪುಸ್ತಕಗಳ ಪರಿಷ್ಕೃತ ಕಾರ್ಯಗಳು ಮತ್ತು ಅಗತ್ಯವಿರುವಷ್ಟು ಪಠ್ಯ ಪುಸ್ತಕಗಳ ಮುದ್ರಣ ಕಾರ್ಯ, ಇವೆಲ್ಲವೂ ಪೂರ್ವಭಾವಿಯಾಗಿ, ಬೇಸಿಗೆ ರಜಾ ಸಮಯದಲ್ಲೇ ಮಾಡಿಕೊಳ್ಳಬೇಕು. ಏನಿದ್ದರೂ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಹೊತ್ತಿಗೆ, ಪಠ್ಯ ಪುಸ್ತಕಗಳು ಸಿದ್ಧವಾಗಿರಬೇಕು ಮತ್ತು ಮುಂಚಿತವಾಗಿಯೇ ಶಾಲೆಗೆ ತಲುಪಿರಬೇಕು.

ಸರಿ ಸುಮಾರು ಎರಡೂವರೆ ತಿಂಗಳಿನಿಂದಲೂ ಪಠ್ಯ ಪುಸ್ತಕದಲ್ಲಿ ಏನೇನು ಬದಲಾವಣೆ ತರಬೇಕು. ಪರಿಷ್ಕರಣೆ ಯಾವ ರೀತಿ ಮಾಡಬೇಕು ಅನ್ನುವ ಹಂತದಲ್ಲೇ ಶಿಕ್ಷಣ ಇಲಾಖೆ ಯೋಚಿಸುತ್ತಿತ್ತು. ಇದನ್ನು ನೋಡಿದರೆ ಒಂದು ವ್ಯವಸ್ಥಿತ ಆಡಳಿತ ಕ್ರಮ ಬೇಡವೆ? ಅನಿಸುತ್ತದೆ.

ಇದರಿಂದ ಹಳೆಯ ಪಠ್ಯ ಪುಸ್ತಕಗಳಲ್ಲೇ ಅಧ್ಯಯನ ಮಾಡಬೇಕೆ ಅಥವಾ ಹೊಸ ಪಠ್ಯ ಪುಸ್ತಕಗಳಲ್ಲಿ ವ್ಯಾಸಂಗ ಮಾಡಬೇಕೆ ಎಂಬ ಬಗ್ಗೆ ಗೊಂದಲಗಳು ಸಾಕಷ್ಟು ಶಿಕ್ಷಕರುಗಳಲ್ಲೇ ಇರುವಾಗ, ಅಧ್ಯಯನ ಮಾಡುವ ವಿದ್ಯಾರ್ಥಿಗಳ ಪಾಡೇನು? ಗಂಡ ಹೆಂಡತಿಯರ ಜಗಳದಲ್ಲಿ ಕೂಸು ಬಡವಾಯಿತು ಅನ್ನುವ ಹಾಗಾಗಿದೆ ವಿದ್ಯಾರ್ಥಿಗಳ ಸ್ಥಿತಿ. ಅದು ಆಗಬಾರದು. ಈಗಾಗಲೇ ಕೊರೊನಾ ಅಬ್ಬರದಿಂದ, ಶೈಕ್ಷಣಿಕ ಪ್ರಗತಿ ಕುಂಠಿತವಾಗಿರುವುದಂತೂ ಸತ್ಯ. ಅದರ ಜೊತೆಗೆ ಪಠ್ಯ ಪುಸ್ತಕಗಳ ಅವಾಂತರ ಬೇರೆ. ಶಿಕ್ಷಣ ಇಲಾಖೆ ಹಾಗೂ ಸರ್ಕಾರ ಮಕ್ಕಳ ಭವಿಷ್ಯದ ಬಗ್ಗೆ ಚೆಲ್ಲಾಟ ಆಡುವುದನ್ನು ಬಿಟ್ಟು ತ್ವರಿತವಾಗಿ ಪರಿಷ್ಕೃತ ಪಠ್ಯ ಪುಸ್ತಕಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗದೆ ಇದ್ದರೆ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕಾದರೂ, ಹಳೆಯ ಪಠ್ಯ ಪುಸ್ತಕಗಳನ್ನೇ ಅಧ್ಯಯನ ಮಾಡುವಂತೆ ನಿರ್ದೇಶಿಸಿ ಶೈಕ್ಷಣಿಕ ವರ್ಷ ಪ್ರಾರಂಭವನ್ನು ಮಾಡುವಂತೆ (ಈಗಾಗಲೇ ವಿಳಂಬವಾಗಿದೆ) ಕ್ರಮ ಕೈಗೊಳ್ಳಲಿ.

–ಎ.ಎಸ್. ಗೋಪಾಲಕೃಷ್ಣ (ಜಿ.ಕೆ), ಮೈಸೂರು.

ಡಾ. ಸುಧಾಮೂರ್ತಿ ರಾಷ್ಟ್ರಪತಿಯಾಗಲಿ



ಮಾನ್ಯರೆ,

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ದೇಶದ ರಾಷ್ಟ್ರಪತಿಗಳ ಇತಿಹಾಸ ನೋಡಿದರೆ ಬಹಳ ಹಿಂದೆ ರಾಷ್ಟ್ರಪತಿಯಾಗಿ ಆಯ್ಕೆಯಾದ ಏಕೈಕ ಮಹಿಳೆ ಪ್ರತಿಭಾ ಪಾಟೀಲ್ ಬಿಟ್ಟರೆ ಇದುವರೆಗೂ ಯಾರೂ ಆಯ್ಕೆ ಯಾಗಿಲ್ಲ. ಇದು ಸ್ತ್ರೀಯರಿಗೆ ತೋರಿದ ಅಸಮಾನತೆಯನ್ನು ಪ್ರತಿ ಬಿಂಬಿಸುತ್ತದೆ. ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ರಾಜಕೀಯವನ್ನು ಬದಿಗೊತ್ತಿ ಈ ಬಾರಿ ಮಹಿಳೆಯನ್ನು ರಾಷ್ಟ್ರಪತಿ ಮಾಡಬೇಕು. ಇದಕ್ಕೆ ಸೂಕ್ತ ಅಭ್ಯರ್ಥಿ ಎಂದರೆ ನಮ್ಮ ರಾಜ್ಯದ ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ. ತಮ್ಮ ಸರಳತೆ ಮತ್ತು ಸೇವಾ ಮನೋಭಾವದಿಂದ ಹೆಸರಾಗಿದ್ದಾರೆ. ರಾಷ್ಟ್ರಪತಿಗೆ ಇರಬೇಕಾದ ಎಲ್ಲಾ ಅರ್ಹತೆಗಳು ಇವರಿಗಿದೆ. ಇದನ್ನು ಎಲ್ಲಾ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕು. ಇದು ನನ್ನ ಕಳಕಳಿಯ ಮನವಿ.

–ಚನ್ನಕೇಶವ ಜಿ, ಕೆ. ತರೀಕೆರೆ

ಆರೋಗ್ಯದ ಹೆಸರಿನಲ್ಲಿ ಸುಲಿಗೆ...

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಹೋಬಳಿ ಕೇಂದ್ರ ರಾವಂದೂರಿನಲ್ಲಿ ಕೆಲ ಕ್ಲಿನಿಕ್‌ಗಳು, ಅವರದೇ ಕಮಿಷನ್ ಪಡೆಯುವ ಮೆಡಿಕಲ್ ಶಾಪ್‌ಗಳು ತಲೆಯೆತ್ತಿವೆ. ಬಡ ರೋಗಿಗಳಿಂದ ಅತಿಯಾದ ಹಣವನ್ನು, ಆರೋಗ್ಯದ ಹೆಸರಿನಲ್ಲಿ ಸುಲಿಗೆ ಮಾಡಲಾಗುತ್ತಿದೆ. ಕ್ಲಿನಿಕ್‌ಗಳು ಮತ್ತು ಅದನ್ನು ನಡೆಸುವ ಡಾಕ್ಟರ್‌ಗಳ ಬಗ್ಗೆ ಕೂಲಂಕುಷವಾಗಿ ತನಿಖೆ ಆಗಬೇಕು. ಮೆಡಿಕಲ್ ಶಾಪ್ ನಡೆಸುವವರ ವಿದ್ಯಾರ್ಹತೆ ಪರಿಶೀಲಿಸಬೇಕು.

ಇನ್ನು ಉಳಿದಂತೆ ರಾವಂದೂರಿನ ಸರ್ಕಾರಿ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ವೈದ್ಯರು ಬಡರೋಗಿಗಳಿಂದ ಒಂದಷ್ಟು ಹಣ ಸುಲಿದು ಹೆಚ್ಚಿನ ಪರೀಕ್ಷೆಗಳಿಗೆ ತಮಗೆ ಗೊತ್ತಿರುವ ಲ್ಯಾಬೋರೇಟರಿಗೆ ಕಳುಹಿಸುತ್ತಿದ್ದಾರೆ. ಅಲ್ಲಿಗೆ ಟೈಫಾಯಿಡ್ ಮತ್ತಿತರ ರಕ್ತಪರೀಕ್ಷೆ ಅಂತ ಹೋದರೆ ಸುಮಾರು 500 ರೂಪಾಯಿಗಳಿಂದ 1000 ಹಾಗೂ ಅದಕ್ಕಿಂತಲೂ ಹೆಚ್ಚು ಹಣ ವಸೂಲಿ ಮಾಡುತ್ತಾರೆ. ಆ ಲ್ಯಾಬೋ ರೇಟರಿ ಖಾಸಗಿಯವರದು. ಅಂತಹ ಪರೀಕ್ಷೆ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಇಲ್ಲವೇ...

ಜೊತೆಗೆ ಇಲ್ಲಿ ಖಾಸಗಿ ಮೆಡಿಕಲ್ ಶಾಪ್‌ಗಳ ಬದಲಿಗೆ ಪ್ರಧಾನಮಂತ್ರಿ ಜನೌಷಧ ಕೇಂದ್ರವನ್ನು ಸ್ಥಾಪಿಸಿ ಬಡ ರೋಗಿಗಳಿಗೆ ಅತೀ ಕಡಿಮೆ ಬೆಲೆಯಲ್ಲಿ ಔಷಧ ಸಿಗುವಂತೆ ಆರೋಗ್ಯ ಅಧಿಕಾರಿಗಳು ಇತ್ತ ಗಮನಹರಿಸಬೇಕಾಗಿದೆ.

ಇದು ಸುಮಾರು 2–3 ವರ್ಷಗಳಿಂದಲೂ ಇದು ನಡೆದುಕೊಂಡು ಬರುತ್ತಿದೆ. ಬಡರೋಗಿಗಳ ಸಾಮಾನ್ಯ ಆರೋಗ್ಯದ ಖಾಯಿಲೆಗಳಿಗೂ ಅಧಿಕ ಹಣವನ್ನು ತೆತ್ತು ಆರೋಗ್ಯ ಸುಧಾರಣೆ ಮಾಡಿಕೊಳ್ಳಬೇಕಾಗಿದೆ. ಇಂತಹ ಎಲ್ಲಾ ಅನಧಿಕೃತ ಸಂಗತಿಗಳಿಗೆ ಜಿಲ್ಲಾ ಮತ್ತು ತಾಲೂಕು ಆರೋಗ್ಯ ಅಧಿಕಾರಿಗಳು ಕಡಿವಾಣ ಹಾಕಿ ಅವ್ಯವಸ್ಥೆ ಭ್ರಷ್ಟಾಚಾರ ಮತ್ತು ಸಮಗ್ರ ಆರೋಗ್ಯದ ದೃಷ್ಟಿಯಿಂದ ಸರಿಪಡಿಸಲು ಮುಂದಾಗಬೇಕು ಎಂಬುದು ಎಲ್ಲಾ ನಾಗರೀಕರ ಒಕ್ಕೊರಲ ಆಗ್ರಹ.

–ಎ ಎಸ್ ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಜಕ್ಕಹಳ್ಳಿಯಲ್ಲಿ ನೀರಿಗೆ ಹಾಹಾಕಾರ



ಮಾನ್ಯರೆ,

ಹೆಚ್.ಡಿ. ಕೋಟೆ ತಾಲೂಕಿನ ಜಕ್ಕಹಳ್ಳಿ ಗ್ರಾಮದ ಕುಡಿಯುವ ನೀರು ಸರಬರಾಜು ಮಾಡುವ 2 ಮೋಟಾರ್‌ಗಳು ಕೆಟ್ಟು ಹೋಗಿದ್ದು, ಕುಡಿಯುವ ನೀರಿನ ಸರಬರಾಜು ಇಲ್ಲದೆ ಗ್ರಾಮಸ್ಥರು ಪರದಾಡುವಂತಾಗಿದೆ. ಕಳೆದ 3 ದಿನಗಳಿಂದ ಗ್ರಾಮದಲ್ಲಿ ಕೊಳಾಯಿಗಳಲ್ಲಿ ನೀರು ಬರದ ಕಾರಣ ಗ್ರಾಮಸ್ಥರು ಕುಡಿಯುವ ನೀರಿಗೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ನೀರಿನ ಸಮಸ್ಯೆ ಬಗೆಹರಿಸುವಂತೆ ಗ್ರಾಮಸ್ಥರ ಮನವಿ.

– ಜಕ್ಕಹಳ್ಳಿ ಗ್ರಾಮಸ್ಥರು, ಹೆಚ್.ಡಿ. ಕೋಟೆ ತಾಲೂಕು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಯೋಗದರ್ಶನದ ಮೂಲತತ್ತ್ವಗಳು

ದರ್ಶನ ಎಂದರೆ ಸತ್ಯ ಸಾಕ್ಷಾತ್ಕಾರದ ಮಾರ್ಗ. ಭಾರತ ದೇಶದಲ್ಲಿ ಅನೇಕ ದರ್ಶನಗಳು ಉದಿಸಿದುವು. ಅವುಗಳಲ್ಲಿ ಕೆಲವು ವೇದಗಳ ಪ್ರಾಮಾಣ್ಯವನ್ನು ಒಪ್ಪಿಕೊಂಡಿವೆ. ಅವುಗಳನ್ನು ಆಸ್ತಿಕ ದರ್ಶನಗಳೆಂದು ಕರೆಯುವ ರೂಢಿ ಇದೆ. ಮತ್ತೆ ಕೆಲವು ವೇದಗಳ ಪ್ರಾಮಾಣ್ಯವನ್ನು ನಿರಾಕರಿಸಿ ಸ್ವತಂತ್ರ ಚಿಂತನೆಯಿಂದ ಆಲೋಚನೆ ಮಾಡುವುದರಿಂದ ಅವನ್ನು ನಾಸ್ತಿಕ ದರ್ಶನಗಳೆಂದು ಕರೆಯುವುದುಂಟು. ಈ ದೃಷ್ಟಿಯಿಂದ ಬೌದ್ಧ ದರ್ಶನ, ಜೈನ ದರ್ಶನ– ಇವುಗಳನ್ನು ನಾಸ್ತಿಕ ದರ್ಶನಗಳೆಂದು ಕರೆಯುವುದುಂಟು. ಆದರೆ ಬೌದ್ಧರಾಗಲಿ, ಜೈನರಾಗಲಿ ತಮ್ಮನ್ನು ನಾಸ್ತಿಕರೆಂದು ಹೇಳಿಕೊಳ್ಳುವುದಿಲ್ಲ. ಪುನರ್ಜನ್ಮವನ್ನು ಒಪ್ಪುವವರು ಆಸ್ತಿಕರೆಂದು ಪರಿಗಣಿಸುವುದಾದರೆ, ಚಾರ್ವಾಕರನ್ನು ಬಿಟ್ಟು ಉಳಿದವರೆಲ್ಲರೂ ಆಸ್ತಿಕರೆಂದೇ ಹೇಳಬಹುದು. ಯೋಗದರ್ಶನವು ಎಲ್ಲಾ ದೃಷ್ಟಿಗಳಿಂದಲೂ ಆಸ್ತಿಕ ದರ್ಶನವೇ. ಅದು ವೇದಗಳ ಪ್ರಾಮಾಣ್ಯವನ್ನೂ, ಪುನರ್ಜನ್ಮವನ್ನೂ, ಈಶ್ವರನ (ಎಂದರೆ ದೇವರ) ಅಸ್ತಿತ್ವವನ್ನೂ ಒಪ್ಪಿಕೊಂಡಿದೆ.

'ಪ್ರತ್ಯಕ್ಷಾನುಮಾನಾಗಮಾಃ ಪ್ರಮಾಣಾನಿ' ಎಂಬ ಸೂತ್ರವು ವೇದಪ್ರಾಮಾಣ್ಯವನ್ನು ಒತ್ತಿ ಹೇಳಿದೆ. ಪ್ರತ್ಯಕ್ಷ ಪ್ರಮಾಣವು ವರ್ತಮಾನ ಕಾಲಕ್ಕೆ ಸೀಮಿತ. ಅನುಮಾನವು ಪ್ರತ್ಯಕ್ಷಾವಲಂಬಿ ಇಂದ್ರಿಯಾತೀತವಾದುದನ್ನು ಅರಿಯಲು ಆಗಮವೇ ಪ್ರಮಾಣ ಎಂದು ಈ ಪಾತಂಜಲ ಸೂತ್ರದ ಅಭಿಪ್ರಾಯ.

ಆತ್ಮನ ನಿತ್ಯತ್ವವನ್ನೂ ಆತ್ಮಗಳ ಅನಂತ (infinite) ಸಂಖ್ಯೆಯನ್ನೂ ಪುನರ್ಜನ್ಮವನ್ನೂ ಯೋಗದರ್ಶನವು ಒಪ್ಪಿಕೊಂಡಿದೆ. ಆತ್ಮ ಎಂಬುದಕ್ಕೆ ಪರ್ಯಾಯವಾಗಿ 'ಪುರುಷ' ಎಂಬ ಪಾರಿಭಾಷಿಕ ಪದವನ್ನು ಯೋಗ ದರ್ಶನವು ಬಳಸಿದೆ. ಸಾಂಖ್ಯ ದರ್ಶನ ಪ್ರಕೃತಿ–ಪುರುಷ ಎಂಬ ಎರಡು ತತ್ತ್ವಗಳನ್ನು ಮಾತ್ರ ಒಪ್ಪಿದೆ. ಆದರೆ ಮೂರನೆಯ ತತ್ತ್ವವಾದ 'ಈಶ್ವರ' ಎಂಬುದನ್ನೂ ಯೋಗ ದರ್ಶನವು ಒಪ್ಪಿಕೊಂಡಿದೆ.

'ಕರ್ಮವಿಪಾಕಾಶಯೈರಪರಾಮೃಷ್ಟ: ಪುರುಷ ವಿಶೇಷ : ಈಶ್ವರಃ' ಎಂಬ ಸೂತ್ರವು ಈಶ್ವರನ ಲಕ್ಷಣವನ್ನು ತಿಳಿಸಿದೆ. ಸಾಮಾನ್ಯ ಪುರುಷರು, ಎಂದರೆ ಜೀವಾತ್ಮರು ಕರ್ಮವಿಪಾಕದ ಸಂಬಂಧವನ್ನು ಅನಿವಾರ್ಯವಾಗಿ ಹೊಂದಿರುತ್ತಾರೆ. ಆ ಕರ್ಮಗಳ ದೆಸೆಯಿಂದ ಪುನಃ ಪುನಃ ಜನ್ಮವು ಅವರಿಗೆ ಅನಿವಾರ್ಯ. ಈ ಜನನ–ಮರಣ ಚಕ್ರದಿಂದ ತಪ್ಪಿಸಿಕೊಳ್ಳಬೇಕಾದರೆ ಪ್ರಕೃತಿ–ಪುರುಷ ವಿವೇಕವು ಬೇಕು. ಇದನ್ನು ಪಡೆದುಕೊಳ್ಳಲು ಅಷ್ಟಾಂಗ ಯೋಗದ ಅನುಷ್ಠಾನವು ಅತ್ಯಾವಶ್ಯಕ.

ಆದರೆ ಈಶ್ವರನೆಂಬ ಪುರುಷನಿಗೆ, ಎಂದರೆ ಪರಮಾತ್ಮನಿಗೆ, ಯಾವ ಕರ್ಮದ ಸಂಬಂಧವೂ ಇಲ್ಲ. ಆ ಕಾರಣದಿಂದ ಈಶ್ವರನಿಗೆ ಜನನ ಮರಣಗಳಿಲ್ಲ. ಈಶ್ವರನಿಗೆ ಯಾವ ನಿರ್ದಿಷ್ಟ ರೂಪವನ್ನೂ ಪತಂಜಲಿಯು ಹೇಳಿರುವುದಿಲ್ಲ. ಶಿವ, ವಿಷ್ಣು, ಬ್ರಹ್ಮ ಮುಂತಾದ ಯಾವ ಹೆಸರನ್ನೂ ಯೋಗ ಶಾಸ್ತ್ರವು ಬಳಸಿಲ್ಲ. **ತಸ್ಯ ವಾಚಕಃ ಪ್ರಣವಃ** ಎಂಬ ಸೂತ್ರವು ಈಶ್ವರನನ್ನು ಸೂಚಿಸುವ ಅಥವಾ ಹೇಳುವ ಶಬ್ದವು ಓಂಕಾರ ಎಂದು ಪ್ರತಿಪಾದಿಸಿದೆ.



ಈಶ್ವರನಿಗೆ ಯಾವಾಗ ಈಶ್ವರತ್ವ ಲಭಿಸಿತು? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ ಅವನು ಕಾಲಕ್ಕೆ ಅತೀತ. ಅವನು ಎಲ್ಲ ವಿದ್ಯೆ ಗಳ ಎಲ್ಲ ಗುರುಗಳ ಗುರು. **ಸ ಪೂರ್ವೇಷಾಮಪಿ ಗುರುಃ, ಕಾಲೇನಾನವಚ್ಛೇದಾತ್** ಎಂಬ ಸೂತ್ರವು ಇದನ್ನು ಸ್ಪಷ್ಟಪಡಿಸುತ್ತದೆ. ಈಶ್ವರನು ಸರ್ವಶಕ್ತನೆಂದಾಗಲಿ ಸೃಷ್ಟಿಕರ್ತನೆಂದಾಗಲಿ ಪತಂಜಲಿ ತನ್ನ ಸೂತ್ರಗಳಲ್ಲಿ ಹೇಳಿಲ್ಲ. ಪ್ರಕೃತಿ ಮತ್ತು ಪುರುಷ ಎಂಬುವನ್ನು ಯಾರೂ ಸೃಷ್ಟಿಸಲಿಲ್ಲ. ಆದ್ದರಿಂದ ಈ ಎರಡೂ ಅನಾದಿ ಹಾಗೂ ನಿತ್ಯ ಪುರುಷನು ನಿರ್ಲೇಪ. ಪ್ರಕೃತಿಯು ವಿಕಾಸಶೀಲ. ಅದು ತಾನಾಗಿ ಬದಲಾವಣೆಯನ್ನೂ ವಿಕಾಸವನ್ನೂ ಹೊಂದುತ್ತಿರುತ್ತದೆ. ಅದಕ್ಕೆ ಕೊನೆಯಿಲ್ಲ. ಬುದ್ಧಿ, ಮನಸ್ಸು, ಇಂದ್ರಿಯಗಳು ಇತ್ಯಾದಿಗಳೆಲ್ಲ ಪ್ರಕೃತಿಯ ಕೊಡುಗೆಗಳು. ಈಶ್ವರನು ಪ್ರಕೃತಿಯ ಅಧೀನನಲ್ಲ. ಇತರ ಎಲ್ಲ ಪುರುಷರು ಅದಕ್ಕೆ ಅಧೀನರು. ಅವರ ಜ್ಞಾನವು ಅಲ್ಪ. ಆದರೆ ಈಶ್ವರನು ಸರ್ವಜ್ಞ ಎಂದು ಪತಂಜಲಿಯು ಸೂಚಿಸಿದ್ದಾನೆ.

ತತ್ರನಿರತಿಶಯಂ ಸರ್ವಜ್ಞಬೀಜಮ್ ಎಂಬುದು ಅವನ ಸೂತ್ರ. ಈಶ್ವರನ ಜ್ಞಾನಕ್ಕೆ ಯಾವ ತಡೆಗಳಿಲ್ಲವಾದುದರಿಂದ ಅವನ ಸರ್ವಜ್ಞತ್ವ ಸ್ವಯಂಸಿದ್ಧವೆಂದಾಗುತ್ತದೆ. ಈಶ್ವರ ಪ್ರಣಿಧಾನವು, ಎಂದರೆ ಪರಮಾತ್ಮಧ್ಯಾನವು ಕೈವಲ್ಯಕ್ಕೆ ಕಾರಣ. ಈಶ್ವರಪ್ರಣಿಧಾನ ಎಂದರೆ ಈಶ್ವರನನ್ನು ಮನಸ್ಸಿನಲ್ಲಿ ಧ್ಯೇಯವಾಗಿ ಇರಿಸಿಕೊಳ್ಳುವುದು ಅಥವಾ ಈಶ್ವರನಿಗೆ ಸಂಪೂರ್ಣವಾಗಿ ಶರಣಾಗತನಾಗುವುದು ಎಂದು ಅರ್ಥ. ಈಶ್ವರ ಪ್ರಣಿಧಾನ ಎಂಬ ಶಬ್ದವನ್ನು ಪತಂಜಲಿ ಯೋಗ ಸೂತ್ರಗಳಲ್ಲಿ ಮತ್ತೆ ಮತ್ತೆ ಬಳಸಿರುವುದನ್ನು ಕಾಣುತ್ತೇವೆ. ಈಶ್ವರಾನುಗ್ರಹದಿಂದ ಸಾಧಕನಿಗೆ ಸಮಾಧಿಯ ಸಿದ್ಧಿ ಉಂಟಾಗುತ್ತದೆ, ಕೈವಲ್ಯ ಒದಗಿ ಬರುತ್ತದೆ ಎಂದು ಇದರಿಂದ ಸೂಚಿತವಾಗಿರಬಹುದು.

ಕೈವಲ್ಯವು ಯೋಗದ ಪರಮಗುರಿ. ಹಾಗಿಲ್ಲದಿದ್ದರೆ ಯಮ, ನಿಯಮಗಳಿಗೆ ಅಷ್ಟೊಂದು ಪ್ರಾಧಾನ್ಯವನ್ನು ಪತಂಜಲಿಯು ಕೊಡಬೇಕಾಗಿರಲಿಲ್ಲ. ಯೋಗ ಸೂತ್ರಗಳಲ್ಲಿ ನಾಲ್ಕನೆಯ ಪಾದವನ್ನು ಕೈವಲ್ಯಪಾದ ಎಂದು ಕರೆದಿದ್ದಾರೆ. ಆದರೆ ಕೈವಲ್ಯದ ಬಗೆಗೆ ನಾಲ್ಕನೆಯ ಪಾದದಲ್ಲಿ ಮಾತ್ರ ಹೇಳಿದ್ದಾರೆ ಎಂದು ಭಾವಿಸಬಾರದು. ಮೂರನೆಯದಾದ ವಿಭೂತಿಪಾದದಲ್ಲಿ **ತದ್ವೈರಾಗ್ಯಾದಪಿ ದೋಷಬೀಜಕ್ಷಯೇ ಕೈವಲ್ಯಮ್** ಎಂಬ ಸೂತ್ರದಲ್ಲಿ ಕೈವಲ್ಯ ಪ್ರಾಪ್ತಿಯು ವಿಭೂತಿಗಳ ಬಗೆಗೆ ವೈರಾಗ್ಯವನ್ನು ಹೊಂದಿ ದೋಷದ ಕಾರಣ ಗಳು ಕ್ಷಯಿಸುವಂತೆ ಸಾಧಕನು ಮಾಡಿದಾಗ ಕೈವಲ್ಯ ಎಂದು ಹೇಳಲಾಗಿದೆ. ಅಲ್ಲಿಂದ ಮುಂದೆ ಅದೇ ಪಾದದಲ್ಲಿ **ಸತ್ತ್ವಪುರುಷಯೋಃ ಶುದ್ಧಿಸಾಮ್ಯೇ ಕೈವಲ್ಯಮಿತಿ** ಎಂಬ ಸೂತ್ರದಲ್ಲಿ ಬುದ್ಧಿಯ ಮತ್ತು ಪುರುಷ (=ಆತ್ಮ)ನ ಶುದ್ಧಿಯು ಉಂಟಾದಾಗ ಕೈವಲ್ಯ ಎಂದು ಕೈವಲ್ಯದ ಸ್ಥಿತಿಯನ್ನು ತಿಳಿಸಲಾಗಿದೆ. ನಾಲ್ಕನೆಯದಾದ ಕೈವಲ್ಯಪಾದದಲ್ಲಿ ಕೊನೆಯ ಸೂತ್ರ– **ಪುರುಷಾರ್ಥಶೂನ್ಯಾನಾಂ ಗುಣಾನಾಂ ಪ್ರತಿಪ್ರಸವಃ ಕೈವಲ್ಯಂ ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತಿಃ** ಎಂಬ ಸೂತ್ರದಲ್ಲಿ ಕೈವಲ್ಯಸ್ವರೂಪದ ನಿರೂಪಣೆ ಯನ್ನು ಕಾಣುತ್ತೇವೆ. ಪ್ರಕೃತಿಯ ಮೂರು ಗುಣ ಗಳಾದ ಸತ್ತ್ವ, ರಜಸ್ ಮತ್ತು ತಮಸ್ ಎಂಬುವು ತಮ್ಮ ಕಾರ್ಯಗಳನ್ನು ಮುಗಿಸಿದ ಮೇಲೆ ಪುರು ಷಾರ್ಥ ಶೂನ್ಯವಾಗಿ ಪ್ರತಿಪ್ರಸವವನ್ನು ಹೊಂದುತ್ತವೆ. ಪ್ರತಿಪ್ರಸವವೆಂದರೆ ತಮ್ಮ ಮೂಲಾಕರಗಳಿಗೆ ಹಿಂದಿರುಗುವುದು ಹಾಗೆ ಗುಣಗಳು ಪುರುಷನಿಂದ ತಾವೇ ದೂರ ಸರಿದರೆ ಚೈತನ್ಯ ಸ್ವರೂಪನಾದ ಪುರುಷನು ಕೇವಲನಾಗುತ್ತಾನೆ. ಪ್ರಕೃತಿಯ ಸಂಸರ್ಗ ಸಂಪೂರ್ಣವಾಗಿ ಕಡಿದು ಬೀಳುತ್ತದೆ. ಇದೇ ಮೋಕ್ಷ. ಇದನ್ನೇ ಯೋಗಶಾಸ್ತ್ರ ಕೈವಲ್ಯವೆಂದು ಕರೆದಿದೆ.

ಯೋಗಾಸನಾಭ್ಯಾಸದಿಂದ ಮತ್ತು ಪ್ರಾಣಾಯಾಮದಿಂದ ದೇಹದ ರೋಗಗಳು ದೂರವಾಗಿ ಆರೋಗ್ಯ ವೃದ್ಧಿಯಾಗುವುದೂ, ಧ್ಯಾನದಿಂದ ಮನಸ್ಸಿನ ಆತಂಕಗಳೂ ದೂರವಾಗಿ ಪ್ರಸನ್ನತೆ ಉಂಟಾಗುವುದೂ ವೈಜ್ಞಾನಿಕ ಸತ್ಯ ಮತ್ತು ಅನುಭವ ಗೋಚರ. ಆದರೆ ಅದು ಯೋಗದ ಪರಮಲಕ್ಷ್ಯವೆಂದು ಪತಂಜಲಿಯು ಹೇಳಿಲ್ಲ. ಸಂಪ್ರಜ್ಞಾತ ಸಮಾಧಿ ಶ್ರೇಷ್ಠ ಸಾಧಕರಲ್ಲಿ ಅನೇಕ ಹೊಸಶಕ್ತಿಗಳನ್ನೂ, ವಿಭೂತಿಗಳನ್ನೂ ಉತ್ಪಾದಿಸಬಹುದು. ಆದರೆ ಅವು ಅಪೇಕ್ಷಣೀಯಗಳಲ್ಲ. ಈ ವಿಷಯದಲ್ಲಿ ಪತಂಜಲಿಯೇ ಎಚ್ಚರಿಕೆಯನ್ನು ಕೊಟ್ಟಿದ್ದಾನೆ– **'ತೇ ಸಮಾಧಾವುಪಸರ್ಗಾ ವ್ಯುತ್ಥಾನೇ ಸಿದ್ಧಯಃ'** ಆ ಶಕ್ತಿಗಳು ಸಮಾಧಿಗೆ ಅಡ್ಡಿಗಳು, ಪ್ರಾಪಂಚಿಕ ಜೀವನದಲ್ಲಿ ಮಾತ್ರ ಅವು ಸಿದ್ಧಿಗಳು ಎಂಬುದು ಆ ಎಚ್ಚರಿಕೆ. ಏಕೆಂದರೆ ಜನರನ್ನು ಆಕರ್ಷಿಸುವ ಚಮತ್ಕಾರಗಳಲ್ಲಿ ಯೋಗಿ ಆಸಕ್ತನಾದರೆ, ಮುಖ್ಯ ಗುರಿಯಾದ ಆತ್ಮ ಸಾಕ್ಷಾತ್ಕಾರ ಮತ್ತು ಕೈವಲ್ಯ ಕನಸಾಗಿಯೇ ಉಳಿಯುತ್ತವೆ. ಈ ಸಂಬಂಧದಲ್ಲಿ ಸದಾಶಿವಬ್ರಹ್ಮೇಂದ್ರರು ಉದಾಹರಿಸಿರುವ ಎರಡು ಶ್ಲೋಕಗಳು ಮನಸಾರ್ಹವಾಗಿವೆ–

ದ್ರವ್ಯಮಂತ್ರ ಕ್ರಿಯಾಕಾಲ–
ಶಕ್ತಯಃ ಸಾಧು ಸಿದ್ಧಿದಾಃ।
ಪರಮಾತ್ಮಪದಪ್ರಾಪ್ತೌ
ನೋಪಕುರ್ವಂತಿ ಕಾಶ್ಚನ॥
ಸರ್ವೇಚ್ಛಾಲಾಭಸಂಶಾಂತೌ
ಆತ್ಮಲಾಭೋದಯೋ ಹಿ ಸಃ।
ಸ ಕಥಂ ಸಿದ್ಧಿವಾಂಛಾಯಾಂ
ಮಗ್ನಚಿತ್ತೇನ ಲಭ್ಯತೇ ॥

ದ್ರವ್ಯಶಕ್ತಿ, ಮಂತ್ರ ಶಕ್ತಿ, ಕ್ರಿಯಾಶಕ್ತಿ, ಕಾಲಶಕ್ತಿ ಇವುಗಳೆಲ್ಲ ಸಿದ್ಧಿಗಳನ್ನುಂಟು ಮಾಡುತ್ತವೆ ಎಂಬುದು ನಿಜವೇ. ಆದರೆ ಅವು ಪರಮಾತ್ಮ ಸ್ಥಾನವನ್ನು ಪಡೆಯುವುದರಲ್ಲಿ ಯಾವ ಉಪಕಾರವನ್ನೂ ಮಾಡುವುದಿಲ್ಲ, ನೆರವನ್ನು ನೀಡುವುದಿಲ್ಲ. ಎಲ್ಲಾ ವಿಧವಾದ ಇಚ್ಛೆಗಳ ಲಾಭದ ಅಪೇಕ್ಷೆ ಶಾಂತವಾದಾಗ ಉಂಟಾದ ಆತ್ಮಲಾಭವೇ ಯೋಗದ ಮುಖ್ಯ ಫಲ. ನನಗೆ ಸಿದ್ಧಿಗಳು ದೊರಕಬೇಕು, ಜನರನ್ನು ಮರುಳುಗೊಳಿಸುವ ಚಮತ್ಕಾರಕ ಶಕ್ತಿಗಳು ನನ್ನವಾಗಬೇಕು ಎಂಬ ಆಶೆಯಲ್ಲಿ ಮನಸ್ಸು ಮುಳುಗಿದ್ದಾಗ ಆ ಆತ್ಮಲಾಭ ಅಥವಾ ಪರಮಾತ್ಮ ಸಾಕ್ಷಾತ್ಕಾರ ಹೇಗೆ ದೊರಕೀತು? ಎಂದು ಈ ಶ್ಲೋಕಗಳ ತಾತ್ಪರ್ಯ.

ಯೋಗಿಯಾದವನು ಜಗತ್ತಿನ ಸುಖಗಳಲ್ಲೇ ಆಕಾಂಕ್ಷೆ ಉಳ್ಳವನಾದರೆ ಅವನ ಸಾಧನೆ ದೊಂಬರಾಟ ಮಾತ್ರವಾಗುತ್ತದೆ. ಅಭ್ಯಾಸವನ್ನೆಷ್ಟೋ ಮಾಡಿ ವಿವಿಧವಾದ ಕ್ಲಿಷ್ಟ ಆಸನಗಳನ್ನು ಮಾಡಲು ಎಷ್ಟು ಕಲಿತಿದ್ದರೂ ಮನಸ್ಸು ಮಾಗದಿದ್ದರೆ ಪ್ರಯೋಜನ ಇಲ್ಲ. ಅದಕ್ಕೆ ವೈರಾಗ್ಯ ಬೇಕು. ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ ಎಂಬ ಸೂತ್ರವನ್ನು ಮರೆಯಬಾರದು. ಅಭ್ಯಾಸವಿಲ್ಲದ ವೈರಾಗ್ಯವೂ ನಿಷ್ಫಲ. ಆಚಾರ್ಯ ಶಂಕರರು

'ವೈರಾಗ್ಯಬೋಧೌ ಪುರುಷಸ್ಯ ಪಕ್ಷಿವತ್
ಪಕ್ಷೌ ವಿಜಾನೀಹಿ ವಿಚಕ್ಷಣ ತ್ವಮ್'।

ಎಂದು ವಿವೇಕ ಚೂಡಾಮಣಿಯಲ್ಲಿ ಹೇಳಿದ್ದಾರೆ. ವೈರಾಗ್ಯ, ಅಭ್ಯಾಸ ಯೋಗಿಯ ಎರಡು ರೆಕ್ಕೆಗಳಿದ್ದಂತೆ. ಒಂದೇ ರೆಕ್ಕೆ ಇರುವ ಹಕ್ಕಿ ಹಾರಲಾರದು. ಎರಡು ರೆಕ್ಕೆಗಳಿದ್ದರೆ, ಅವು ದುರ್ಬಲವಾದರೂ ಸರಿ, ಸ್ವಲ್ಪವಾದರೂ ಹಾರಬಹುದು. ಇದನ್ನು ಯೋಗಾಭ್ಯಾಸಿಗಳು ಮನದಟ್ಟು ಮಾಡಿಕೊಳ್ಳಬೇಕು. ಯೋಗವು ದರ್ಶನವಾಗದೆ ಪ್ರದರ್ಶನವಾಗುವುದು ಬೇಡ. ಪ್ರಧಾನ ಮಂತ್ರಿಗಳು ಯೋಗಕ್ಕೆ ಕೊಟ್ಟಿರುವ ಪ್ರೋತ್ಸಾಹ ಸಾರ್ಥಕವಾಗಲಿ.

ಸಂಪುಟ ವಿಸ್ತರಣೆ ಇಲ್ಲವೆ ಪುನರ್ರಚನೆ ಬಗ್ಗೆ ನಡ್ಡಾರಲ್ಲಿ ಚರ್ಚಿಸಿ

ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚರ್ಚೆ

ಬೆಂಗಳೂರು,ಜೂ.21(ಕೆಎಂಶಿ)– ಸಂಪುಟ ವಿಸ್ತರಣೆ ಇಲ್ಲವೇ ಪುನಾರಚನೆ ಸಂಬಂಧ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೊಂದಿಗೆ ಚರ್ಚಿಸಿ ಎಂದು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸೂಚಿಸಿದ್ದಾರೆ.

ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದ ಪ್ರಧಾನಿ ಅವರು, ಮೈಸೂರಿನ ತಾರಾ ಹೋಟೆಲ್‌ನಲ್ಲಿ ನಿನ್ನೆ ತಂಗಿದ್ದರು. ನಿನ್ನೆಯ ಬೆಂಗಳೂರು, ಮೈಸೂರು ಪ್ರವಾಸದ ನಂತರ ಪ್ರಧಾನಿ ಅವರು, ತಾವು ತಂಗಿದ್ದ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ಸರ್ಕಾರದ ಆಡಳಿತ ವೈಖರಿ ಬಗ್ಗೆ ಬೊಮ್ಮಾಯಿ ಅವರಿಂದ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಸಮಯ ನೋಡಿ ಮುಖ್ಯಮಂತ್ರಿ ಆಡಳಿತಕ್ಕೆ ಮತ್ತಷ್ಟು ವೇಗ ನೀಡಲು ಸಂಪುಟದ ಪುನಾರಚನೆಯ ಅಗತ್ಯವಿದೆ. ಇದಕ್ಕೆ ತಮ್ಮ ಅನುಮತಿ ಬೇಕು ಎಂದು ಕೋರಿದ್ದಾರೆ. ಈ ಬಗ್ಗೆ ತಕ್ಷಣವೇ ಪ್ರತಿಕ್ರಿಯೆ ನೀಡಿದ ಪ್ರಧಾನಿ ಅವರು, ಈ ಸಂಬಂಧ ನಡ್ಡಾ ಅವರೊಂದಿಗೆ ಮಾತನಾಡಿ. ನಾವು ಕರ್ನಾಟಕ ಮತ್ತು ಗುಜರಾತ್ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ನೀವು ಯಾವುದೇ ಕಾರಣಕ್ಕೂ ಚುನಾವಣೆಯನ್ನು ಲಘುವಾಗಿ ಪರಿಗಣಿಸಬಾರದು. ಗಂಭೀರವಾಗಿ ತೆಗೆದುಕೊಳ್ಳಬೇಕು.ಇತ್ತೀಚಿನ ಚುನಾವಣೆಯಲ್ಲಿ ಜನರು ಎಚ್ಚರಿಕೆ ಸಂದೇಶ ನೀಡಿದ್ದಾರೆ. ಜನರು ನೀಡಿರುವ ಸಂದೇಶವನ್ನು ಸವಾಲಾಗಿ ಸ್ವೀಕರಿಸಿ, ಜನರ ವಿಶ್ವಾಸ ಮೂಡಿಸುವ ಕೆಲಸಗಳು ಭರದಿಂದ ಸಾಗಬೇಕು. ಚುನಾವಣೆ ಎದುರಿಸಲು ನಮ್ಮಿಂದ ಎಲ್ಲಾ ರೀತಿಯ ಸಹಕಾರ ದೊರೆಯಲಿದೆ. ಡಿಸೆಂಬರ್ ಅಂತ್ಯದವರೆಗೂ ಎರಡು ತಿಂಗಳಿಗೊಮ್ಮೆ ರಾಜ್ಯಕ್ಕೆ ಭೇಟಿ ನೀಡುತ್ತೇನೆ. ಡಿಸೆಂಬರ್ ನಂತರ ಚುನಾವಣೆವರೆಗೂ ತಿಂಗಳಿಗೆ 2 ಬಾರಿ ಸಮಯ ನೀಡುವೆ. ಇದು ಪ್ರಚಾರಕ್ಕೆ ಸೀಮಿತವಾಗಿರುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಚುನಾವಣಾ ತಂತ್ರಗಾರಿಕೆ, ಇಲ್ಲಿನ ಆ ಪಕ್ಷದ ನಾಯಕರ ಹೋರಾಟಕ್ಕೆ ಮತದಾರರು ಸ್ಪಂದಿಸುತ್ತಿದ್ದಾರೆಯೇ ಎಂಬ ವಿಚಾರವನ್ನು ಸಿಎಂ ಅವರಿಂದ ಪ್ರಧಾನಿ ಪಡೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.





ಬಡ ಮಕ್ಕಳ ಶಿಕ್ಷಣಕ್ಕೆ ಬ್ಯಾಂಕ್‌ಗಳು ಸಾಥ್!

● ಮೋಹನ್ ಕಾಯಕ

ಮೈಸೂರು, ಜೂ. 21– ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಬ್ಯಾಂಕುಗಳ ಅಭಯ... ಅರ್ಜಿ ಸಲ್ಲಿಸಿದ ತಿಂಗಳೊಳಗೆ ಗರಿಷ್ಠ 1 ಕೋಟಿ ರೂ.ವರೆಗೂ ಶೈಕ್ಷಣಿಕ ಸಾಲ...

ಹೌದು! ಶಿಕ್ಷಣ ಪಡೆಯುವುದು ಪ್ರತಿಯೊಬ್ಬರ ಹಕ್ಕಾಗಿದ್ದು, ಅದಕ್ಕಾಗಿ ಹಗಲಿರುಳು ಕಷ್ಟಪಡುವ ವಿದ್ಯಾರ್ಥಿಗಳಿಗೆ ಬ್ಯಾಂಕುಗಳು ಸರಳ ನಿಯಮಗಳ ಮೂಲಕ ಸಾಲ–ಸೌಲಭ್ಯ ನೀಡಿ ಸಹಕಾರಿಯಾಗುತ್ತಿವೆ. ಬಿಇ, ಎಂಬಿಬಿಎಸ್‌ನಂಥ ಉನ್ನತ ವಿದ್ಯಾಭ್ಯಾಸಕ್ಕೆ ಹಣಕಾಸು ಅಡ್ಡಿಯಾಗಬಹುದು. ಇಂಥ ಪರಿಸ್ಥಿತಿ ನಿಭಾಯಿಸಲು ಶಿಕ್ಷಣ ಸಾಲ ನೆರವಾಗುತ್ತದೆ. ದೇಶ ಹಾಗೂ ವಿದೇಶದಲ್ಲಿ ಅಧ್ಯಯನ ನಡೆಸಲು ಗರಿಷ್ಠ 1 ಕೋಟಿ ರೂ.ವರೆಗೂ ಸಾಲ ಪಡೆದುಕೊಂಡು ಸುಲಭ ಹಾಗೂ ಕಡಿಮೆ ಬಡ್ಡಿ ದರದಲ್ಲಿ ತೀರಿಸಬಹುದಾಗಿದೆ.

ಒಬ್ಬ ವ್ಯಕ್ತಿಗೆ ಶಿಕ್ಷಣ ಮತ್ತು ಆರೋಗ್ಯ ಉಚಿತ ಹಾಗೂ ಮುಕ್ತವಾಗಿರಬೇಕು. ಆಗ ಮಾತ್ರ ಸುಶಿಕ್ಷಿತ ಆರೋಗ್ಯಕರ ಸಮಾಜ ಬೆಳೆಯಲು ಸಾಧ್ಯ. ಆದರೆ ಭಾರತದಂಥ ದೇಶದಲ್ಲಿ ಇವೆರಡೂ ದುಬಾರಿ. ಪ್ರತಿಭೆ, ಉತ್ಸಾಹ, ಕನಸುಗಳೆಲ್ಲ ಇದ್ದರೂ ಇಷ್ಟದ ಕೋರ್ಸ್‌ಗಳಿಗೆ ಸೇರಿ ಅಧ್ಯಯನ ಮಾಡಲಾಗದ ಸ್ಥಿತಿ ಹಲವರದ್ದಾಗಿದೆ. ಅನೇಕ ವಿದ್ಯಾರ್ಥಿಗಳು ನೆಚ್ಚಿನ ಕೋರ್ಸ್‌ಗಳನ್ನು ಬಿಟ್ಟು, ಇನ್ನಾವುದೋ ಕೋರ್ಸ್‌ಗಳತ್ತ ಮುಖ ಮಾಡುತ್ತಿರುವುದು ಇದೇ ಕಾರಣಕ್ಕೆ. ವಿದೇಶದಲ್ಲಿ ವ್ಯಾಸಂಗ ಮಾಡಬೇಕು ಎನ್ನುವ ಅನೇಕರ ಕನಸು ಕನಸಾಗಿಯೇ ಉಳಿಯುತ್ತಿದೆ. ಇಂಥ ಹೊತ್ತಿನಲ್ಲಿ ಶಿಕ್ಷಣ ಸಾಲ ಆಶಾಕಿರಣವಾಗಿದೆ.

ಇತ್ತೀಚೆಗಂತೂ ಶಿಕ್ಷಣ ಸಾಲದಲ್ಲಿ ಸಾಕಷ್ಟು ಸುಧಾರಣೆಗಳಾಗಿದ್ದು, ಅಂಡರ್‌ಗ್ರಾಜ್ಯುಯೇಟ್ ಲೋನ್, ಪ್ರೊಫೆಷನಲ್ ಅಥವಾ ಗ್ರಾಜ್ಯುಯೇಟ್ ಲೋನ್, ಕೆರಿಯರ್ ಡೆವಲಪ್‌ಮೆಂಟ್ ಎಜುಕೇಷನಲ್ ಲೋನ್, ಕಾಲೇಜ್ ಪೇರೆಂಟ್ಸ್ ಲೋನ್‌ಗಳಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶವಿದೆ. ಅರ್ಜಿ ಸಲ್ಲಿಸಿದ ತಿಂಗಳೊಳಗೆ ಸಾಲ ದೊರಕಲಿದ್ದು, ಬ್ಯಾಂಕ್‌ಗಳಿಂದ ಪಡೆಯುವ ಶಿಕ್ಷಣ ಸಾಲಕ್ಕೆ ಬಡ ವಿದ್ಯಾರ್ಥಿಗಳಿಗೆ ಬಡ್ಡಿ ಸಬ್ಸಿಡಿಯನ್ನೂ ಜಾರಿಗೆ ತರಲಾಗಿದೆ. ಹೆಣ್ಣು ಮಕ್ಕಳಿಗೆ ಕಡಿಮೆ ಬಡ್ಡಿ ದರ(ಸುಮಾರು ಶೇ0.5) ಇದ್ದು, ಉದ್ಯೋಗ ಪಡೆದ ಆರು ತಿಂಗಳು, ಇಲ್ಲವೇ ವಿದ್ಯಾಭ್ಯಾಸದ ಅವಧಿ ಮುಗಿದ ಒಂದು ವರ್ಷದೊಳಗೆ ಸಾಲದ ಮರು ಪಾವತಿಯ ಕಂತುಗಳನ್ನು ಆರಂಭಿಸಿ, ಬಡ್ಡಿ ಮನ್ನಾದೊಂದಿಗೆ ಸಾಲ ತೀರಿಸಬಹುದಾಗಿದೆ. ವಿದ್ಯಾರ್ಥಿಗಳ

ಕಡಿಮೆ ಬಡ್ಡಿದರ, ಅನುಕೂಲಕಾರಿ ಮರುಪಾವತಿ, ಸರಳ ಪ್ರಕ್ರಿಯೆ

ಅವಶ್ಯಕತೆಗೆ ಅನುಗುಣವಾಗಿ ಕೋರ್ಸ್‌ನ ಪುಸ್ತಕ, ಪ್ರಯಾಣದ ವೆಚ್ಚ (ವಿದೇಶದಲ್ಲಿ ವಿದ್ಯಾಭ್ಯಾಸವಾದರೆ), ಲ್ಯಾಪ್‌ಟಾಪ್ ಖರೀದಿ, ಪರೀಕ್ಷೆ ಮತ್ತು ಬೋಧನಾ ಶುಲ್ಕಗಳು, ಹಾಸ್ಟೆಲ್ ಬಿಲ್, ಪುಸ್ತಕ ಮತ್ತಿತರ ಕಲಿಕಾ ಸಾಧನಗಳ ಖರೀದಿಗೆ ತಕ್ಕಂತೆ ಹಂತಹಂತವಾಗಿ ಹಣವನ್ನು ಬಿಡುಗಡೆ ಮಾಡಲಿದ್ದು, ಹಣ ಬಿಡುಗಡೆ ಮಾಡಿದ ದಿನಾಂಕದಿಂದಷ್ಟೇ ಬಡ್ಡಿ ವಿಧಿಸಲಾಗುತ್ತದೆ



ಯಾವುದೇ ಒತ್ತಡವಿಲ್ಲ: ಬಹುತೇಕ ಎಲ್ಲ ಬ್ಯಾಂಕ್‌ಗಳಲ್ಲೂ ಎಜುಕೇಷನ್ ಲೋನ್ ಲಭ್ಯವಿದ್ದು, ಸಾಲ ಮರುಪಾವತಿಗೆ ಯಾವುದೇ ಒತ್ತಡಗಳು ಇರುವುದಿಲ್ಲ. 10ನೇ ತರಗತಿ ಅಂಕಪಟ್ಟಿ, ಪಾನ್ ಕಾರ್ಡ್, ತಂದೆ–ತಾಯಿಯ ಆದಾಯಕ್ಕೆ ಸಂಬಂಧಿಸಿದ ದಾಖಲಾತಿ ನೀಡಿದರೆ ಸಾಕು. ವಿದೇಶದಲ್ಲಾದರೆ ಪಾಸ್‌ಪೋರ್ಟ್ ಪ್ರತಿ, ವೀಸಾ ಪ್ರತಿ, ವಿದೇಶದ ಶಿಕ್ಷಣ ಸಂಸ್ಥೆಯಲ್ಲಿ ದೊರೆತಿರುವ ಅವಕಾಶ ದೃಢೀಕರಿಸುವ ಪತ್ರವನ್ನು ಬ್ಯಾಂಕ್‌ಗೆ ನೀಡಬೇಕಾಗುತ್ತದೆ. ಶೇ.6.7ರಿಂದ 8.65ರವರೆಗಿನ ಬಡ್ಡಿ ದರದಲ್ಲಿ ಸುಮಾರು 7.5 ಲಕ್ಷ ರೂ., ವರೆಗಿನ ಸಾಲಕ್ಕೆ ಯಾವುದೇ ರೀತಿಯ ಭದ್ರತೆ ಬೇಕಾಗಿರುವುದಿಲ್ಲ. 7.5 ಲಕ್ಷ ರೂ. ಮೀರಿದ ಸಾಲಗಳಾದರೆ, ಠೇವಣಿ, ಮನೆ, ಆಭರಣ ಅಥವಾ ಜಮೀನು ಸೇರಿದಂತೆ ಕೆಲವು ಭದ್ರತೆಗಳನ್ನೂ ಬ್ಯಾಂಕ್‌ಗಳಿಗೆ ನೀಡಬೇಕಾಗುತ್ತದೆ. ಅದಕ್ಕೂ ಮೀರಿದ ಮೊತ್ತವಾದರೆ ಸಾಲ ತೀರಿಸುವ ಸಾಮರ್ಥ್ಯವೊಂದಿದ ವ್ಯಕ್ತಿಯೊಬ್ಬರ ಗ್ಯಾರಂಟಿ ಅಗತ್ಯವಿದೆ. ದೇಶದಲ್ಲಿಯೇ ವಿದ್ಯಾಭ್ಯಾಸ ನಡೆಸುವುದಾದರೆ ಶೇ.5ರಷ್ಟು ಹಾಗೂ ವಿದೇಶದಲ್ಲಾದರೆ ಶೇ 15 ರಷ್ಟು ಮಾರ್ಜಿನ್ (ಸಾಲದ ಮೊತ್ತಕ್ಕೆ ಅನುಗುಣವಾಗಿ) ಹಣವನ್ನು ಕಟ್ಟಬೇಕಾಗುತ್ತದೆ.

ಸಂಕಷ್ಟ ದೂರ: ಕಳೆದ ಮೂರು ವರ್ಷಗಳಿಂದ ಕೊರೊನಾದಿಂದಾಗಿ ಸಾಕಷ್ಟು ಜನರು ಆರ್ಥಿಕ ಸಂಕಷ್ಟ ಅನುಭವಿಸಿದ್ದಾರೆ. ಹಲವರು ಕೆಲಸ ಕಳೆದುಕೊಂಡು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಗದೆ ಪರದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬ್ಯಾಂಕ್‌ಗಳಿಂದ ದೊರೆಯುವ ಶಿಕ್ಷಣ ಸಾಲ ಬಾರೀ ಉಪಯುಕ್ತವಾಗಲಿದೆ. ಅಲ್ಲದೆ ಪೋಷಕರು ಮಕ್ಕಳ ಎದುರೇ ಸಾಲ ಮಾಡಿ ಓದಿಸುತ್ತಿದ್ದರೆ ಮಕ್ಕಳು ಕೂಡ ತಂದೆ–ತಾಯಿಯ ಕಷ್ಟವನ್ನರಿತು ಜವಾಬ್ದಾರಿ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ.

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಪಡೆಯುವ ಪೋಷಕರಿಗೆ ಆದಾಯ ತೆರಿಗೆ ಇಲಾಖೆಯ 'ಸೆಕ್ಷನ್ 80ಇ' ಪ್ರಕಾರ ತೆರಿಗೆ ಹಣ ಕಟ್ಟಲು 8 ವರ್ಷದವರೆಗೆ ವಿನಾಯಿತಿ ಇರಲಿದೆ. ಪೋಷಕರ ಆದಾಯ 6 ಲಕ್ಷ ರೂ., ವರೆಗೆ ಇದ್ದರೆ 6–7 ಲಕ್ಷ ರೂ. ಸಾಲಕ್ಕೆ ಯಾವುದೇ ಭದ್ರತೆ ನೀಡದೆ ಸಾಲ ಪಡೆದುಕೊಳ್ಳಬಹುದು. ಲೋನ್ ಪಡೆಯುವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಯ ಪೋಷಕರು ಸಾಲ ಪಡೆಯುವ ಬ್ಯಾಂಕ್ ಖಾತೆ ಹೊಂದಿದ್ದರೆ ಸಾಕು. www. vidyalakshmi.co.in ವೆಬ್‌ಸೈಟ್‌ನಲ್ಲಿ ರಿಜಿಸ್ಟಾರ್ ಮಾಡಿಕೊಂಡರೆ ಸಾಕು ಬ್ಯಾಂಕ್‌ನವರೇ ಕರೆ ಮಾಡುತ್ತಾರೆ. ಕೆನರಾ ಬ್ಯಾಂಕ್‌ನವರು ನೀಡಿರುವ ಬಾರ್‌ಕೋಡ್ ಸ್ಕ್ಯಾನ್ ಮಾಡಿದರೆ ನೇರವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಜನರಲ್ಲಿ ತಪ್ಪು ತಿಳುವಳಿಕೆ ಇದೆ

ಜನರಲ್ಲಿ ಬ್ಯಾಂಕ್‌ಗಳು ಶಿಕ್ಷಣ ಸಾಲ ನೀಡುವುದಿಲ್ಲ ಎಂಬ ತಪ್ಪು ತಿಳುವಳಿಕೆ ಇದೆ. ಆದರೆ 'ಲೀಡ್ ಬ್ಯಾಂಕ್ ಫಾರ್ ಎಜುಕೇಷನ್' ಎಂದೇ ಕರೆಯಲ್ಪಡುವ ಕೆನರಾ ಬ್ಯಾಂಕ್ ಹಾಗೂ ಇನ್ನಿತರೆ ಬ್ಯಾಂಕ್‌ಗಳಲ್ಲಿಯೂ ಶಿಕ್ಷಣ ಸಾಲ ದೊರೆಯಲಿದೆ. ಮುಖ್ಯವಾಗಿ ಮೈಸೂರಿನ ಬನ್ನೂರು ಮುಖ್ಯ ರಸ್ತೆ ಸಮೀಪದಲ್ಲಿರುವ ಕಾವೇರಿ ಶಿಕ್ಷಣ ಸಂಸ್ಥೆಗೆ ದಾಖಲಾಗುವ ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟದಲ್ಲಿದ್ದರೆ ಕಾಲೇಜಿನ ಮೂಲಕ ಬ್ಯಾಂಕ್ ಸಾಲ ಪಡೆಯಲು ಸಹಕಾರ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದರಿಂದ ಅನುಕೂಲಗಳು ಜಾಸ್ತಿಯಿದ್ದು, ಈಗ ತಾನೇ ಪಿಯುಸಿ ಪಾಸಾದ ವಿದ್ಯಾರ್ಥಿಗಳು ಶಿಕ್ಷಣ ಸಾಲದ ಸದುಪಯೋಗ ಪಡೆದುಕೊಂಡು ನೆಚ್ಚಿನ ಕೋರ್ಸ್‌ಗಳಿಗೆ ಸೇರಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಅನುವಾಗಲಿದೆ.

–ಪ್ರೊ.ರವೀಂದ್ರ, ಫಾರ್ಮಸಿಸ್ಟ್ ವಿಭಾಗ ಕಾವೇರಿ ಶಿಕ್ಷಣ ಸಂಸ್ಥೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ



ಮೈಸೂರಿನ ಅರಮನೆ ಆವರಣದಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಯೋಗಾಸನ ಮಾಡುತ್ತಿರುವುದು.


ಜನಪ್ರತಿನಿಧಿಗಳು, ಜಿಲ್ಲಾಡಳಿತದ ಪರಿಶ್ರಮದ ಫಲ; ಪ್ರಧಾನಿ ಮೋದಿ ಮೈಸೂರು ಭೇಟಿ ಯಶಸ್ವಿ

ಮೈಸೂರು, ಜೂ. 21(ಆರ್‌ಕೆ)– ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಎರಡು ದಿನಗಳ ಮೈಸೂರು ಪ್ರವಾಸ ಕಾರ್ಯಕ್ರಮ ಅಭೂತಪೂರ್ವ ರೀತಿ ಯಶಸ್ವಿಯಾಗಿದೆ.


ಪ್ರಧಾನಮಂತ್ರಿಗಳೂ ಸಾಂಸ್ಕೃತಿಕ ರಾಜಧಾನಿ ಮೈಸೂರಿನ ಸೌಂದರ್ಯ, ಪರಂಪರೆ, ನೈಸರ್ಗಿಕ ವಾತಾವರಣ, ಸುರಕ್ಷತೆ ಮತ್ತು ಭದ್ರತಾ ಕ್ರಮಗಳ ಕಂಡು ಸಂತಸಪಟ್ಟಿದ್ದಾರಲ್ಲದೆ, ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಜನರೊಂದಿಗೆ ಬೆರೆತು ಯೋಗ ಪ್ರದರ್ಶನ ಮಾಡಿದ ಬಗ್ಗೆ ತೃಪ್ತಿಪಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು, ಮೈಸೂರಲ್ಲಿ ಒಂದು ರಾತ್ರಿ ವಾಸ್ತವ್ಯ ಹೂಡಿದ್ದರು. ಚಾಮುಂಡಿಬೆಟ್ಟ, ಸುತ್ತೂರು ಶಾಖಾ ಮಠ ಸೇರಿದಂತೆ ಎರಡು ದಿನದಲ್ಲಿ 8 ಸ್ಥಳಗಳಲ್ಲಿ ಅವರ ಕಾರ್ಯಕ್ರಮವಿತ್ತು. ಇಲ್ಲೆಲ್ಲಾ ಬಂದೋಬಸ್ತ್, ಕಟ್ಟೆಚ್ಚರ ವಹಿಸಲಾಗಿತ್ತು.

ಶಿಷ್ಟಾಚಾರ ಪಾಲನೆ, ವಾಸ್ತವ್ಯ, ಸುರಕ್ಷಾ ಸಂಚಾರ, ಊಟೋಪಚಾರ, ಭದ್ರತೆಯಂತಹ ಜವಾಬ್ದಾರಿಗಳು ಸರ್ಕಾರ, ಜಿಲ್ಲಾಡಳಿತಕ್ಕೆ ಸವಾಲಾಗಿತ್ತು. ಮಹಾರಾಜ ಕಾಲೇಜು ಮೈದಾನ, ಅರಮನೆ ಆವರಣದಂತಹ ಬಯಲು ಪ್ರದೇಶ (Open Field)ಗಳಲ್ಲಿ ಕಾರ್ಯಕ್ರಮ, ರಾತ್ರಿ ವೇಳೆ ಚಾಮುಂಡಿಬೆಟ್ಟ ಹಾಗೂ ತಪ್ಪಲಿನಲ್ಲಿ ಜೆಎಸ್‌ಎಸ್ ಮಠಕ್ಕೆ ಪ್ರಧಾನಮಂತ್ರಿಗಳನ್ನು ಬೆಂಗಾವಲು ವಾಹನಗಳಲ್ಲಿ ಕರೆತರುವಂತಹ ಸವಾಲಿನ ಕೆಲಸವನ್ನು ಮೈಸೂರು ಪೊಲೀಸರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಕಳೆದ 20 ದಿನಗಳಿಂದ ನಿರಂತರ ಪರಿಶ್ರಮಪಟ್ಟು, ಸಮನ್ವಯತೆಯೊಂದಿಗೆ ಜನಪ್ರತಿನಿಧಿಗಳು, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಪ್ರಧಾನಿಗಳ ಎರಡು ದಿನದ ಭೇಟಿಯನ್ನು ಯಶಸ್ವಿಗೊಳಿಸುವಲ್ಲಿ ಶ್ರಮಿಸಿದ್ದಾರೆ. ಅಧಿಕಾರಿ–ಸಿಬ್ಬಂದಿಗಳ ಸಮಯಪ್ರಜ್ಞೆ, ಪರಿಶ್ರಮ ಹಾಗೂ ಸಾರ್ವಜನಿಕರು, ಸಂಘ–ಸಂಸ್ಥೆಗಳ ಸಹಕಾರದಿಂದ ಪ್ರಧಾನಿಗಳ ಮೈಸೂರು ಕಾರ್ಯಕ್ರಮಗಳು ಯಾವುದೇ ಗೊಂದಲಗಳಿಲ್ಲದೇ ಸಂಪನ್ನವಾಗಿದೆ.



ಮುಖ್ಯಮಂತ್ರಿ ಶ್ಲಾಘನೆ: ಇಂದು ಪ್ರಧಾನ ಮಂತ್ರಿಗಳನ್ನು ಬೀಳ್ಕೊಡುವಾಗ ಮಂಡಕಳ್ಳಿ ವಿಮಾನ ನಿಲ್ದಾಣ ದಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳು ಪ್ರಧಾನಿಗಳ ಕಾರ್ಯಕ್ರಮಕ್ಕೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸಿದ್ದರ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.





ಸ್ಥಳೀಯ ಪೊಲೀಸ್ ಅಧಿಕಾರಿಗಳ ಶ್ರಮ: ಯಶಸ್ವಿ ಬಂದೋಬಸ್ತ್, ಸುರಕ್ಷತಾ ಕ್ರಮ ವಹಿಸುವಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಕಾನ್‌ಸ್ಟೇಬಲ್ ಸಮುದಾಯದ ಪರಿಶ್ರಮ ಪ್ರಮುಖವಾಗಿರುವುದರಿಂದ ಯಶಸ್ಸಿನ ಕ್ರೆಡಿಟ್ ಅವರಿಗೇ ಸಲ್ಲಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ದೊಡ್ಡ ಸವಾಲಾಗಿತ್ತು: ನಾಲ್ಕೂ ಜಿಲ್ಲೆಗಳನ್ನೊಳಗೊಂಡ ವಿಧಾನ ಪರಿಷತ್ ಚುನಾವಣೆ ಜೊತೆಗೇ ಪ್ರಧಾನಮಂತ್ರಿಗಳ ಭೇಟಿ ಕಾರ್ಯಕ್ರಮ ನಿಭಾಯಿಸುವುದು ಸವಾಲಾಗಿತ್ತು. ಗಣ್ಯರ ಆಗಮನ, ಶಿಷ್ಟಾಚಾರ ಪಾಲನೆ, 8 ಸ್ಥಳ ಗಳಲ್ಲಿ ಭದ್ರತೆ, ಸುರಕ್ಷತೆಗಳನ್ನು ನಿಭಾಯಿಸುವುದು ಸಾಮಾನ್ಯ ಕೆಲಸವಲ್ಲ. ಆದರೂ ಎಲ್ಲರ ಪರಿಶ್ರಮದಿಂದ ಎಲ್ಲವೂ ಸುಸೂತ್ರವಾಗಿ ನಡೆದಿದೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ತಿಳಿಸಿದ್ದಾರೆ.



ಪ್ರಧಾನಿಗಳ ಆಗಮನದ ಹಿನ್ನೆಲೆಯಲ್ಲಿ ರಸ್ತೆ, ಫುಟ್‌ಪಾತ್ ಅಭಿವೃದ್ಧಿಯಾದವು. ಅರಮನೆ ಸುತ್ತಲಿನ ಹಾಗೂ ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ವಿದ್ಯುದ್ದೀಪಾಲಂಕಾರ, ಎಲ್ಲೆಡೆ ಸ್ವಚ್ಛತೆ ಕಾರ್ಯ ನಡೆದಿದೆ. ಗಣ್ಯರು, ನಾಗರಿಕರಿಗೂ ಖುಷಿಯಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳ ಸಂಘಟಿತ ಕೆಲಸದಿಂದ ಈ ಬೃಹತ್ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಿವೆ ಎಂದು ಅವರು ತಿಳಿಸಿದರು.

ನಿರಂತರ ಟೀಂ ವರ್ಕ್: ಅತೀ ಹೆಚ್ಚು ಭದ್ರತೆ ಇರುವ ಪ್ರಧಾನ ಮಂತ್ರಿಗಳ 2 ದಿನದ ಭೇಟಿ, ವಾಸ್ತವ್ಯ ಹಾಗೂ ಕಾರ್ಯಕ್ರಮಗಳಲ್ಲಿ ಭದ್ರತಾ ವ್ಯವಸ್ಥೆ ಮಾಡುವ ಮಹತ್ತರ ಕೆಲಸವನ್ನು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಜವಾಬ್ದಾರಿಯಿಂದ ನಿರ್ವಹಿಸಿ ದ್ದಾರೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ತಿಳಿಸಿದ್ದಾರೆ.



ಗೃಹ ಸಚಿವರು, ಡಿಜಿ. ಎಡಿಜಿರವರ ಮಾರ್ಗದರ್ಶನದಲ್ಲಿ ಕೈಗೊಂಡ ಬಂದೋಬಸ್ತ್‌ನ ನಮ್ಮ ಟೀಂ ವರ್ಕ್ ಕೆಲಸ ಮಾಡಿದೆ. ಮೈಸೂರು ನಗರದ 1,500 ಮಂದಿ ಜೊತೆಗೆ ಹೊರ ಜಿಲ್ಲೆಗಳಿಂದ ಕರೆಸಿಕೊಂಡಿದ್ದ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಅವರು ತಿಳಿಸಿದರು.

ಸಿವಿಲ್, ಸಿಎಆರ್, ವೈರ್‌ಲೆಸ್, ಸ್ಪೆಷಲ್ ಬ್ರಾಂಚ್, ಐಬಿ, ಸ್ಟೇಟ್ ಇಂಟಲಿಜೆನ್ಸ್, ಆಂಟಿ ನಕ್ಸಲ್ ಪಡೆ, ಕೆಎಸ್‌ಆರ್‌ಪಿ, ಅಡಿಷನಲ್ ಪೊಲೀಸ್ ಪಡೆಗಳ ಕಾರ್ಯಕ್ಷಮತೆ, ಡಿಸಿಪಿ, ಎಸಿಪಿಗಳು ನಿರಂತರ 20 ದಿನಗಳಿಂದ ಬಂದೋಬಸ್ತ್ ಕೆಲಸದಲ್ಲಿ ನಿರತರಾಗಿ ಯೋಜನೆಯಂತೆ ಕಾರ್ಯನಿರ್ವಹಿಸಿದ್ದರಿಂದ ಪ್ರಧಾನಮಂತ್ರಿಗಳ ಭದ್ರತಾ ವ್ಯವಸ್ಥೆ ಸಫಲಗೊಳಿಸಲು ಸಾಧ್ಯವಾಯಿತು. ಆ ಬಗೆ ಸಿಎಂ, ಗೃಹ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಡಿಜಿಪಿ, ಎಡಿಜಿಪಿರವರ ಮಾರ್ಗದರ್ಶನವೂ ನಮಗೆ ಸಹಕಾರಿಯಾಯಿತು ಎಂದರು.

ಚಾಮುಂಡಿಬೆಟ್ಟಕ್ಕೆ ರಾತ್ರಿ ವೇಳೆ ಪ್ರಧಾನಿಗಳನ್ನು ಕರೆದೊಯ್ದು, ಸುರಕ್ಷಿತವಾಗಿ ಕರೆತರಲು ಮಾಡಿದ ಪೂರ್ವಭಾವಿ ತಯಾರಿ, ಎಎನ್‌ಎಸ್ ಟೀಂ ಕಾರ್ಯ ಶ್ಲಾಘನೀಯ. ಬೆಟ್ಟದಲ್ಲಿ ಡ್ರೋಣ್ ಕ್ಯಾಮರಾ ಬಳಸಿ ಕಟ್ಟೆಚ್ಚರ ವಹಿಸಿದ್ದುದು ಹೆಚ್ಚು ಜವಾಬ್ದಾರಿಯುತ ಕೆಲಸ ಎಂದು ಪೊಲೀಸ್ ಆಯುಕ್ತ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳ ನಿರಂತರ ಸಲಹೆ, ಜಿಲ್ಲಾಧಿಕಾರಿಗಳು, ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು, ಸಂಘ–ಸಂಸ್ಥೆಗಳು, ಮಾಧ್ಯಮದವರ ಸಹಕಾರದಿಂದ ಪ್ರಧಾನಮಂತ್ರಿಗಳ ಭೇಟಿ, ಕಾರ್ಯಕ್ರಮಗಳ ಯಶಸ್ವಿ ಬಂದೋಬಸ್ತ್ ಸಾಧ್ಯವಾಯಿತು ಎಂದು ಅವರು ತಿಳಿಸಿದರು.



ಕೆಲವರಿಗೆ ರೋಮಾಂಚನ; ಹಲವರಿಗೆ ಸಂತಸದ ಕ್ಷಣ!

ಮೈಸೂರು ರಾಜಮನೆತನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಯೋಗ ಆರಂಭವಾಯಿತು. ಅಂದಿನಿಂದ ಯೋಗ ವರ್ಷದಿಂದ ವರ್ಷಕ್ಕೆ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ. ವಿಶ್ವದ ಹಲವು ರಾಷ್ಟ್ರಗಳಲ್ಲಿ ವ್ಯಾಪಿಸಿದೆ. ಯೋಗ ಈಗ ಭಾರತದ ಬ್ರಾಂಡ್ ಆಗಿದೆ. ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮೈಸೂರಿನ ಅರಮನೆ ಆವರಣದಲ್ಲಿ ಏರ್ಪಡಿಸಿದ್ದ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡು ಯೋಗಾಸನ ಮಾಡಿದ್ದು ವಿಶೇಷ. ಇದು ಮೈಸೂರಿನ ಜನರಿಗೆ ಖುಷಿ ತಂದಿದೆ. ಜತೆಗೆ, ನಮ್ಮ ನಿವಾಸಕ್ಕೆ ಭೇಟಿ ನೀಡುವಂತೆ ಪ್ರಧಾನಿ ಅವರಿಗೆ ಪತ್ರ ಬರೆಯಲಾಗಿತ್ತು. ಅದಕ್ಕೆ ಸ್ಪಂದಿಸಿ ನಮ್ಮ ಮನೆಗೆ ಬಂದು, ಉಪಾಹಾರ ಸೇವನೆ ಮಾಡಿದರು. ಇದೊಂದು ಅಪರೂಪದ ಸಂಗತಿಯೂ ಹೌದು.

– ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮತ್ತು ಪ್ರಧಾನಿ ಮೋದಿ ಅವರು ಜನರೊಂದಿಗೆ ಯೋಗಾಸನ ಮಾಡಿದ್ದು ಸಂತೋಷ ತಂದಿದೆ. ಪ್ರತಿಯೊಬ್ಬರು ನಿತ್ಯ ಯೋಗಾಭ್ಯಾಸ ಮಾಡಬೇಕು.

- ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥ

ಮೋದಿ ಅವರ ಅಕ್ಕಪಕ್ಕ ಯೋಗ ಮಾಡಿದ್ದು ನಮ್ಮ ಸುಯೋಗ. ಕನಸಿನಲ್ಲೂ ನಾವು ಪ್ರಧಾನಿಯೊಂದಿಗೆ ಯೋಗ ಮಾಡುತ್ತೇವೆ ಎಂದುಕೊಂಡಿರಲಿಲ್ಲ. ಈ ಅವಕಾಶ ಕಲ್ಪಿಸಿಕೊಟ್ಟ ನಮ್ಮ ಪೊಲೀಸ್ ವರಿಷ್ಠಾಧಿಕಾರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಯೋಗವನ್ನು ಪ್ರತಿಯೊಬ್ಬರು ನಿತ್ಯ ಮಾಡಬೇಕು.

– ಸುಷ್ಮಾ ಮತ್ತು ಲಕ್ಷ್ಮೀ, ಸಬ್ ಇನ್ಸ್‌ಪೆಕ್ಟರ್‌ಗಳು

ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದು ಖುಷಿ ತಂದಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಮೋದಿ ಅವರೊಟ್ಟಿಗೆ ಯೋಗ ಮಾಡಿದ್ದು ಸಂತಸ ತಂದಿದೆ. ಮೋದಿಯವರು ಭಾಗವಹಿಸಿರುವ ಯೋಗ ದಿನ ಐತಿಹಾಸಿಕ ಕ್ಷಣ. ಇಂತಹ ದಿನ ಜೀವನದಲ್ಲಿ ಮತ್ತೆ ಬಾರದು. ನಾವು ಮೋದಿಯವರೊಟ್ಟಿಗೆ ಯೋಗ ಮಾಡುತ್ತೇವೆ ಎಂದುಕೊಂಡಿರಲಿಲ್ಲ. ಕೊನೆ ಘಳಿಗೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಪಾಸ್ ಸಿಕ್ಕಿತ್ತು. ಅಲ್ಲಿಯವರೆಗೂ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆ ಎಂಬ ನಂಬಿಕೆಯೇ ಇರಲಿಲ್ಲ. ಈ ಕ್ಷಣವನ್ನು ನನ್ನ ಜೀವನದಲ್ಲಿ ಎಂದಿಗೂ ಮರೆಯಲು ಸಾಧ್ಯವಿಲ್ಲ.

– ರಕ್ಷಾ, ಯೋಗಪಟು

ಅಂತಾರಾಷ್ಟ್ರೀಯ ಯೋಗ ದಿನದಂದು ಪ್ರಧಾನಿಯವರೊಟ್ಟಿಗೆ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತಸದ ವಿಷಯ. ಮೋದಿಯವರನ್ನು ನೋಡಲು ನಾವೆಲ್ಲರೂ ಉತ್ಸುಕರಾಗಿದ್ದೆವು. ಕಳೆದ ಜೂ.12ರಿಂದಲೂ ವಿದ್ಯಾರ್ಥಿಗಳೊಡನೆ ಯೋಗ ತಾಲೀಮಿಗೆ ಬರುತ್ತಿದ್ದೆವು. ನಮಗೆ ಕೊನೆ ಕ್ಷಣದಲ್ಲಿ ಕಾರ್ಯಕ್ರಮಕ್ಕೆ ಪಾಸ್ ದೊರೆಯಿತು. ನಮ್ಮ ವಿದ್ಯಾರ್ಥಿಗಳೆಲ್ಲರೂ ಬಹಳ ಖುಷಿಯಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

– ಮಮತಾ, ಶಿಕ್ಷಕಿ, ಪ್ರಗತಿ ವಿದ್ಯಾ ಕೇಂದ್ರ ಶಾಲೆ

ಸಿಎಂ ಯೋಗ ಮಾಡಲು ಪರದಾಟ


ಮಂಡಿ ನೋವಿನ ಕಾರಣ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯೋಗ ಮಾಡುವಾಗ ಪ್ರಯಾಸಪಡಬೇಕಾಯಿತು. ಕೆಲವು ಸಂದರ್ಭದಲ್ಲಿ ಹಾಗೆ ಕುಳಿತರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಲವು ಆಸನಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದರು. ರಾಜ್ಯಪಾಲ ಥಾಮರ್‌ಚಂದ್ ಗೆಹ್ಲೋಟ್, ಸಚಿವ ಡಾ.ಕೆ. ಸುಧಾಕರ್, ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಹ ಸುಲಲಿತವಾಗಿ ಯೋಗಾಸನ ಪ್ರದರ್ಶಿಸಿ ಗಮನ ಸೆಳೆದರು.

ಸೂಕ್ತ ಸೈಜ್, ಟಿ–ಶರ್ಟ್ ಸಿಗದೆ ಯೋಗ ಪ್ರದರ್ಶನದಿಂದ ದೂರವುಳಿದ ಶಾಸಕ ಹರ್ಷವರ್ಧನ್

ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ನಂಜನಗೂಡು ಶಾಸಕ ಹರ್ಷವರ್ಧನ್ ಅರಮನೆ ಆವರಣಕ್ಕೆ ಆಗಮಿಸಿದ್ದರು. ಅವರಿಗೆ ಆಯುಷ್ ಇಲಾಖೆ ನೀಡಿದ ಟಿ–ಶರ್ಟ್ ಚಿಕ್ಕ ಸೈಜ್‌ದ್ದಾಗಿತ್ತು. ಅದನ್ನು ಧರಿಸಲಾಗದೇ ಕೊನೆಗೆ ಪತ್ರಕರ್ತರ ಗ್ಯಾಲರಿಗೆ ಹೋಗಿ ಕುಳಿತು, ಯೋಗ ಪ್ರದರ್ಶಿಸುವ ಅವಕಾಶದಿಂದ ವಂಚಿತರಾದರು.

ಡಿಜಿಟಲ್ ಯೋಗ ಪ್ರದರ್ಶನದಲ್ಲಿ ಯೋಗದ ಪರಿಪೂರ್ಣ ಮಾಹಿತಿ

ಪ್ರಧಾನಿ ಮೋದಿ ಉದ್ಘಾಟನೆ



ಮೈಸೂರು, ಜೂ.21(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಆಯುಷ್ ಇಲಾಖೆ ವತಿಯಿಂದ ಏರ್ಪಡಿಸಿದ್ದ 'ಯೋಗ ಸಂಬಂಧಿತ ಡಿಜಿಟಲ್ ಪ್ರದರ್ಶನ'ವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಮುಕ್ತಾಯವಾದ ಬಳಿ ಹೋಟೆಲ್‌ಗೆ ತೆರಳಿ ತಮ್ಮ ಸಹಜ ಪೋಷಾಕಿನೊಂದಿಗೆ ವಸ್ತು ಪ್ರದರ್ಶನ ಆವರಣಕ್ಕೆ ಆಗಮಿಸಿ, ಡಿಜಿಟಲ್ ಪ್ರದರ್ಶನದ ಉದ್ಘಾಟನೆ ನೆರವೇರಿಸಿದರು. ನಂತರ ಮಳಿಗೆಗಳ ವೀಕ್ಷಣೆ ನಡೆಸಿ, ಮಾಹಿತಿ ಪಡೆದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದಡಿಯಲ್ಲಿ ಬರುವ ಆಯುಷ್ ಸಂಸ್ಥೆಗಳ 146 ಮಳಿಗೆಗಳಿದ್ದು, ಯೋಗ ಸಂಸ್ಥೆಗಳು, ನವೋದ್ಯಮ ಯೋಗ, ಯೋಗ ತಂತ್ರಜ್ಞಾನವಾಗಿ ಟ್ರೆಂಡ್ ಆಗುತ್ತಿರುವುದು, ಸ್ಮಾರ್ಟ್ ಯೋಗ ಬ್ರ್ಯಾಂಡ್, ಯಾವ ಸಮಸ್ಯೆಗೆ ಯಾವ ಯೋಗಾಸನ ಪರಿಹಾರ, ಹೀಗೆ ಹಲವು ಮಹತ್ವದ ವಿಚಾರಗಳ ಬಗ್ಗೆ ಡಿಜಿಟಲ್ ಮೂಲಕ ಮಾಹಿತಿ ಕಲ್ಪಿಸಲಾಗಿದೆ. ಯೋಗದ ಇತಿಹಾಸ ಮತ್ತು ಪರಿಣಾಮ ತಿಳಿಯಪಡಿಸುವ ವರ್ಚುವಲ್ ರಿಯಾಲಿಟಿ(ವಿಆರ್)ಯಂತಹ ತಂತ್ರಜ್ಞಾನವನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಅರಮನೆ ಹೊರಾವರಣದಲ್ಲಿ ಎಲ್‌ಇಡಿ ಪರದೆ ಹಾಕಬೇಕಿತ್ತು...

ಅರಮನೆ ಉತ್ತರ ದ್ವಾರದ ಎರಡು ಗೇಟ್‌ಗಳಲ್ಲಿ ನೆರೆದಿದ್ದ ಸಾರ್ವಜನಿಕರು, ಅರಮನೆ ಒಳಾವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಯೋಗ ಪ್ರದರ್ಶನ ವೀಕ್ಷಿಸುತ್ತಿದ್ದರು. ದೂರದಿಂದ ಸರಿಯಾಗಿ ಪ್ರದರ್ಶನ ಕಾಣದ ಹಿನ್ನೆಲೆಯಲ್ಲಿ ಬೇಸರ ವ್ಯಕ್ತಪಡಿಸುತ್ತಿದ್ದ ಅವರು, ಅರಮನೆ ಹೊರಾವರಣದಲ್ಲಿ ಎಲ್‌ಇಡಿ ಪರದೆ ಅಳವಡಿಸಿ, ನೇರ ಪ್ರಸಾರ ಮಾಡಬಹುದಿತ್ತು. ಇದರಿಂದ ಒಳ ಹೋಗಲು ಪಾಸ್ ಇಲ್ಲದ ನಮ್ಮಂತಹವರು ಹೊರಾವರಣದಲ್ಲಿಯಾದರೂ ಕಾರ್ಯಕ್ರಮ ವೀಕ್ಷಿಸಲು ಸಾಧ್ಯವಾಗುತ್ತಿತ್ತು ಎಂದು ಪರಸ್ಪರ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದುದ್ದು ಕಂಡು ಬಂದಿತು.






ಯೋಗ ದಿನಾಚರಣೆಯಿಂದ ವಿಶ್ವವೇ ಮೈಸೂರಿನತ್ತ ನೋಡುವಂತಾಯ್ತು

ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧನ್ಯವಾದ

ಮೈಸೂರು, ಜೂ. 21(ಆರ್‌ಕೆ)– ಈ ಬಾರಿಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಿಂದು ವಿಶ್ವವೇ ಮೈಸೂರಿನತ್ತ ನೋಡುವಂತಾಗಲು ಕಾರಣರಾದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧನ್ಯವಾದ ಹೇಳಿದ್ದಾರೆ.



ಮೈಸೂರಿನ ಅರಮನೆ ಆವರಣದಲ್ಲಿ ಇಂದು ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೇವಲ ಕೆಲವೇ ಸಂಸ್ಥೆಗಳಿಗೆ ಸೀಮಿತವಾಗಿದ್ದ ಯೋಗದ ಮಹತ್ವವನ್ನು ಪ್ರಪಂಚಕ್ಕೇ ಸಾರಿದ ಪ್ರಧಾನಿಗಳು, ಎಲ್ಲೆಡೆ ಈ ದಿನವನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಆಚರಿಸುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ಇಂದು ಸಾಂಸ್ಕೃತಿಕ ರಾಜಧಾನಿ ಮೈಸೂರಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಿ ತಾವೇ ಭಾಗವಹಿಸಿ ಸಾವಿರಾರು ಯೋಗಪಟುಗಳೊಂದಿಗೆ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿರುವುದರಿಂದ ಇಡೀ ವಿಶ್ವವೇ ಮೈಸೂರಿನತ್ತ ನೋಡುವಂತಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಯೋಗವು ಮಾನವೀಯತೆ, ಸಮಾಜದ ಸ್ವಾಸ್ಥ್ಯ ಕಾಪಾಡುವು ದಲ್ಲದೆ, ಇಡೀ ವಿಶ್ವವನ್ನೇ ಒಂದು ಮಾಡುತ್ತದೆ, ಇಂತಹ ಐತಿಹಾಸಿಕ ಘಟನೆಗೆ ಕಾರಣರಾಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮೈಸೂರು ಹಾಗೂ ರಾಜ್ಯದ ಜನತೆ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಬಸವರಾಜ ಬೊಮ್ಮಾಯಿ ನುಡಿದರು.



ಸಂಸದ ಪ್ರತಾಪ್ ಸಿಂಹ ಪುತ್ರಿ ವಿಪಂಚಿ ಸಿಂಹ ಧ್ಯಾನಯೋಗ



ಅರಮನೆ ಅಂಗಳದಲ್ಲಿ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನೆರವೇರಿದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಭಾಗಿಯಾಗಿದ್ದ ಬಿಸಿಎಂ ಹಾಸ್ಟೆಲ್‌ಗಳ ವಿದ್ಯಾರ್ಥಿಗಳು ಹಾಗೂ ನಿಲಯ ಪಾಲಕರು ಹಾಗೂ ಇಲಾಖೆ ಅಧಿಕಾರಿಗಳು ಅರಮನೆ ಬಳಿ ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಮುಷ್ಕರ ನಿರತ ಸಂಗೀತ ವಿವಿ ನೌಕರರಿಂದ ಯೋಗ ಪ್ರದರ್ಶನ

ಮೈಸೂರು, ಜೂ.21(ಜಿಎ)– ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮುಷ್ಕರ ನಡೆಸುತ್ತಿರುವ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾ ನಿಲಯದ ನೌಕರರು ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ವಿಶ್ವವಿದ್ಯಾನಿಲಯದ ಮುಂಭಾಗ ಮುಷ್ಕರ ನಡೆಯುತ್ತಿರುವ ಸ್ಥಳದಲ್ಲಿಯೇ ನೌಕರರು ಇಂದು ಬೆಳಗ್ಗೆ ಸಾಮೂಹಿಕವಾಗಿ ಯೋಗ ಪ್ರದರ್ಶನ ಮಾಡಿ ತಾವು ಮುಷ್ಕರ ನಡೆಸುತ್ತಿದ್ದರೂ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮರೆತ್ತಿಲ್ಲ ಎಂದು ಸಾರಿದರು. ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಮತ್ತಿತರರು ಸಾಥ್ ನೀಡಿದರು.

ಇಂದು ದೇಶವು ಅಂತರರಾಷ್ಟ್ರೀಯ ಯೋಗ ದಿನ ಆಚರಿಸುತ್ತಿದೆ. ವಿಶ್ವ ಸಂಗೀತ ದಿನವೂ ಇಂದೇ ಆಗಿದ್ದು, ಸಂಗೀತ ವಿವಿಯಲ್ಲಿ ಇರುವ ಅಪಸ್ವರಗಳು ಇನ್ನೂ ನಿಂತಿಲ್ಲ. ಹಸಿವು, ಸಂಕಟ, ರಾಗ–ದ್ವೇಷಗಳ ನಡುವೇ ಸಂಗೀತ ವಿವಿಯೂ ಯೋಗ ಮತ್ತು ಸಂಗೀತ ದಿನವನ್ನು ಆಚರಿಸುವ ನೈತಿಕತೆಯನ್ನು ಕಳೆದುಕೊಳ್ಳುತ್ತಿದೆ ಎಂದು ಪ್ರತಿಭಟನಾ ನಿರತರು ಆಕ್ರೋಶದಿಂದ ನುಡಿದರು.

ಹೊರ ಹಾಕಲ್ಪಟ್ಟ 21 ಮಂದಿ ಬೋಧಕೇತರ ಸಿಬ್ಬಂದಿಗಳು ನಡೆಸುತ್ತಿರುವ ಮುಷ್ಕರವು 122ನೇ ದಿನಕ್ಕೆ ಕಾಲಿಟ್ಟಿದ್ದು, ಸರಣಿ ಉಪವಾಸವೂ 64ನೇ ದಿನಕ್ಕೆ ತಲುಪಿದೆ. ಯೋಗ ಮತ್ತು ಇತರೇ ಜವಾಬ್ದಾರಿಗಳಲ್ಲಿ ತೊಡಗಿಸಿಕೊಂಡಿದ್ದ ಎಲ್ಲಾ ಪ್ರತಿನಿಧಿಗಳು ಈ ಮಾನವೀಯ ಸಮಸ್ಯೆಗೆ ಸ್ಪಂದಿಸಲಿ ಎಂದು ಅವರು ಇದೇ ವೇಳೆ ಆಗ್ರಹಿಸಿದ್ದಾರೆ.



ದೆಹಲಿಗೆ ಮರಳಿದ ಮೋದಿ

ಮೈಸೂರು, ಜೂ. 21(ಆರ್‌ಕೆ)– 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ನೇರವಾಗಿ ನವದೆಹಲಿಗೆ ಹಿಂತಿರುಗಿದರು.

ಇಂದು ಬೆಳಗ್ಗೆ 10.36ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ವಾಯುಪಡೆಯ ವಿಶೇಷ ವಿಮಾನದಲ್ಲಿ ನವದೆಹಲಿಗೆ ಪ್ರಯಾಣ ಬೆಳೆಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಚಿವ ಡಾ. ಸುಧಾಕರ್, ಸಂಸದ ಪ್ರತಾಪ್ ಸಿಂಹ, ಮೇಯರ್ ಸುನಂದಾ ಪಾಲನೇತ್ರ, ಶಾಸಕರು, ಬಿಜೆಪಿ ಮುಖಂಡರು, ಹಿರಿಯ ಅಧಿಕಾರಿಗಳು ಹಾಜರಿದ್ದು, ಪ್ರಧಾನಿಗಳನ್ನು ಬೀಳ್ಕೊಟ್ಟರು.

ಸೋಮವಾರ ಸಂಜೆ 5.40 ಗಂಟೆಗೆ ಬೆಂಗಳೂರಿನಿಂದ ವಾಯು ಪಡೆ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಓವಲ್ ಮೈದಾನದಲ್ಲಿ ಬಂದಿಳಿದಿದ್ದ ನರೇಂದ್ರ ಮೋದಿ ಅವರು, ಸಂಜೆ ಮಹಾರಾಜ ಕಾಲೇಜು ಮೈದಾನದಲ್ಲಿ ಸರ್ಕಾರಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಬಳಿಕ, ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡ ನಂತರ ಸುತ್ತೂರು ಶಾಖಾ ಮಠ, ನಂತರ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ ಅರಮನೆ ಆವರಣದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡು, ವಸ್ತುಪ್ರದರ್ಶನ ಮೈದಾನದಲ್ಲಿ ಆಯುಷ್ ಇಲಾಖೆ ವಸ್ತುಪ್ರದರ್ಶನ ಉದ್ಘಾಟಿಸಿದರು. ನಂತರ ಅರಮನೆಯಲ್ಲಿ ರಾಜಮನೆತನದವರೊಂದಿಗೆ ಉಪಹಾರ ಸೇವಿಸಿ ಅಲ್ಲಿಂದ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ ದೆಹಲಿಗೆ ವಾಪಸ್ಸಾದರು.

ಈ ಹಿಂದೆ ಪ್ರಧಾನಿಗಳು ಕೇರಳದ ತಿರುವನಂತಪುರಂಗೆ ತೆರಳುವ ಕಾರ್ಯಕ್ರಮವಿತ್ತು. ಅಂತಿಮ ಘಳಿಗೆಯಲ್ಲಿ ಕೇರಳ ಭೇಟಿ ರದ್ದುಗೊಳಿಸಿ, ಮಂಡಕಳ್ಳಿ ವಿಮಾನ ನಿಲ್ದಾಣದಿಂದ ನೇರವಾಗಿ ದೆಹಲಿಗೆ ವಾಪಸ್ಸಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು, ಪ್ರತಿಪಕ್ಷಗಳ ಜಂಟಿ ಅಭ್ಯರ್ಥಿ ಯಶ್ವಂತ್ ಸಿನ್ಹಾ

ನವದೆಹಲಿ ಜೂ.21– ಬಿಜೆಪಿ ನೇತೃತ್ವದ ಎನ್‌ಡಿಎ, ರಾಷ್ಟ್ರಪತಿ ಚುನಾವಣೆಗೆ ಝಾರ್ಖಂಡ್‌ನ ಮಾಜಿ ರಾಜ್ಯಪಾಲರು ಹಾಗೂ ಬುಡಕಟ್ಟು ಸಮುದಾಯದ ನಾಯಕಿ ದ್ರೌಪದಿ ಮುರ್ಮು ಅವರನ್ನು ತನ್ನ ಅಭ್ಯರ್ಥಿ ಎಂದು ಮಂಗಳವಾರ ಘೋಷಿಸಿದೆ.



ದ್ರೌಪದಿ ಮುರ್ಮು


ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಇದೇ ಮೊದಲ ಬಾರಿಗೆ ಬುಡಕಟ್ಟು ಸಮುದಾಯದ ಮಹಿಳೆಗೆ ಆದ್ಯತೆ ನೀಡಲಾಗಿದ್ದು, ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಮಾಜಿ ರಾಜ್ಯಪಾಲೆ ದ್ರೌಪದಿ ಮುರ್ಮು ಅವರ ಹೆಸರನ್ನು ಘೋಷಿಸುತ್ತಿರುವುದಾಗಿ ನಡ್ಡಾ ತಿಳಿಸಿದರು.

ರಾಷ್ಟ್ರಪತಿ ಚುನಾವಣೆ ಅಭ್ಯರ್ಥಿ ಆಯ್ಕೆಗೆ ಮಂಗಳವಾರ ಸಂಜೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಸಂಸದೀಯ ಮಂಡಳಿ ಸಭೆ ನಡೆಯಿತು. ಸಭೆ ಬಳಿಕ ಪಕ್ಷದ ತೀರ್ಮಾನ ಪ್ರಕಟಿಸಲಾಗಿದೆ ಎಂದು ಅವರು ತಿಳಿಸಿದರು.

ಯಶವಂತ್ ಸಿನ್ಹಾ: ಕಾಂಗ್ರೆಸ್, ಟಿಎಂಸಿ ಮತ್ತು ಸಮಾಜವಾದಿ ಪಕ್ಷ ಸೇರಿದಂತೆ 13 ಪ್ರತಿಪಕ್ಷಗಳ ಒಮ್ಮತದ ರಾಷ್ಟ್ರಪತಿ ಅಭ್ಯರ್ಥಿಯಾಗಿ ಕೇಂದ್ರದ ಮಾಜಿ ಸಚಿವ ಯಶವಂತ್ ಸಿನ್ಹಾ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ.

ಪ್ರತಿಪಕ್ಷಗಳ ರಾಷ್ಟ್ರಪತಿ ಅಭ್ಯರ್ಥಿ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಇಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸಂಸತ್ ಭವನದಲ್ಲಿ ಕರೆದಿದ್ದ ಸಭೆಯಲ್ಲಿ ಸಿನ್ಹಾ ಅವರ ಹೆಸರನ್ನು ಅಂತಿಮಗೊಳಿಸಲಾಗಿದೆ.

ಶರದ್ ಪವಾರ್, ಗೋಪಾಲಕೃಷ್ಣ ಗಾಂಧಿ ಮತ್ತು ಫಾರೂಕ್ ಅಬ್ದುಲ್ಲಾ ಅವರು ತಾವು ಪ್ರತಿಪಕ್ಷಗಳ ರಾಷ್ಟ್ರಪತಿ ಅಭ್ಯರ್ಥಿಯಾಗುವುದಿಲ್ಲ ಎಂದು ಹೇಳಿದ ನಂತರ ಸಿನ್ಹಾ ಅವರ ಹೆಸರು ಕೇಳಿಬಂದಿತ್ತು.



ಯಶವಂತ್ ಸಿನ್ಹಾ

ರಾಷ್ಟ್ರಪತಿ ಚುನಾವಣೆಗೆ ಪ್ರತಿಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿ ಯಶವಂತ್ ಸಿನ್ಹಾ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲು ನಾವು (ವಿರೋಧ ಪಕ್ಷಗಳು) ನಿರ್ಧರಿಸಿದ್ದೇವೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿದ್ದಾರೆ.

ಇಂದಿನ ಸಭೆಯಲ್ಲಿ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಜೈರಾಮ್ ರಮೇಶ್, ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಡಿಎಂಕೆಯ ತಿರುಚಿ ಶಿವ, ಸಿಪಿಐ–ಎಂನ ಸೀತಾರಾಂ ಯೆಚೂರಿ ಮತ್ತು ಸಿಪಿಐನ ಡಿ ರಾಜಾ ಭಾಗವಹಿಸಿದ್ದರು.

ಜು.19ರಂದು ನೂತನ ರಾಷ್ಟ್ರಪತಿ ಆಯ್ಕೆಗೆ ಚುನಾವಣೆ ನಡೆಯಲಿದೆ.

ವಿದ್ಯಾಸಂಸ್ಥೆ, ಸಂಘ–ಸಂಸ್ಥೆಗಳಿಂದ ಯೋಗ ದಿನ ಆಚರಣೆ

ಮೈಸೂರು, ಜೂ.21(ಎಸ್‌ಪಿಎನ್)– ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಗರದ ವಿವಿಧ ಸಂಘ–ಸಂಸ್ಥೆಗಳು ಹಾಗೂ ವಿದ್ಯಾಸಂಸ್ಥೆಗಳಲ್ಲಿ ಯೋಗ ದಿನವನ್ನು ಆಚರಿಸಲಾಯಿತು.



ರೋಟರಿ ಮೈಸೂರು: ಜೆ ಪಿ ನಗರದಲ್ಲಿರುವ ಡಾ.ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಎಂಟನೇ ವಿಶ್ವ ಯೋಗ ದಿನಾಚರಣೆ ಅಂಗವಾಗಿ ನಡೆದ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಯೋಗ ತರಬೇತುದಾರ ಲಿಯೋ ರೆಬೆಲ್ಲೊ ಅವರನ್ನು ರೋಟರಿ ಮೈಸೂರು ಜೆ ಪಿ ನಗರದ ವತಿಯಿಂದ ಮಂಗಳವಾರ ಸನ್ಮಾನಿಸಲಾಯಿತು.

ಈ ವೇಳೆ ರೋಟರಿ ಮೈಸೂರು ಸಂಸ್ಥೆಯ ನಿಯೋಜಿತ ಅಧ್ಯಕ್ಷ ಡಾ.ಮುಳ್ಳೂರು ನಂಜುಂಡಸ್ವಾಮಿ, ಕಾರ್ಯದರ್ಶಿ ರವಿಶಂಕರ್, ರೊ. ಅನಿಲ್ ಸಾಲ್ಡಾನಾ, ಡಾ. ವೆಂಕಟೇಶ್, ಡಾ.ಡಿ.ಎಂ. ನಾಗರಾಜು, ಮಂಜೇಗೌಡ, ನಾರಾಯಣ್, ಕರಾಟೆ ಮಾಸ್ಟರ್ ಶ್ರೀಮಂತ ಹಿಟ್ನಳ್ಳಿ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಶ್ರೀ ನಟರಾಜ ವಿದ್ಯಾಸಂಸ್ಥೆ: ವಿಶ್ವ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ಮತ್ತು ಎನ್‌ಎಸ್‌ಎಸ್ ವಿಭಾಗ ಹಾಗೂ ಶ್ರೀ ನಟರಾಜ ಪಬ್ಲಿಕ್ ಸ್ಕೂಲ್ ವಿಭಾಗದ ವತಿಯಿಂದ ಯೋಗವನ್ನು ಪ್ರದರ್ಶಿಸಲಾಯಿತು.

ಈ ಸಂದರ್ಭದಲ್ಲಿ ನಟರಾಜ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಸತ್ಯ ಸುಲೋಚನಾ, ಡಾ. ಎಂ. ಶಾರದ, ಮುಖ್ಯ ಶಿಕ್ಷಕರಾದ ಮಮತ, ಕೆ.ಎಂ. ಹೇಮಾವತಿ, ರವಣಿಕರ್ ಹಾಗೂ ಯೋಗ ಪಟುಗಳು ಉಪಸ್ಥಿತರಿದ್ದರು.

ಸುತ್ತೂರು ಜೆಎಸ್‌ಎಸ್ ಉಚಿತ ವಸತಿ ಶಾಲೆ: ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಸುತ್ತೂರು ಜೆಎಸ್‌ಎಸ್ ಉಚಿತ ವಸತಿ ಶಾಲೆಯ ನೂರಾರು ವಿದ್ಯಾರ್ಥಿಗಳು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪೂರ್ಣಚೇತನ ಪಬ್ಲಿಕ್ ಸ್ಕೂಲ್: ಮೈಸೂರು–ಹೆಚ್.ಡಿ.ಕೋಟೆ ರಸ್ತೆಯಲ್ಲಿರುವ ಪೂರ್ಣಚೇತನ ಪಬ್ಲಿಕ್ ಸ್ಕೂಲ್ ಆವರಣದಲ್ಲಿ 8ನೇ ವಿಶ್ವ ಯೋಗ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಾಲ್ಗೊಂಡು ಯೋಗ ಪ್ರದರ್ಶನ ನೀಡಿದರು.


ಪ್ರಧಾನಿ ಮೋದಿ ರಾಜ್ಯ ಪ್ರವಾಸ ಅಂತ್ಯ ಬೆನ್ನಲ್ಲೆ ಲಂಡನ್ ಪ್ರವಾಸಕ್ಕೆ ಬಿಎಸ್‌ವೈ

ಬೆಂಗಳೂರು, ಜೂ. 21– ಎರಡು ದಿನಗಳ ಕರ್ನಾಟಕ ರಾಜ್ಯ ಪ್ರವಾಸ ಮುಗಿಸಿ ಪ್ರಧಾನಿ ನರೇಂದ್ರ ದೆಹಲಿಗೆ ತೆರಳಿದ ಬೆನ್ನಲ್ಲೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಲಂಡನ್ ಪ್ರವಾಸಕ್ಕೆ ತೆರಳಿದ್ದಾರೆ. ನಿನ್ನೆ ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿ ವಿವಿಧ ಕಾರ್ಯಕ್ರಮಗಳನ್ನ ಉದ್ಘಾಟಿಸಿ ಇಂದು ಮೈಸೂರಿನಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದರು. ಬಳಿಕ ರಾಜ್ಯ ಪ್ರವಾಸ ಮುಗಿಸಿ ದೆಹಲಿಗೆ ವಾಪಸ್ ಆದರು.



ಇನ್ನು ಪ್ರಧಾನಿ ಮೋದಿ ಅವರ ಕರ್ನಾಟಕ ಭೇಟಿ ಅಂತ್ಯಗೊಂಡ ಬೆನ್ನಲ್ಲೆ ಮಾಜಿ ಸಿಎಂ ಯಡಿಯೂರಪ್ಪ ಅವರು ಲಂಡನ್ ಪ್ರವಾಸಕ್ಕೆ ತೆರಳಿದ್ದಾರೆ. ಕುಟುಂಬ ಸಮೇತ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದ್ದಾರೆ.

ಶಾರ್ಟ್ ಸರ್ಕ್ಯೂಟ್: ಎಲೆಕ್ಟ್ರಾನಿಕ್ ವಸ್ತುಗಳು ಅಗ್ನಿಗಾಹುತಿ



ಮೈಸೂರು, ಜೂ.21(ಎಂಕೆ)– ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದಾಗಿ ಮನೆಯಲ್ಲಿದ್ದ ಎಲೆಕ್ಟ್ರಾನಿಕ್ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ಮೈಸೂರಿನ ಹಿನಕಲ್‌ನಲ್ಲಿ ಮಂಗಳವಾರ ನಡೆದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಇಲ್ಲಿನ ಹೊಸಬೀದಿಯ ಲಕ್ಷ್ಮಮ್ಮ ಲೇಟ್ ಚೆನ್ನಪ್ಪ ಎಂಬುವವರ ಮನೆಯನ್ನು ಬಾಡಿಗೆಗೆ ಪಡೆದು ವಾಸವಿದ್ದ ದಿನಕರ್‌ಶೆಟ್ಟಿ ಎಂಬವರು ಎಲೆಕ್ಟ್ರಾನಿಕ್ ವಸ್ತುಗಳ ಸರ್ವಿಸ್ ಕೆಲಸ ಮಾಡಿಕೊಂಡಿದ್ದು, ಕೆಲ ಎಲೆಕ್ಟ್ರಾನಿಕ್ ವಸ್ತುಗಳನ್ನು ಸರ್ವಿಸ್ ಮಾಡುವುದಕ್ಕಾಗಿ ಮನೆಗೆ ತಂದಿಟ್ಟುಕೊಂಡಿದ್ದರು. ಮಂಗಳವಾರ ಮಧ್ಯಾಹ್ನ 1.30ರ ವೇಳೆಗೆ ಮನೆಯ ರೂಂನಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿದ್ದು, ಸುಮಾರು 3–4 ಲಕ್ಷ ರೂ. ಮೌಲ್ಯದ ಎಲೆಕ್ಟ್ರಾನಿಕ್ ವಸ್ತುಗಳು ಸೇರಿದಂತೆ ಬಟ್ಟೆ ಪುಸ್ತಕಗಳು, ಚೇರ್‌ಗಳು ಸುಟ್ಟು ಕರಕಲಾಗಿವೆ. ಈ ವೇಳೆ ಮನೆಯಲ್ಲಿ ಯಾರು ಇಲ್ಲದೆ ಇದ್ದಿದ್ದರಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಬ್ಬಾಳ ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ.

ಐದನೇ ಬಾರಿ ರಾಹುಲ್ ಇಡಿ ವಿಚಾರಣೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಜಾರಿ ನಿರ್ದೇಶಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ವಿಚಾರಣೆಗೆ ಒಳಪಡಿಸಿದರು.



ಇದರೊಂದಿಗೆ, ಐದನೇ ಬಾರಿ ರಾಹುಲ್ ಅವರು ವಿಚಾರಣೆಗೆ ಹಾಜರಾದಂತಾಗಿದೆ. ಜೂನ್ 13ರಂದು ಮೊದಲ ಬಾರಿ ರಾಹುಲ್ ವಿಚಾರಣೆಗೆ ಹಾಜರಾಗಿದ್ದರು. ಒಟ್ಟು 40 ಗಂಟೆಗಳ ಕಾಲ ವಿಚಾರಣೆ ಎದುರಿಸಿದ್ದಾರೆ. ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಒಳಪಡಿಸುತ್ತಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ನಡೆಸುತ್ತಿರುವ ಪ್ರತಿಭಟನೆ ಮುಂದುವರಿದಿದೆ. ಈ ಮಧ್ಯೆ, ಕೋವಿಡೋತ್ತರ ಆರೋಗ್ಯ ಸಮಸ್ಯೆಗಳಿಗಾಗಿ ಚಿಕಿತ್ಸೆ ಪಡೆಯುತ್ತಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಸೋಮವಾರ ಸಂಜೆ ದೆಹಲಿಯ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ಅವರಿಗೆ ಜಾರಿ ನಿರ್ದೇಶನಾಲಯ ಮತ್ತೆ ಸಮನ್ಸ್ ನೀಡಿದೆ.


ಮಹಾರಾಷ್ಟ್ರ ರಾಜಕೀಯ ಬಿಕ್ಕಟ್ಟು: ಶಿವಸೇನಾ ಶಾಸಕಾಂಗ ಪಕ್ಷದ ನಾಯಕ ಸ್ಥಾನದಿಂದ ಏಕನಾಥ್ ಶಿಂಧೆ ವಜಾ


ಮುಂಬೈ, ಜೂ. 21– ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಕುರ್ಚಿ ಅಲುಗಾಡುತ್ತಿದ್ದು, ಪಕ್ಷದ ಕೆಲ ಶಾಸಕರೊಂದಿಗೆ ನಾಪತ್ತೆಯಾಗಿರೋ ಶಿವಸೇನೆ ಸಚಿವ ಏಕನಾಥ್ ಶಿಂಧೆ ಅವರಿಗೆ ಪಕ್ಷ ವಜಾ ಶಿಕ್ಷೆ ನೀಡಿದೆ. ಏಕನಾಥ್ ಶಿಂಧೆ ಅವರು ಇತರ 21 ಶಾಸಕರೊಂದಿಗೆ ಗುಜರಾತ್‌ನ ಸೂರತ್ ಹೋಟೆಲ್‌ಗೆ ತೆರಳಿದ್ದಾರೆ ಎಂದು ವರದಿಯಾದ ನಂತರ ಶಿವಸೇನೆ ಮಂಗಳವಾರ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸ್ಥಾನದಿಂದ ಮತ್ತು ಮುಖ್ಯ ಸಚೇತಕ ಸ್ಥಾನದಿಂದ ಶಿಂಧೆ ಅವರನ್ನು ವಜಾಗೊಳಿಸಿದೆ.

ಅದೇ ಸಮಯದಲ್ಲಿ ಏಕನಾಥ್ ಶಿಂಧೆ ಅವರು ತಾವು ಅಧಿಕಾರಕ್ಕಾಗಿ ಎಂದಿಗೂ ಮೋಸ ಮಾಡುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ. ಬಾಳಾಸಾಹೇಬರು ನಮಗೆ ಹಿಂದುತ್ವವನ್ನು ಕಲಿಸಿದ್ದಾರೆ. ಬಾಳಾಸಾಹೇಬರ ಚಿಂತನೆಗಳು ಮತ್ತು ಧರ್ಮವೀರ್ ಆನಂದ್ ದಿಘೆ ಸಾಹೇಬ್ ಅವರ ಬೋಧನೆಗಳಿಗೆ ಸಂಬಂಧಿಸಿದಂತೆ ನಾವು ಎಂದಿಗೂ ಅಧಿಕಾರಕ್ಕಾಗಿ ಮೋಸ ಮಾಡಿಲ್ಲ ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಶಾಸಕಾಂಗ ಪಕ್ಷದ ನಾಯಕರಾಗಿದ್ದ ಏಕನಾಥ್ ಶಿಂಧೆ ಅವರ ಸ್ಥಾನಕ್ಕೆ ಶಿವಸೇನೆಯ ಸೆವ್ರಿ ಶಾಸಕ ಅಜಯ್ ಚೌಧರಿ ಅವರನ್ನು ನೂತನವಾಗಿ ನೇಮಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶ್ರೀರಂಗಪಟ್ಟಣದಲ್ಲಿ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಪ್ರತಿದಿನ ಯೋಗ ಮಾಡುವುದರಿಂದ ಉತ್ತಮ ಆರೋಗ್ಯ





ಶ್ರೀರಂಗಪಟ್ಟಣ, ಜೂ.21(ವಿನಯ್ ಕಾರೇಕುರ)– ಪ್ರತಿದಿನ ಯೋಗ ಮಾಡುವುದರಿಂದ ಉತ್ತಮ ಆರೋಗ್ಯದೊಂದಿಗೆ ನಗುಮುಖದಿಂದ ಇರಲು ಸಾಧ್ಯ ಎಂದು ರೇಷ್ಮೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ತಿಳಿಸಿದರು.

ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಭಾರತ ಸರ್ಕಾರ, ಆಯುಷ್ ಸಚಿವಾಲಯ, ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಯೋಗ ನಿರತ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ನಡೆದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಯೋಗಿಗಳು, ಋಷಿ ಮುನಿಗಳು ತಮ್ಮ ಜೀವನದಲ್ಲಿ ಯೋಗ ಅಳವಡಿಸಿಕೊಂಡು 125ಕ್ಕೂ ಹೆಚ್ಚು ವರ್ಷ ಬದುಕಿದ್ದಾರೆ. ಅದಕ್ಕೆ ಯೋಗವೇ ಕಾರಣ. ಹಾಗಾಗಿ ನಾವೆಲ್ಲರೂ ಯೋಗಕ್ಕೆ ಹೆಚ್ಚಿನ ಮಹತ್ವ ನೀಡಿ ಶಕ್ತಿ ತುಂಬಬೇಕಿದೆ ಎಂದರು. ಇಂದು ಮೈಸೂರಿನಲ್ಲಿ ಪ್ರಧಾನಿ ಮೋದಿ ಅವರ ಯೋಗ ಕಾರ್ಯಕ್ರಮ ಬಿಟ್ಟರೇ, ಶ್ರೀರಂಗಪಟ್ಟಣಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಬೃಹತ್ ಕಾರ್ಯಕ್ರಮವಾಗಿದೆ. ನನ್ನ ಸ್ವಕ್ಷೇತ್ರ ಕೆ.ಆರ್.ಪೇಟೆಯಲ್ಲೂ 3 ಸಾವಿರ ಮಂದಿ ಪಾಲ್ಗೊಂಡಿದ್ದಾರೆ. ಪ್ರಧಾನಿಯವರ ಧಣಿವರಿಯದ ಕಾಯಕಕ್ಕೆ ಮೂಲ ಮಂತ್ರವೇ ಯೋಗಾಭ್ಯಾಸ. ಹೀಗಾಗಿ ಪ್ರತಿಯೊಬ್ಬರೂ ಯೋಗ ಮಾಡುವಂತೆ ಕರೆ ನೀಡಿದರು.

ಜಿಲ್ಲಾಧಿಕಾರಿ ಎಸ್.ಅಶ್ವತಿ ಮಾತನಾಡಿ, ಯೋಗದ ಮೂಲ ಭಾರತ. ಪ್ರಸ್ತುತ ಯೋಗ ವಿಶ್ವದಾದ್ಯಂತ ಪ್ರಸಿದ್ಧಿ ಪಡೆದು ತನ್ನ ಮಹತ್ವ ತಿಳಿಸುತ್ತಿದೆ. ದೇಹದ ಖಾಯಿಲೆ ನಿವಾರಣೆ ಜೊತೆಗೆ ನಮ್ಮ ಇಂದ್ರಿಯಗಳು ಚೆನ್ನಾಗಿ ಕೆಲಸ ಮಾಡಲು ನಿರಂತರವಾಗಿ ಯೋಗಾಭ್ಯಾಸ ಮಾಡಬೇಕು. ಶಾಲೆ ಮತ್ತು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿದಿನ ಅರ್ಧ ಗಂಟೆ ಯೋಗಾಭ್ಯಾಸ ಮಾಡಿಸಿದರೆ ಅವರಿಗೆ ಏಕಾಗ್ರತೆ, ಶ್ರದ್ಧೆ ನೆನಪಿನ ಶಕ್ತಿ ಹೆಚ್ಚಾಗುತ್ತದೆ ಎಂದರು.

ಯೋಗ ಪ್ರಾಚೀನ ಕಲೆ. ಉಪನಿಷತ್ತುಗಳು, ಋಗ್ವೇದದಲ್ಲಿಯೂ ಸಹ ಯೋಗಾಭ್ಯಾಸದ ಬಗ್ಗೆ ಪ್ರಸ್ತಾಪವಿದೆ. ಇತ್ತೀಚಿನ ದಿನಗಳಲ್ಲಿ ಯುವಕರು ದೈಹಿಕ ಸದೃಢತೆಗಾಗಿ ಅನೇಕ ಉಪಕರಣ ಬಳಸುತ್ತಾರೆ. ಆದರೆ ಯೋಗಾಭ್ಯಾಸದಿಂದ ದೈಹಿಕ ಸದೃಢತೆ ಜೊತೆಗೆ ಮಾನಸಿಕವಾಗಿಯೂ ಶಾಂತಿಯಿಂದ ಇರಬಹುದು ಎಂದರು.

ಪ್ರಸ್ತುತ ವಿದೇಶದಲ್ಲೂ ಸಹ ಯೋಗದ ಪ್ರಯೋಜನ ತಿಳಿದು ಯೋಗ ತರಬೇತಿ ಪಡೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಸಹ ಯೋಗಕ್ಕೆ ಹೆಚ್ಚಿನ ಮಹತ್ವ ನೀಡಿ ಕಲಿಯಬೇಕು. ಯುವಕರಿಗೆ ಇನ್ನಷ್ಟು ಅರಿವು ಮುಡಿಸಲು ಈ ರೀತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಲಾ ಮತ್ತು ಕಾಲೇಜಿನ ವಿದ್ಯಾರ್ಥಿಗಳು, ಜಿಲ್ಲೆಯ ವಿವಿಧ ತಾಲೂಕಿನ ಯೋಗ ಸಂಸ್ಥೆಗಳು, ವಿವಿಧ ಸಂಘ ಸಂಸ್ಥೆಗಳು, ಹೆಚ್ಚಾಗಿ ಸಾರ್ವಜನಿಕರು ಭಾಗವಹಿಸಿರುವುದು ನಿಜಕ್ಕೂ ಸಂತೋಷವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸುಮಾರು 8 ರಿಂದ 10 ಸಾವಿರ ಮಂದಿ ಭಾಗವಹಿಸಿದ್ದರು. 40 ಮಂದಿ ಯೋಗ ಗುರುಗಳು ಯೋಗದ ಮೇಲ್ವಿಚಾರಣೆ ನೋಡಿಕೊಂಡರು. ಯೋಗ ದಿನಾಚರಣೆ ಕಾರ್ಯಕ್ರಮವನ್ನು ಮಂಡ್ಯದ ಪತಂಜಲಿ ಯೋಗ ಗುರು ಶ್ರೀ ಶಂಕರ ನಾರಾಯಣ ಶಾಸ್ತ್ರಿ ನಡೆಸಿಕೊಟ್ಟರು.

ಶಾಸಕ, ಸಂಸದೆ ಗೈರು: ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಸಂಸದೆ ಸುಮಲತಾ ಅಂಬರೀಶ್ ಗೈರು ಎದ್ದು ಕಾಣುತ್ತಿತ್ತು.

ತಾಲೂಕು ಜೆಡಿಎಸ್ ಯುವ ಘಟಕದ ಅಧ್ಯಕ್ಷ ಕಡತನಾಳು ಸಂಜಯ್ ಮಾತನಾಡಿ, ತಾಲೂಕಿನ ಪ್ರಥಮ ಪ್ರಜೆಯಾಗಿರುವ ಶಾಸಕರ ಸಲಹೆ, ಸೂಚನೆ ಪಡೆಯದೇ ಜಿಲ್ಲಾಡಳಿತ, ತಾಲೂಕು ಆಡಳಿತ ಕೇವಲ ಕಾಟಾಚಾರಕ್ಕೆ ಕಾರ್ಯಕ್ರಮಕ್ಕೆ ಮಾಡಿದೆ. ಶಾಸಕರಿಗೆ ಅಧಿಕಾರಿಗಳು ಕಾರ್ಯಕ್ರಮದ ಹಿಂದಿನ ದಿನ ಆಹ್ವಾನ ಪತ್ರಿಕೆ ನೀಡಿ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಎಡಿಸಿ ವಿ.ಆರ್.ಶೈಲಜಾ, ಜಿಪಂ ಸಿಇಓ ದಿವ್ಯಪ್ರಭು, ಎಸ್ಪಿ ಎನ್.ಯತೀಶ್, ಪಾಂಡವಪುರ ಎಸಿ ಬಿ.ಸಿ.ಶಿವಾನಂದ ಮೂರ್ತಿ, ತಹಸೀಲ್ದಾರ್‌ಗಳಾದ ಶ್ವೇತ ಎನ್.ರವೀಂದ್ರ, ನಯನ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಯೋಗ ಶಿಕ್ಷಕ ಶಂಕರ ನಾರಾಯಣಶಾಸ್ತ್ರಿ, ಪುರ ಸಭೆ ಉಪಾಧ್ಯಕ್ಷ ಎಂ.ಕೃಷ್ಣ, ಉಪ ಅರಣ್ಯ ಸಂರಕ್ಷಣಾಧಿಕಾರಿ ಋತ್ವಿಕ್, ಶಾಶ್ವತಿ ಧಾರ್ಮಿಕ ಕ್ರಿಯಾಸಮಿತಿ ಅಧ್ಯಕ್ಷ ಡಾ.ಭಾನುಪ್ರಕಾಶ್ ಶರ್ಮಾ, ಪುರಸಭೆ ಉಪಾಧ್ಯಕ್ಷ ಎಂ.ಕೃಷ್ಣಪ್ಪ, ಹಿರಿಯ ಮುಖಂಡ ಡಾ.ಸಿದ್ದರಾಮಯ್ಯ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಉಪಾಹಾರ ಅವ್ಯವಸ್ಥೆ

ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದವರಿಗೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಸಮರ್ಪಕ ಉಪಾಹಾರ ವ್ಯವಸ್ಥೆ ಮಾಡುವಲ್ಲಿ ವಿಫಲವಾದವು.

ಜಿಲ್ಲಾಡಳಿತದಿಂದ ಕಾರ್ಯಕ್ರಮಕ್ಕಾಗಿ ಸಿಹಿ ಪೊಂಗಲ್, ಕಾರ ಪೊಂಗಲ್ ಮಾಡಿಸಲಾಗಿತ್ತು ಕಾರ್ಯಕ್ರಮ ಮುಗಿದ ನಂತರ ವೇದಿಕೆಯಲ್ಲಿದ್ದ ಗಣ್ಯರು, ಅಧಿಕಾರಿಗಳು ಪಟ್ಟಣದ ಹೊರವಲಯದ ಚಂದ್ರವನ ಆಶ್ರಮದಲ್ಲಿ ಆಯೋಜಿಸಿದ್ದ ವಿಶೇಷ ಉಪಾಹಾರ ಸವಿಯಲು ಹೊರಟರು. ಆದರೆ ಕಾರ್ಯಕ್ರಮದಲ್ಲಿ ಹೆಚ್ಚಾಗಿ ಭಾಗವಹಿಸಿದ್ದ ಮಕ್ಕಳಿಗೆ ಉಪಾಹಾರ ವಿತರಣೆಯಲ್ಲಿ ಆದ ಅವ್ಯವಸ್ಥೆಯಿಂದ ಮಕ್ಕಳು ಹಸಿವಿನಿಂದ ಮನೆ ಕಡೆ ಹೆಜ್ಜೆ ಹಾಕಿದರು.

ಇಬ್ಬರು ಮಹಿಳೆಯರ ಅರ್ಧ ಶವ ಪತ್ತೆ ಪ್ರಕರಣ

ಆರೋಪಿಗಳ ಸುಳಿವು ನೀಡಿದವರಿಗೆ ಒಂದು ಲಕ್ಷ ರೂ. ಬಹುಮಾನ

ಮಂಡ್ಯ, ಜೂ.21(ಮೋಹನ್‌ರಾಜ್)– ಪಾಂಡವಪುರ ಹಾಗೂ ಶ್ರೀರಂಗಪಟ್ಟಣದ ಅರಕೆರೆ ಬಳಿ ಇಬ್ಬರು ಮಹಿಳೆಯರ ಅರ್ಧ ಶವ ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಸುಳಿವು ನೀಡಿದವರಿಗೆ ಒಂದು ಲಕ್ಷ ರೂ. ಬಹುಮಾನ ನೀಡುವುದಾಗಿ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಘೋಷಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಜೂ.7ರಂದು ಪಾಂಡವಪುರ ತಾಲೂಕಿನ ಕೆರೆಕೋಡಿಯ ಕಟ್ಟೆಯ ನೀರಿನಲ್ಲಿ ಸುಮಾರು 30 ರಿಂದ 32 ವರ್ಷದ ಅಪರಿಚಿತ ಮಹಿಳೆಯ ಹೊಟ್ಟೆ ಕೆಳಭಾಗದ ಅರ್ಧ ಶವ ಪತ್ತೆಯಾಗಿದ್ದರೆ, ಅದೇ ದಿನ ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯ ಮಾಡಹಳ್ಳಿ ರಸ್ತೆ ಬಳಿ ಸಿಡಿಎಸ್ ನಾಲೆಗೆ ಸಂಪರ್ಕಿಸುವ ಆರೋಡು ಹಳ್ಳದ ಪಕ್ಕದಲ್ಲಿರುವ ಅರಕೆರೆ ಗ್ರಾಮದ ಭತ್ತದ ಗದ್ದೆಯೊಂದರಲ್ಲಿ ಮತ್ತದೇ ರೀತಿಯ ಹೊಟ್ಟೆಯ ಕೆಳ ಭಾಗದ ಅರ್ಧ ಶವ ಪತ್ತೆಯಾಗಿತ್ತು.

ಎರಡೂ ಪ್ರಕರಣದಲ್ಲಿ ಎಲ್ಲೋ ಬೇರೆ ಕಡೆ ಮಹಿಳೆಯರನ್ನು ಕೊಲೆ ಮಾಡಿ ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಮಂಡ್ಯ ಜಿಲ್ಲೆಯ ಎರಡು ಪ್ರದೇಶದಲ್ಲಿ ಕತ್ತರಿಸಿದ ಎರಡೂ ಶವಗಳ ಅರ್ಧ ಭಾಗವನ್ನು ನೀರಿನಲ್ಲಿ ತೇಲಿ ಬಿಟ್ಟಿರುವುದು ಕಂಡು ಬಂದಿದ್ದು, ಎರಡೂ ಕೊಲೆಯಲ್ಲಿ ಒಂದೇ ರೀತಿಯ ಸಾಮ್ಯತೆ ಕಂಡು ಬಂದಿದ್ದು, ಎರಡೂ ಮಹಿಳೆಯರನ್ನು ಕೊಲೆ ಮಾಡಿ ಕತ್ತರಿಸಿ ಬಟ್ಟೆಯಲ್ಲಿ ಕಟ್ಟಿ ಶವಗಳನ್ನು ನೀರಿನಲ್ಲಿ ತೇಲಿ ಬಿಟ್ಟಿದ್ದು, ಮೇಲಿನ ಅರ್ಧ ಭಾಗ ಪತ್ತೆಯಾಗಿಲ್ಲ. ಈ ಬಗ್ಗೆ ಮಂಡ್ಯ, ಮೈಸೂರು, ಬೆಂಗಳೂರು, ತುಮಕೂರು ಸೇರಿದಂತೆ ನೆರೆ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರದಲ್ಲೂ ಕೂಡ ಪೊಲೀಸರು ಕರಪತ್ರಗಳನ್ನು ಹಂಚಿದ್ದಾರೆ. ಆದರೆ ಈವರೆಗೂ ಆರೋಪಿಗಳ ಗುರುತು ಪತ್ತೆಯಾಗಿಲ್ಲ. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರದಿಂದ ಆರೋಪಿಗಳನ್ನು ಪತ್ತೆ ಹಚ್ಚಲು ಪೊಲೀಸರು ಮುಂದಾಗಿದ್ದಾರೆ.

ಆರೋಪಿಗಳ ಗುರುತು ಪತ್ತೆಯಾದರೆ ಸಂಪರ್ಕಿಸಬೇಕಾದ ವಿಳಾಸ:

ಪೊಲೀಸ್ ಕಂಟ್ರೋಲ್ ರೂಂ ದೂ.08232–224888, 9480804800, ಡಿವೈಎಸ್ಪಿ ಶ್ರೀರಂಗಪಟ್ಟಣ ಉಪವಿಭಾಗ ಮೊ: 9480804821, ಪಿಐ ಪಾಂಡವಪುರ ಠಾಣೆ: 9480804858, ಸಿಪಿಐ ಕೆ.ಆರ್.ಸಾಗರ ವೃತ್ತ ಮೊ: 9480804832 ಇಲ್ಲಿಗೆ ಸಂಪರ್ಕಿಸಬಹುದಾಗಿದ್ದು, ಆರೋಪಿಗಳ ನೀಡುವ ಮಾಹಿತಿಗಳನ್ನು ಗೌಪ್ಯವಾಗಿಡಲಾಗುವುದು ಎಂದು ಎಸ್ಪಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವ್ಯಕ್ತಿ ಮೇಲೆ ಚಿರತೆ ದಾಳಿಗೆ ಯತ್ನ

ಮಳವಳ್ಳಿ, ಜೂ.21(ಮೋಹನ್‌ರಾಜ್)– ಚಿರತೆ ಮೇಕೆ ಕೊಂದು ವ್ಯಕ್ತಿಯೊಬ್ಬರ ಮೇಲೆ ದಾಳಿಗೆ ಯತ್ನಿಸಿರುವ ಘಟನೆ ತಾಲೂಕಿನ ಮಾದಹಳ್ಳಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಗ್ರಾಮದ ಹೊರವಲಯದ ಜಮೀನಿನಲ್ಲಿ ರೈತ ಮರಿಗೌಡ ಮೇಕೆಗಳನ್ನು ಮೇಯಿಸುತ್ತಿದ್ದ ವೇಳೆ ಚಿರತೆ ದಾಳಿ ಮಾಡಿ ಮೇಕೆಯನ್ನು ಕೊಂದು ಹಾಕಿದೆ. ಈ ವೇಳೆ ಮೇಕೆ ರಕ್ಷಿಸಲು ಮುಂದಾದ ರೈತನ ಮೇಲೂ ಚಿರತೆ ದಾಳಿ ಮಾಡಿದ್ದು, ಸಣ್ಣಪುಟ್ಟ ಗಾಯಗಳಾಗಿವೆ. ಘಟನೆಯಿಂದ ಗ್ರಾಮದ ಜನರಲ್ಲಿ ಆತಂಕ ಮನೆ ಮಾಡಿದೆ.

ಇಂದು ಜಾಥಾ

ಮಂಡ್ಯ, ಜೂ.21– ಮಲೇರಿಯಾ ವಿರೋಧ ಮಾಸಾಚರಣೆ ಮತ್ತು ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಪ್ರಯುಕ್ತ ಜೂ.22 ರಂದು ಬೆಳಗ್ಗೆ 10.30ಕ್ಕೆ ಸಂಜಯ ವೃತ್ತದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿವರೆಗೆ ಜಾಥಾ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ನೇರ ಸಂದರ್ಶನ

ಮಂಡ್ಯ, ಜೂ.21– ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಜೂ.23ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ. ನೇರ ಸಂದರ್ಶನದಲ್ಲಿ ಮಂಡ್ಯ ಸ್ವತಂತ್ರ ಮೈಕ್ರೋಫಿನ್ ಪ್ರೈ. ಲಿಮಿಟೆಡ್ ನಿಯೋಜಕರು ಭಾಗವಹಿಸಲಿದ್ದು, ಆಸಕ್ತ ಪಿಯುಸಿ ಹಾಗೂ ಯಾವುದೇ ಪದವಿ ಹೊಂದಿರುವ 18 ವರ್ಷದಿಂದ 28 ವರ್ಷದೊಳಗಿನ ಅಭ್ಯರ್ಥಿಗಳು ಸ್ವವಿವರದೊಂದಿಗೆ ಹಾಗೂ ಎಲ್ಲಾಮೂಲ ದಾಖಲಾತಿಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು. ಮಾಹಿತಿಗೆ ದೂ:08232–295124 ಸಂಪರ್ಕಿಸಬಹುದು.

ಆರೋಗ್ಯಕರ ಜೀವನಕ್ಕೆ ಯೋಗಾಭ್ಯಾಸ ಅವಶ್ಯಕ

ಕೆ.ಆರ್.ಪೇಟೆ, ಜೂ.21(ಶ್ರೀನಿವಾಸ್)– ಆರೋಗ್ಯಕರ ಜೀವನಕ್ಕೆ ನಿತ್ಯ ಯೋಗಾಭ್ಯಾಸ ಮಾಡುವುದು ಅವಶ್ಯಕ ಎಂದು ಸಚಿವ ಡಾ.ಕೆ.ಸಿ.ನಾರಾಯಣಗೌಡ ಕರೆ ನೀಡಿದರು.

ತಾಲೂಕಿನ ಹೊಸಹೊಳಲು ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ದೇವಾಲಯದ ಆವರಣದಲ್ಲಿ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ, ಆಯುಷ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಆರೋಗ್ಯದ ಮೂಲ ಮಂತ್ರವಾಗಿರುವ ಯೋಗವನ್ನು ಪ್ರಧಾನಿ ಮೋದಿ ಅವರು ಇಡೀ ವಿಶ್ವಕ್ಕೆ ಪರಿಚಯಿಸಿದ್ದಾರೆ. ಇದರಿಂದಾಗಿ ಕಳೆದ 8 ವರ್ಷಗಳಿಂದ ವಿಶ್ವದ ಬಹುತೇಕ ಎಲ್ಲಾ ರಾಷ್ಟ್ರಗಳಲ್ಲಿ ಜೂ.21 ರಂದು ವಿಶ್ವ ಯೋಗ ದಿನಾಚರಣೆ ಆಚರಿಸಲಾಗುತ್ತಿದೆ. ಜನರು ತಮ್ಮ ಜಂಜಾಟದ ಬದುಕಿನಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ನಿತ್ಯ ಯೋಗ, ಪ್ರಾಣಾಯಾಮ, ಧ್ಯಾನ ಮಾಡುವುದರಿಂದ ರೋಗ ಬಾರದಂತೆ ನೋಡಿಕೊಂಡು ಉತ್ತಮ ಆರೋಗ್ಯ ಪಡೆಯಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವೇದಬ್ರಹ್ಮ ಗೋಪಾಲಕೃಷ್ಣ ಅವಧಾನಿಗಳು ಹಾಗೂ ಅಂತರರಾಷ್ಟ್ರೀಯ ಯೋಗಪಟು ಅಲ್ಲಮಪ್ರಭು ಅವರು ಶಾಲಾ ಮಕ್ಕಳಿಗೆ ಮತ್ತು ನಾಗರಿಕರಿಗೆ ಯೋಗಾಭ್ಯಾಸ ಮಾಡಿಸಿ ಯೋಗದ ಮಹತ್ವ ತಿಳಿಸಿದರು.

ಈ ವೇಳೆ ತಹಸೀಲ್ದಾರ್ ಎಂ.ವಿ.ರೂಪಾ, ತಾಪಂ ಇಓ ಸತೀಶ್, ಬಿಇಓ ಬಸವರಾಜ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ಪುರಸಭಾಧ್ಯಕ್ಷೆ ಮಹದೇವಿ, ಉಪಾಧ್ಯಕ್ಷೆ ಗಾಯತ್ರಿ, ಸದಸ್ಯರಾದ ಎಚ್.ಆರ್.ಲೋಕೇಶ್, ತಿಮ್ಮೇಗೌಡ, ಕೆ.ಆರ್.ನೀಲಕಂಠ, ಕೆ.ಎಸ್.ರಾಜೇಶ್, ಮುಖ್ಯಾಧಿಕಾರಿ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಧುಸೂದನ್, ತಾಲೂಕು ಆಸ್ಪತ್ರೆ ಆಡಳಿತಾಧಿಕಾರಿ ಡಾ.ರವಿ, ಆಯುಷ್ ಆರೋಗ್ಯಾಧಿಕಾರಿ ಡಾ.ಲೋಕೇಶ್, ಆಯುಷ್ ವೈದ್ಯರಾದ ಡಾ.ಚಂದ್ರಶೇಖರ್, ಡಾ.ಸುಬ್ರಹ್ಮಣ್ಯ, ಸಚಿವರ ಆಪ್ತ ಸಹಾಯಕ ದಯಾನಂದ್ ಸೇರಿದಂತೆ ಶಾಲಾ ಮಕ್ಕಳು, ಸಾರ್ವಜನಿಕರು ಭಾಗವಹಿಸಿದ್ದರು.



ಚಾಮರಾಜನಗರ ಜಿಲ್ಲಾದ್ಯಂತ 8ನೇ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ

ಆರೋಗ್ಯ ಸಂವರ್ಧನೆಗೆ ಯೋಗ ಮಹತ್ವದ್ದು

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಭಿಮತ



ಚಾ.ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಯೋಗಾಭ್ಯಾಸದೊಂದಿಗೆ ಜಿಲ್ಲಾಡಳಿತದಿಂದ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಚಾಮರಾಜನಗರ, ಜೂ.21–ದೇಹ ಮತ್ತು ಮನಸ್ಸುಗಳ ಕ್ರಿಯಾಶೀಲತೆ ಹಾಗೂ ಉತ್ತಮ ಆರೋಗ್ಯ ಸಂವರ್ಧನೆಗಾಗಿ ಯೋಗದ ಮಹತ್ವದ್ದಾಗಿದ್ದು, ಇದನ್ನು ಪ್ರತಿಯೊಬ್ಬರೂ ಅರಿಯಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ತಿಳಿಸಿದರು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿಂದು ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಯೋಗನಿರತ ಸಂಘ–ಸಂಸ್ಥೆಗಳು ಹಾಗೂ ಜಿಲ್ಲೆಯ ಎಲ್ಲಾ ಇಲಾಖೆ ವೃಂದದ ಸಹಯೋಗದೊಂದಿಗೆ 'ಮಾನವೀಯತೆಗಾಗಿ ಯೋಗ' ಘೋಷ ವಾಕ್ಯದಡಿ ಆಯೋಜಿಸಿದ್ದ 8ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಉದ್ಘಾಟಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯೋಗದಲ್ಲಿ ಅಷ್ಟಾಂಗಯೋಗ ಪ್ರಮುಖದ್ದಾಗಿದೆ. ಪತಂಜಲಿ ಯೋಗ ಸೂತ್ರದನ್ವಯ ಯಮ, ನಿಯಮ, ಅಸನ, ಪ್ರಾಣಾಯಾಮ, ಪಥ್ಯಾಹಾರ, ಧ್ಯಾನ, ಧಾರಣ ಹಾಗೂ ಸಮಾಧಿಯಂತಹ ಅಷ್ಟಸೂತ್ರಗಳಿದ್ದು, ಪ್ರತಿದಿನ ಬೆಳಗಿನಿಂದ ಯಮ, ನಿಯಮದಿಂದ ಆರಂಭವಾಗಿ ರಾತ್ರಿ ಸಮಯದ ಸಮಾಧಿವರೆಗಿನ ದಿನಚರಿಯಲ್ಲಿ ನಾವೆಲ್ಲರೂ 8 ಅಸನಗಳನ್ನು ಅನುಸರಣೆ ಮಾಡುತ್ತೇವೆ. ಹಾಗಾಗಿ ಜೀವನ ಕ್ರಮವನ್ನು ಉತ್ತಮಪಡಿಸಿಕೊಳ್ಳಲು ಯೋಗದ ಅರಿವು ಎಲ್ಲರಿಗೂ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಆಯುಷ್ ಇಲಾಖೆಯ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾಲಯದ ವೈದ್ಯಾಧಿಕಾರಿ ಡಾ.ಮಾನಸ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ, ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿ ಡಾ. ಸುಜಾತಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿಶ್ವೇಶ್ವರಯ್ಯ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಕುಮಾರಸ್ವಾಮಿ, ಜಿಪಂ ಲೆಕ್ಕಾಧಿಕಾರಿ ಗಂಗಾಧರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಯೋಗ ಶಿಕ್ಷಕರಾದ ನಿಜಗುಣ, ಯೋಗಬಂಧು ದೇವಿಕಾ ಅವರು ಕಾರ್ಯಕ್ರಮದಲ್ಲಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ನಡೆದ ಯೋಗ ಪ್ರಾತ್ಯಕ್ಷಿಕೆಯಲ್ಲಿ ಎಲ್ಲಾ ಗಣ್ಯರು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಗುಂಡ್ಲುಪೇಟೆ ಹಲವೆಡೆ ಸಾಮೂಹಿಕ ಯೋಗ ಪ್ರದರ್ಶನ



ಗುಂಡ್ಲುಪೇಟೆ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯೋಗಪಟುಗಳು.

ಗುಂಡ್ಲುಪೇಟೆ, ಜೂ.21(ಸೋಮ್.ಜಿ)– ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಶಾಲೆಗಳಲ್ಲಿ 8ನೇ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಸಾಮೂಹಿಕ ಯೋಗ ಪ್ರದರ್ಶಿಸಲಾಯಿತು.

ಪಟ್ಟಣದಲ್ಲಿರುವ ಮದ್ದಾನೇಶ್ವರ ಮಹಾಮನೆ ಯೋಗಕೇಂದ್ರ ಹಾಗೂ ಆಯುಷ್ ಇಲಾಖೆಯ ಸಹಯೋಗದಲ್ಲಿ ತಾಲೂಕು ಆಡಳಿತ ಪಟ್ಟಣದ ಡಿ.ದೇವರಾಜ ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಯೋಗ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಸಿ.ಜೆ.ರವಿಶಂಕರ್, ಯೋಗದಿಂದ ರೋಗಮುಕ್ತ ಜೀವನ ನಡೆಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಪುರಸಭೆ ಸದಸ್ಯರೂ ಆದ ಯೋಗ ಗುರು ನಾಗೇಶ್ ಯೋಗಾಭ್ಯಾಸ ತರಬೇತಿ ನೀಡಿದರು. ಬಿಇಓ ಎಸ್.ಸಿ.ಶಿವಮೂರ್ತಿ, ಯೋಗ ಶಿಕ್ಷಕರಾದ ಕೆ.ಸಿ.ರಾಜಪ್ಪ. ಬಸವಣ್ಣ, ಮಲ್ಲನಾಯ್ಕ, ಪುರಸಭೆ ಸದಸ್ಯರು ಹಾಗೂ ಇತರರಿದ್ದರು. ಪಟ್ಟಣದ ಅಶ್ವಿನಿ ಬಡಾವಣೆಯಲ್ಲಿರುವ ಶ್ರೀ ವಿನಾಯಕ ವಿದ್ಯಾಸಂಸ್ಥೆ, ಬಂಡೀಪುರ ಹುಲಿ ಯೋಜನೆಯ ಕಾಡಂಚಿನ ತಾಲೂಕಿನ ಕುಂದಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೆರಕಣಾಂಬಿಯ ಬಲಚವಾಡಿ ಪುಟ್ಟಬಸಪ್ಪ ಸರ್ಕಾರಿ ಪ್ರೌಢಶಾಲೆ, ತಾಲೂಕಿನ ಭೀಮನಬೀಡು ಸರ್ಕಾರಿ ಪ್ರೌಢಶಾಲೆ, ಬೇಗೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳು ಯೋಗದ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಸಾರ್ವಜನಿಕರ ಮೆಚ್ಚುಗೆ ಗಳಿಸಿದರು.

ಕಂಟ್ರಾಕ್ಟರ್ ಲೈಸೆನ್ಸ್ ಮಾಡಿಸಿಕೊಡಲು ಲಂಚ

ಪಿಡಬ್ಲ್ಯೂಡಿ ಕಚೇರಿ ಎಸ್‌ಡಿಎ ಎಸಿಬಿ ಬಲೆಗೆ



ಚಾಮರಾಜನಗರ, ಜೂ.21–ಕಂಟ್ರಾಕ್ಟರ್ ಲೈಸೆನ್ಸ್ ಮಾಡಿಸಿಕೊಡಲು ವ್ಯಕ್ತಿಯೊಬ್ಬರಿಂದ ಲಂಚ ಸ್ವೀಕರಿಸಿದ ನಗರದ ಇಂಜಿನಿಯರ್ ಕಚೇರಿ (ಪಿಡಬ್ಲ್ಯೂಡಿ)ಯ ದ್ವಿತೀಯ ದರ್ಜೆ ಸಹಾಯಕ ಮಂಗಳವಾರ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಬಲೆಗೆ ಬಿದ್ದಿದ್ದಾರೆ.

ನಗರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿಯ ಎಸ್‌ಡಿಎ ಗೋವಿಂದಯ್ಯ ಎಸಿಬಿ ಬಲೆಗೆ ಸಿಕ್ಕಿ ಬಿದ್ದವರು.

ತಾಲೂಕಿನ ಅಟ್ಟುಗೂಳೀಪುರ ಗ್ರಾಮದ ನಿವಾಸಿಯೊಬ್ಬರು ಕ್ಲಾಸ್–4 ಗುತ್ತಿಗೆದಾರ ಪರವಾನಗಿ ಪಡೆಯಲು ಜೂ.3ರಂದು ನಗರದಲ್ಲಿರುವ ಚಾಮರಾಜನಗರ ವಿಭಾಗದ ಲೋಕೋಪಯೋಗಿ ಇಲಾಖೆ ಕಚೇರಿಗೆ ಬಂದು, ಎಸ್‌ಡಿಎ ಗೋವಿಂದಯ್ಯ ಅವರನ್ನು ಭೇಟಿ ಮಾಡಿದ್ದರು. ಈ ವೇಳೆ ಗೋವಿಂದಯ್ಯ, ಪರವಾನಗಿ ಮಾಡಿಸಿಕೊಡುವುದಾಗಿ ಭರವಸೆ ನೀಡಿ ಅಗತ್ಯ ದಾಖಲೆ ಹಾಜರುಪಡಿಸುವಂತೆ ತಿಳಿಸಿದ್ದರು. ಪರವಾನಗಿ ಬಯಸಿದ್ದ ವ್ಯಕ್ತಿ ಜೂ.13ರಂದು ಪೂರಕ ದಾಖಲೆಗಳೊಂದಿಗೆ ಗೋವಿಂದಯ್ಯ ಅವರನ್ನು ಸಂಪರ್ಕಿಸಿದ್ದಾರೆ. ಈ ಸಂದರ್ಭ 10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು, ಅಷ್ಟೂ ಹಣವನ್ನು ಗೋವಿಂದಯ್ಯ ಪಡೆದಿದ್ದರು. ಜೂ. 20ರಂದು ಮತ್ತೆ 7,500 ರೂ. ಲಂಚ ನೀಡುವಂತೆ ಗೋವಿಂದಯ್ಯ ಒತ್ತಾಯಿಸಿದ್ದರು. ಇದರಿಂದ ಬೇಸತ್ತ ಅರ್ಜಿದಾರರು ಮಂಗಳವಾರ(ಜೂ.21) ಬೆಳಗ್ಗೆ ಎಸಿಬಿ ಪೊಲೀಸರಿಗೆ ಈ ಬಗ್ಗೆ ಕ್ರಮಕೈಗೊಳ್ಳುವಂತೆ ದೂರು ನೀಡಿದ್ದರು.

ದೂರು ದಾಖಲಿಸಿಕೊಂಡ ಎಸಿಬಿ ಪೊಲೀಸರು ಮೈಸೂರಿನ ದಕ್ಷಿಣ ವಲಯದ ಭ್ರಷ್ಟಾಚಾರ ನಿಗ್ರಹ ದಳದ ಅಧೀಕ್ಷಕ ವಿ.ಜೆ.ಸಜೀತ್ ಅವರ ಮಾರ್ಗದರ್ಶನದಲ್ಲಿ ಅಧಿಕಾರಿಗಳು ಟ್ರ್ಯಾಪ್ ಕಾರ್ಯಾಚರಣೆ ನಡೆಸಿದರು. ಮಂಗಳವಾರ ಮಧ್ಯಾಹ್ನ ಲೋಕೋಪಯೋಗಿ ಇಲಾಖೆಯ ಕಚೇರಿಯಲ್ಲಿ ಗೋವಿಂದಯ್ಯ ಅವರು ದೂರುದಾರರಿಂದ 7,500 ರೂ. ಲಂಚ ಸ್ವೀಕರಿಸುತ್ತಿದ್ದಂತೆಯೇ ಎಸಿಬಿ ಅಧಿಕಾರಿಗಳು ಹಾಗೂ ಸಿಬ್ಬಂದಿ ದಾಳಿ ನಡೆಸಿ ಲಂಚದ ಹಣದ ಸಮೇತ ಗೋವಿಂದಯ್ಯನನ್ನು ವಶಕ್ಕೆ ಪಡೆದರು. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಎಸಿಬಿ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹರವೆ ಗ್ರಾಮದಲ್ಲಿ ಯೋಗ ದಿನಾಚರಣೆ



ಚಾಮರಾಜನಗರ, ಜೂ.21(ಎಸ್‌ಎಸ್)– ತಾಲೂಕಿನ ಹರವೆ ಗ್ರಾಮದ ವಿರಕ್ತ ಮಠದ ಚನ್ನಬಸವೇಶ್ವರ ವಿದ್ಯಾಸಂಸ್ಥೆ ಶಾಲಾ ವರಣದಲ್ಲಿ 8ನೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಶಾಲಾ ಆವರಣದಲ್ಲಿ ಆಯೋಜಿಸಿದ್ದ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ವಿದ್ಯಾ ಸಂಸ್ಥೆ ಅಧ್ಯಕ್ಷರೂ ಆದ ಹರವೆ ವಿರಕ್ತ ಮಠದ ಸರ್ಪಭೂಷಣ ಸ್ವಾಮೀಜಿ ಚಾಲನೆ ನೀಡಿ, ಮಾತನಾಡಿದರು. ಮಾನವನಿಗೆ ಪ್ರತಿದಿನ ಎದುರಾಗುವ ಒತ್ತಡಗಳಿಗೆ ಯೋಗದಿಂದ ಪರಿಹಾರವಿದೆ. ಯೋಗದ ಮಹತ್ವವನ್ನು ಜಗತ್ತಿಗೆ ಸಾರಲು, ಪ್ರತಿ ವರ್ಷ ಜೂ.21 ರಂದು 'ವಿಶ್ವ ಯೋಗ ದಿನ' ಆಚರಿಸಲಾಗುತ್ತಿದೆ. ಬದಲಾಗುತ್ತಿರುವ ಜೀವನಶೈಲಿಯಲ್ಲಿ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗ ನೆರವಾಗಲಿದೆ ಎಂದರು.

ಮುಕ್ಕಡಹಳ್ಳಿ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ಯೋಗಶಿಕ್ಷಕ ಮಲ್ಲಿಕಾರ್ಜುನ ಸ್ವಾಮಿ, ವಿದ್ಯಾರ್ಥಿಗಳ ಜೊತೆ ಯೋಗ ಮಾಡಿ, ಅದರ ಮಹತ್ವ ತಿಳಿಸಿಕೊಟ್ಟರು.

ಮುಕ್ಕಡಹಳ್ಳಿ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಶೋಭಾ, ನಿವೃತ್ತ ಯೋಗಶಿಕ್ಷಕ ಮೈಸೂರು ನಾಗರಾಜು, ಮುಕ್ಕಡಹಳ್ಳಿ ಆಯುರ್ವೇದ ಔಷಧಿ ವಿತರಕ ಶಿವಶಂಕರ್, ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿ ಪದಾಧಿಕಾರಿಗಳು, ಮುಖ್ಯಶಿಕ್ಷಕರು, ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

ಒತ್ತಡ ನಿರ್ವಹಣೆಗೆ ಯೋಗಾಭ್ಯಾಸ ಸಹಕಾರಿ



ಯಳಂದೂರು, ಜೂ.21(ವಿ.ನಾಗರಾಜು)–ಪ್ರತಿಯೊಬ್ಬರಿಗೂ ಒತ್ತಡ ನಿರ್ವಹಣೆಯೊಂದಿಗೆ ಸದೃಢ ಆರೋಗ್ಯ ಹೊಂದಲು ಯೋಗಾಭ್ಯಾಸ ಸಹಕಾರಿ ಎಂದು ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯೋಗ ದಿನಾಚರಣೆಯು ಒಂದು ದಿನಕ್ಕೆ ಸೀಮಿತಗೊಳಿಸದೇ ವಿದ್ಯಾರ್ಥಿಗಳು ಪ್ರತಿನಿತ್ಯ ಯೋಗ ಅಭ್ಯಾಸ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ವೀರಭದ್ರಸ್ವಾಮಿ, ಶಿಕ್ಷಕರಾದ ಗುಂಬಳ್ಳಿ ಬಸವರಾಜು, ದೈಹಿಕ ಶಿಕ್ಷಣ ಶಿಕ್ಷಕ ಮಲ್ಲಿಕಾರ್ಜುನ ಸ್ವಾಮಿ, ಶಿವಮೂರ್ತಿ, ಮಂಜುನಾಥ, ನಾಗರಾಜನಾಯಕ, ಪ್ರಕಾಶ್, ರೂಪಾ, ಪವಿತ್ರ ಶಶಿ, ಜಬೀನ್ ತಾಜ್, ಮಂಗಳಮ್ಮ, ವಿದ್ಯಾರ್ಥಿಗಳು ಯೋಗ ಪ್ರದರ್ಶಿಸಿದರು.

'ಜಿಲ್ಲಾಧಿಕಾರಿಗಳ ನಡೆ ಗ್ರಾಮದ ಕಡೆ' ಕಾರ್ಯಕ್ರಮ

ಜನರಿಂದ ಹಣ ಪಡೆಯದೆ ಕರ್ತವ್ಯ ನಿರ್ವಹಿಸಿ; ಡಿಸಿ



ಹನೂರು, ಜೂ.21(ಸೋಮು)–ಪ್ರತಿಯೊಬ್ಬ ಅಧಿಕಾರಿಯೂ ಸಾರ್ವಜನಿಕರಿಂದ ಹಣ ಪಡೆಯದೆ ತಮ್ಮ ಕರ್ತವ್ಯ ನಿರ್ವಹಿಸಬೇಕು. ನಿರ್ಲಕ್ಷಿಸಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಎಚ್ಚರಿಸಿದರು.

ತಾಲೂಕಿನ ಗಾಣಿಗ ಮಂಗಲ ಆಶ್ರಮ ಶಾಲೆ ಆವರಣದಲ್ಲಿ ಆಯೋಜಿಸಿದ್ದ 'ಜಿಲ್ಲಾಧಿಕಾರಿಗಳ ನಡೆ ಗ್ರಾಮದ ಕಡೆ' ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸರ್ಕಾರದಿಂದ ಮೂಲಸೌಕರ್ಯ ಕಲ್ಪಿಸುವ ಸಂಬಂಧ 1 ಕೋಟಿ ಅನುದಾನ ದೊರಕಿದ್ದು, ಕಾಮಗಾರಿ ಜವಾಬ್ದಾರಿಯನ್ನು ಕೆಆರ್‌ಐಡಿಎಲ್‌ಗೆ ವಹಿಸಲಾಗಿದೆ. ಆಗಾಗಿ ಮುಂದಿನ ದಿನಗಳಲ್ಲಿ ಮೂಲ ಸೌಕರ್ಯ ಒದಗಿಸಲಾಗುವುದು. ಇನ್ನು ಗ್ರಾಮಸ್ಥರ ಒತ್ತಾಸೆಯಂತೆ ಸ್ಮಶಾನ, ವಸತಿ ಒದಗಿಸುವ ಸಂಬಂಧ ಕಂದಾಯ ಇಲಾಖೆ ಅಧಿಕಾರಿಗಳು ಸರ್ವೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದರು. ಶಾಸಕ ಆರ್.ನರೇಂದ್ರ ಮಾತನಾಡಿ, ತಾಲೂಕಿನ ನಾಗಣ್ಣ ನಗರದಲ್ಲಿ 700 ಎಕರೆ ಸರ್ಕಾರಿ ಜಮೀನು ಹಾಗೂ ಹೂಗ್ಯಂ ಗ್ರಾಮದ 2 ಸಾವಿರ ಎಕರೆ ಸರ್ಕಾರಿ ಭೂಮಿ ಸರ್ವೆ ನಡೆಸಿ ಫಲಾನುಭವಿಗೆ ಸ್ವಾಧೀನ ಪತ್ರ ವಿತರಿಸಲು ಸೂಕ್ತ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ, ಸಾರಿಗೆ, ನೀರಾವರಿ, ಶಿಕ್ಷಣ, ಕೃಷಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ 120 ಅರ್ಜಿಗಳು ಸಲ್ಲಿಕೆಯಾದವು. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಗೀತಾ ಹುಡೇದ್, ತಹಸೀಲ್ದಾರ್ ಆನಂದಪ್ಪ ನಾಯಕ್, ಬಿಇಓ ಟಿ.ಆರ್.ಸ್ವಾಮಿ, ತಾಪಂ ಇಓ ಧರಣೇಶ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳಾ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಗಂಗಾಧರ್ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನವೀನ್, ಡಿಹೆಚ್‌ಓ ಡಾ.ವಿಶ್ವೇಶ್ವರಯ್ಯ, ಟಿಹೆಚ್‌ಓ ಡಾ.ಪ್ರಕಾಶ್, ಗ್ರಾಪಂ ಅಧ್ಯಕ್ಷೆ ಆರೋಗ್ಯಮ್ಮ, ಸದಸ್ಯೆ ಮಹದೇವಮ್ಮ, ಪಿಡಿಓ ರಾಮು ಅರಣ್ಯ ಹಕ್ಕು ಸಮಿತಿ ಅಧ್ಯಕ್ಷ ಕರಿಯಪ್ಪ, ಉಪಾಧ್ಯಕ್ಷೆ ರತ್ನಮ್ಮ ಹಾಗೂ ಗ್ರಾಮಸ್ಥರಿದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಚಾಮರಾಜನಗರ, ಜೂ.21–ದ್ವಿತೀಯ ಪಿಯು ಪರೀಕ್ಷೆಯಲ್ಲಿ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ವಾಣಿಜ್ಯ ವಿಭಾಗದ ಎಲ್.ಸುಚಿತ್ರ 550 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ನಗರದ ಗರಡಿಮನೆ ಉಪ್ಪಾರ ಬೀದಿ ನಿವಾಸಿ, ಗಾರೆ ಕೆಲಸದ ಮೇಸ್ತ್ರಿ ನಿಂಗರಾಜು–ಚಿಕ್ಕತಾಯಮ್ಮ ದಂಪತಿ ಪುತ್ರಿ.

ಕೊಡಗು ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಸೋಮವಾರಪೇಟೆಯಲ್ಲೂ ಯೋಗ ದಿನ ಆಚರಣೆ

ಸೋಮವಾರಪೇಟೆ, ಜೂ.21–ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಇಂದು ಯೋಗ ದಿನ ಆಚರಿಸಲಾಯಿತು.

ತಾಲೂಕು ಆಡಳಿತ, ಆಯುಷ್ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಆರ್ಟ್ ಆಫ್ ಲಿವಿಂಗ್, ನಿರಂತರ ಯೋಗಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜನೆ ಗೊಂಡಿದ್ದ ಯೋಗ ದಿನಾಚರಣೆಗೆ ತಹಶೀಲ್ದಾರ್ ಗೋವಿಂದರಾಜು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ನಿರಂತರ ಯೋಗ ಮಾಡುವುದರಿಂದ ಉತ್ತಮ ಆರೋಗ್ಯ ಹೊಂದಬಹುದು. ಕಳೆದ ಎಂಟು ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸುತ್ತಿದೆ ಎಂದರು. ತಾಪಂ ಕಾರ್ಯನಿರ್ವಹಣಾಧಿಕಾರಿ ಜಯಣ್ಣ, ಪಪಂ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ.ಸುರೇಶ್, ಆಯುಷ್ ಇಲಾಖೆ ವೈದ್ಯಾಧಿಕಾರಿ ಸ್ಮಿತಾ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಣ್ಣಯ್ಯ, ಇನ್ಸ್‌ಪೆಕ್ಟರ್ ಮಹೇಶ್, ವಿವಿಧ ಇಲಾಖೆಗಳ ಸಿಬ್ಬಂದಿಗಳು, ಸಂಘ ಸಂಸ್ಥೆ ಪದಾಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮಡಿಕೇರಿಯಲಿ ಯೋಗ ದಿನ ಆಚರಣೆ

ಮಡಿಕೇರಿ ಜೂ.21– ಸದಾ ಕ್ರಿಯಾಶೀಲತೆ ಮತ್ತು ಚಲನಶೀಲತೆಯಿಂದ ಇರಲು ಯೋಗ ಸಹಕಾರಿ. ಹಾಗೆಯೇ ಮನಸ್ಸಿನ ಏಕಾಗ್ರತೆಗೆ ಮತ್ತು ಒತ್ತಡದ ಬದುಕಿನಿಂದ ದೂರವಿರಲು ಯೋಗ ಅತ್ಯಗತ್ಯ ಎಂದು ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆಯುಷ್ ಇಲಾಖೆ ವತಿಯಿಂದ 'ಮಾನವೀಯತೆಗಾಗಿ ಯೋಗ' ಎಂಬ ಘೋಷ ವಾಕ್ಯದೊಂದಿಗೆ ಮಂಗಳವಾರ ನಗರದ ಕೆಳಗಿನ ಗೌಡ ಸಮಾಜ ಸಭಾಂಗಣದಲ್ಲಿ ಎಂಟನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ಆರೋಗ್ಯವೇ ಭಾಗ್ಯ, ಉತ್ತಮ ಆರೋಗ್ಯಕ್ಕಾಗಿ ಯೋಗ'. ಪ್ರತಿನಿತ್ಯ ಯೋಗ ಮಾಡಿದಲ್ಲಿ ಹಲವು ರೋಗಗಳಿಂದ ದೂರವಿರಬಹುದು ಎಂದು ಅವರು ಹೇಳಿದರು.

ಜಗತ್ತಿನ 177ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಜೂ.21 ರಂದು ಯೋಗ ದಿನಾಚರಣೆ ಆಚರಿಸಲಾಗುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಯೋಗದ ಮಹತ್ವವನ್ನು ಇಡೀ ವಿಶ್ವಕ್ಕೆ ಪರಿಚಯಿಸಿದ್ದಾರೆ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ. ರೇಣುಕಾ ದೇವಿ ಅವರು ಮಾತನಾಡಿ, ಯೋಗವು ಪುರಾತನ ಕಾಲದಿಂದಲೂ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಯೋಗವು ಮಹತ್ತರ ಪಾತ್ರವನ್ನು ವಹಿಸಿಕೊಂಡಿದೆ ಎಂದರು.

ಜಿಲ್ಲೆಯಲ್ಲಿ ಮೂರು ಆಯುರ್ವೇದ ತಾಲೂಕು ಆಸ್ಪತ್ರೆಗಳಿದ್ದು, ಹೋಮಿಯೋಪತಿ ಮತ್ತು ಆಯುರ್ವೇದ ಚಿಕಿತ್ಸೆಗಳು ಲಭ್ಯವಿದೆ. ಬಲ್ಲಮಾವಟಿ, ತೊರೆನೂರು, ಶ್ರೀಮಂಗಲ ಆಯುರ್ವೇದ ಕ್ಷೇಮ ಕೇಂದ್ರಗಳಾಗಿದ್ದು, ಸಾರ್ವಜನಿಕರಿಗೆ ಉಚಿತವಾಗಿ ಯೋಗ ತರಬೇತಿ ನೀಡಲಾಗುತ್ತಿದೆ ಎಂದರು.

ಮೆಡಿಕಲ್ ಕಾಲೇಜು ಉಪನ್ಯಾಸಕ ಡಾ. ಕಾಮತ್ ಮಾತನಾಡಿ ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗಿರಲು ಯೋಗ ಸಹಕಾರಿ. ಮನಸ್ಸನ್ನು ನಿಯಂತ್ರಣದಲ್ಲಿಡಲು ಹಾಗೂ ಸಮಸ್ಥಿತಿ ಕಾಪಾಡಲು ಯೋಗ ಒಳ್ಳೆಯದು. ಯೋಗದಿಂದ ಹೃದಯ ಸಂರಕ್ಷಣೆ, ಶರೀರ ದೃಢತೆ, ಮಾನಸಿಕ ಸ್ವಾಸ್ಥ್ಯ, ಶರೀರದ ಬೆಳವಣಿಗೆ, ದೃಢತೆ ಹಾಗೂ ರೋಗ ಬಾರದಂತೆ ಶರೀರದಲ್ಲಿ ಪ್ರಕ್ರಿಯೆ ಉಂಟಾಗುತ್ತದೆ ಎಂದರು.

ಶಾಸಕ ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ, ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಮೇಶ ಹೊಳ್ಳ, ಜಿಲ್ಲಾಧಿಕಾರಿ ಡಾ.ಬಿ.ಸಿ ಸತೀಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕ ಮೆ| ಬಾಲಸುಬ್ರಹ್ಮಣ್ಯಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೆಂಕಟೇಶ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಕಾರ್ಯಪ್ಪ, ಪ್ರಾಂಶುಪಾಲ ಡಾ. ವಿಶಾಲ್, ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ತಹಶೀಲ್ದಾರ್ ಮಹೇಶ್, ಯೋಗ ಶಿಕ್ಷಕರಾದ ಮಹೇಶ್ ಕುಮಾರ್, ಎನ್‌ಡಿಆರ್‌ಎಫ್ ಸಿಬ್ಬಂದಿಗಳು, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಇತರರು ಯೋಗ ದಿನಾಚರಣೆಯ ಪ್ರಾತ್ಯಕ್ಷಿಕೆಯಲ್ಲಿ ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಯೋಗ ಶಿಕ್ಷಕ ಮಹೇಶ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ ಕೊಡಗು ಜಿಲ್ಲಾ ಶಾಖೆ ವತಿಯಿಂದ ಏರ್ಪಡಿಸಿದ ಯೋಗದ ಬಗ್ಗೆ 2 ನಿಮಿಷದ ಕಿರು ಚಿತ್ರ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಡಾ.ಶುಭಾ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.



ದನದ ಮಾಂಸ ಮಾರುತ್ತಿದ್ದ ವ್ಯಕ್ತಿ ಬಂಧನ



ನಾಪೋಕ್ಲು, ಜೂ.21– ಅಕ್ರಮವಾಗಿ ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ. ಕೊಟ್ಟಮುಡಿ ಗ್ರಾಮದ ಟಿ.ಎ.ಮೊಯಿದು (32) ಬಂಧಿತ ಆರೋಪಿ. ಸಂತೆಯ ದಿನವಾದ ಸೋಮವಾರ ಆರೋಪಿ ಬೇತು ಗ್ರಾಮದ ಕಾರೇಕಾಡು ರಸ್ತೆಯ ಜಂಕ್ಷನ್ ಬಳಿ ಪ್ಲಾಸ್ಟಿಕ್ ಬಕೇಟಿನಲ್ಲಿ ದನದ ಮಾಂಸವನ್ನು ಮಾರಾಟ ಮಾಡುತ್ತಿದ್ದ. ಸಂಶಯಗೊಂಡ ಪೊಲೀಸರು ಪರಿಶೀಲಿಸಿದಾಗ ಬಕೇಟಿನಲ್ಲಿ ತಲಾ 1 ಕೆಜಿ ಯ 20 ಮಾಂಸದ ಪ್ಯಾಕೇಟ್‌ಗಳು ಸಿಕ್ಕಿದ್ದು, ಆರೋಪಿಯನ್ನು ಠಾಣಾಧಿಕಾರಿ ಸದಾಶಿವರವರು ದಸ್ತಗಿರಿ ಮಾಡಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಾದ ಶರತ್ ಕುಮಾರ್, ಪಂಚಲಿಂಗಪ್ಪ ಮತ್ತು ನಾಗರಾಜ್ ಚಾಲಕ ಶರೀಫ್ ಪಾಲ್ಗೊಂಡಿದ್ದರು.

ವಿದ್ಯುತ್ ಸ್ಪರ್ಶದಿಂದ ಕೃಷಿಕ ಸಾವು



ಕುಶಾಲನಗರ, ಜೂ.21– ಕಬ್ಬಿಣದ ಏಣಿಗೆ ವಿದ್ಯುತ್ ಸ್ಪರ್ಶವಾಗಿ ಕೃಷಿಕನೊಬ್ಬ ಸಾವನಪ್ಪಿದ ಘಟನೆ ನಂಜರಾಯಪಟ್ಟಣದಲ್ಲಿ ನಡೆದಿದೆ.

ಗ್ರಾಮದ ಕೃಷಿಕ ನೆಡುಮನೆ ಭರತ್(46) ಮೃತ ವ್ಯಕ್ತಿ. ತಮ್ಮ ತೋಟದಲ್ಲಿ ಮರ ಕಪಾತು ಮಾಡುವ ವೇಳೆ ಹಾದುಹೋಗಿದ್ದ 11 ಕೆವಿ ವಿದ್ಯುತ್ ಮಾರ್ಗಕ್ಕೆ ಏಣಿ ತಗುಲಿ ಈ ದುರ್ಘಟನೆ ಸಂಭವಿಸಿದೆ. ಸ್ಥಳಕ್ಕೆ ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ಹಾಗೂ ಚೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒತ್ತಾಯ: ಮೃತ ಭರತ್ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ನಂಜರಾಯಪಟ್ಟಣ ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ, ಗ್ರಾಮಸ್ಥರು ಚೆಸ್ಕಾಂ ಅಧಿಕಾರಿಗಳನ್ನು ಒತ್ತಾಯಿಸಿದರು.

ಇಂದು ಕೋವಿಡ್–19 ಲಸಿಕಾ ಮೇಳ

ಮಡಿಕೇರಿ, ಜೂ.21– ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಜೂ.22 ರಂದು ಲಸಿಕಾ ಮೇಳ ನಡೆಯಲಿದೆ. ಈ ಲಸಿಕಾ ಮೇಳದಲ್ಲಿ ಲಸಿಕಾಕರಣಕ್ಕೆ ಬಾಕಿ ಇರುವ 12 ವರ್ಷ ಮೇಲ್ಪಟ್ಟ ವಯೋಮಾನದ ಮೊದಲನೇ ಹಾಗೂ ಎರಡನೇ ವರಸೆಗೆ ಬಾಕಿ ಇರುವ ಎಲ್ಲಾ ಫಲಾನುಭವಿಗಳು ಹಾಗೂ 60 ವರ್ಷ ಮೇಲ್ಪಟ್ಟ ಮುನ್ನೆಚ್ಚರಿಕೆ ಡೋಸ್‌ಗೆ ಬಾಕಿ ಇರುವ ಫಲಾನುಭವಿಗಳು ಕೋವಿಡ್ ಲಸಿಕೆಯನ್ನು ಹಾಕಿಸಿಕೊಳ್ಳುವಂತೆ ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಟಿಪ್ಪು, ಫ್ರೆಂಚ್ ಈಸ್ಟ್ ಇಂಡಿಯಾದಿಂದ ಕೊಡವರ ಹತ್ಯೆ

ಅಂತರರಾಷ್ಟ್ರೀಯ ಸ್ಮಾರಕ ಸ್ಥಾಪಿಸುವವರೆಗೂ ಕೊಡವ ನ್ಯಾಷನಲ್ ಕೌನ್ಸಿಲ್‌ನಿಂದ ಪ್ರತಿಭಟನೆ



ಮಡಿಕೇರಿ,ಜೂ.21– 1785ರ ಡಿ.12ರಂದು ಟಿಪ್ಪು ಹಾಗೂ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯ ಕುತಂತ್ರದಿಂದ ಹತ್ಯೆಗೀಡಾದ ಕೊಡವ ಬುಡಕಟ್ಟು ವೀರರ ನೆನಪಿಗಾಗಿ ಅಂತರರಾಷ್ಟ್ರೀಯ ಸ್ಮಾರಕವನ್ನು ನಿರ್ಮಿಸುವಲ್ಲಿಯವರೆಗೆ ಶಾಂತಿಯುತ ಹೋರಾಟ ಮುಂದುವರೆಯಲಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ದೇವಟ್ ಪರಂಬುವಿನಲ್ಲಿ ಸಿಎನ್‌ಸಿ ವತಿಯಿಂದ ನಡೆದ ಮಾಸಿಕ ಶ್ರಾದ್ಧಾಂಜಲಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ನಾಚಪ್ಪ, ಹಿರಿಯರನ್ನು ಕಳೆದುಕೊಂಡ ನೋವು ಇಂದಿಗೂ ಮಾಸಿಲ್ಲ, ಈ ಘೋರ ಘಟನೆ ಕೊಡವ ಬುಡಕಟ್ಟು ಜನಾಂಗದ ಸಂಖ್ಯೆಯನ್ನು ಕ್ಷೀಣಿಸುವಂತೆ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

32ಕ್ಕೂ ಹೆಚ್ಚು ಬಾರಿ ಟಿಪ್ಪು ಸೇರಿದಂತೆ ನಾಡಿನ ಶತ್ರುಗಳನ್ನು ಹಿಮ್ಮೆಟ್ಟಿಸಿದ ವೀರ ಕೊಡವರನ್ನು ಸಂಪೂರ್ಣವಾಗಿ ನಾಶ ಮಾಡಲು ಹೂಡಿದ ಸಂಚಿನಿಂದ ಹಿರಿಯರ ಹತ್ಯೆ ನಡೆದಿದೆ ಈ ದುರಂತ ನರಮೇಧವನ್ನು ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಮತ್ತು ಸಾವಿಗೀಡದವರ ಸ್ಮರಣೆಗಾಗಿ ಸ್ಮಾರಕವನ್ನು ನಿರ್ಮಿಸಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭ ಸಂಘಟನೆಯ ಪ್ರಮುಖರು ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಮಂಡಿಸಿದರು.

ಕೊಡವ ಬುಡಕಟ್ಟು ಜನಾಂಗಕ್ಕೆ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ನೀಡಬೇಕು, ಎಸ್‌ಟಿ ಟ್ಯಾಗ್ ಮೂಲಕ ಕೊಡವ ಬುಡಕಟ್ಟು ಜನಾಂಗದ ಸಮಗ್ರ ಸಬಲೀಕರಣಕ್ಕೆ ಕ್ರಮ ಕೈಗೊಳ್ಳಬೇಕು, ಸಂವಿಧಾನದ 25 ಮತ್ತು 26ನೇ ವಿಧಿಗಳಡಿಯಲ್ಲಿ ಕೊಡವ ಬುಡಕಟ್ಟು ಜನಾಂಗದ 'ಸಂಸ್ಕಾರ ಗನ್'ಗೆ ಖಾತರಿ ನೀಡಬೇಕು, ಕೊಡವ ಭಾಷೆಯನ್ನು 8ನೇ ಶೆಡ್ಯೂಲ್‌ಗೆ ಸೇರಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರಕಾರ ಈಡೇರಿಸಬೇಕೆಂದು ಒತ್ತಾಯಿಸಿದರು.

ಪ್ರಮುಖರಾದ ಕಲಿಯಂಡ ಪ್ರಕಾಶ್, ಅರೆಯಡ ಗಿರೀಶ್, ಮಂದಪಂಡ ಮನೋಜ್, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಚೀಯಬೇರ ಸತೀಶ್ ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

ಜಿಲ್ಲೆಯಲ್ಲಿ ಮುಂದುವರೆದ ವನ್ಯಜೀವಿ–ಮಾನವ ಸಂಘರ್ಷ

ಅಧಿವೇಶನದಲ್ಲಿ ಚರ್ಚಿಸಿ ಶಾಶ್ವತ ಪರಿಹಾರಕ್ಕೆ ಸಂಕೇತ್ ಪೂವಯ್ಯ ಆಗ್ರಹ



ವಿರಾಜಪೇಟೆ, ಜೂ.21– ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ ಮತ್ತು ಮಾನವ ಸಂಘರ್ಷ ಅನೇಕ ವರ್ಷಗಳಿಂದ ಮುಂದುವರೆದುಕೊಂಡು ಬಂದಿದ್ದು, ಹಲವು ಬಡಕುಟುಂಬಗಳು ಬಲಿಯಾಗಿವೆ. ಈ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ವಿಧಾನಸಭೆಯ ಅಧಿವೇಶನದಲ್ಲಿ ಚರ್ಚಿಸುವ ಮೂಲಕ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ವನ್ಯಜೀವಿ ಮತ್ತು ಮಾನವ ಸಂಘರ್ಷ ಹೋರಾಟಗಾರ ಮೇರಿಯಂಡ ಸಂಕೇತ್ ಪೂವಯ್ಯ ಆಗ್ರಹಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಆನೆ ದಾಳಿಯಿಂದ ಭತ್ತ ಮತ್ತು ಬಾಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ, ಕಾಫಿ, ಅಡಿಕೆ ಬೆಳೆ ನಾಶದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹುಲಿ ಮತ್ತು ಕಾಡಾನೆ ದಾಳಿಯಿಂದ ನೂರಾರು ಮಂದಿ ಗಾಯಗೊಂಡಿದ್ದಾರೆ. ಅನೇಕರು ಮೃತಪಟ್ಟಿದ್ದಾರೆ, ಸಾವು–ನೋವು ಸಂಭವಿಸಿದರೂ ಕೂಡ ಯಾವುದೇ ಸಂದರ್ಭದಲ್ಲಿ ಅರಣ್ಯ ಸಚಿವರು ಕೊಡಗಿಗೆ ಭೇಟಿ ನೀಡದಿರುವುದು ದುರದೃಷ್ಟಕರ ಎಂದು ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತ ಬೇಸರ ವ್ಯಕ್ತಪಡಿಸಿದ್ದಾರೆ.

ಸಚಿವರುಗಳು ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರವಾಸ ಕೈಗೊಳ್ಳುತ್ತಾರೆ. ಆದರೆ ಅರಣ್ಯ ಸಚಿವರಿಗೆ ಬರೀ ಎಂಟು ಜಿಲ್ಲೆಗಳನ್ನು ಮಾತ್ರ ನೋಡಿಕೊಳ್ಳಬೇಕಾಗಿದೆ. ಆದರೂ ಕೊಡಗಿಗೂ ಭೇಟಿ ನೀಡಿಲ್ಲ, ವನ್ಯ ಜೀವಿ ಹಾವಳಿಯಿಂದ ರೈತರ ಸಂಕಷ್ಟವನ್ನು ಬಗೆಹರಿಸಿಲ್ಲ. ಅದರಿಂದ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಹರಿಸಿ ತಜ್ಞರ ಸಮಿತಿ ರಚಿಸುವ ಮೂಲಕ ವನ್ಯಜೀವಿ ಮತ್ತು ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಮಾರ್ಗ ಕಂಡುಹಿಡಿದು ಅನುಷ್ಠಾನಕ್ಕೆ ತರಬೇಕೆಂದು ಸಂಕೇತ್ ಪೂವಯ್ಯ ಆಗ್ರಹಿಸಿದ್ದಾರೆ.

ಅರಣ್ಯಾಧಿಕಾರಿಗಳ ವೈಫಲ್ಯದಿಂದ ಕಾಡು ಪ್ರಾಣಿಗಳು ನಾಡಿಗೆ ಬರುವಂತಾಗಿದೆ, ವನ್ಯಜೀವಿ ಹಾವಳಿಯಿಂದ ಕಾಡಂಚಿನ ಜನರು ಜೀವ ಕೈಯಲ್ಲಿಡಿದು ಜೀವಿಸುವಂತಾಗಿದೆ, ಅರಣ್ಯ ರಕ್ಷಕರಿಗೆ ಸರ್ಕಾರ ಹೆಚ್ಚಿನ ಬತ್ಯೆ ನೀಡುತ್ತಿಲ್ಲ. 15–20 ವರ್ಷಗಳಿಂದಲು ನೌಕರರಾಗಿ ದುಡಿಯುತ್ತಿದ್ದಾರೆ, ಅರಣ್ಯ ವ್ಯಾಪ್ತಿಗಳಲ್ಲಿ ಸಿಬ್ಬಂದಿಗಳ ಕೊರತೆಯಿದ್ದು ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಕಾಡು ಪ್ರಾಣಿಗಳ ಹಾವಳಿಗೆ ತುತ್ತಾದ ಸುಮಾರು 336 ಬಡ ಕುಟುಂಬಗಳಿಗೆ ತಾವು ನೆರವು ನೀಡಿರುವುದಾಗಿ ಅವರು ಇದೇ ವೇಳೆ ತಿಳಿಸಿದರು.

ಮೂರನೇ ಪುಟದಿಂದ

ನಮೋ ಯೋಗ

ಪಾಲ್ಗೊಂಡಿದ್ದ ಯೋಗ ಕಾರ್ಯಕ್ರಮ ಅತ್ಯಂತ ವ್ಯವಸ್ಥಿತ ಹಾಗೂ ಯಶಸ್ವಿಯಾಗಿ ನೆರವೇರಿತು.

ನಿದ್ದೆಗೆಟ್ಟ ಹಲವರು: ಕೇಂದ್ರ ಆಯುಷ್ ಮಂತ್ರಾಲಯ, ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ಸಹಯೋಗದಲ್ಲಿ 'ಮಾನವೀಯತೆಗಾಗಿ ಯೋಗ' ಘೋಷ ವಾಕ್ಯದಡಿ ನಡೆದ ಯೋಗ ಪ್ರದರ್ಶನಕ್ಕೆ ಪ್ರಧಾನಿ ಆಗಮನ ಕಳೆಕಟ್ಟಿತ್ತು. ಈ ದಿನವನ್ನು ಅವಿಸ್ಮರಣೀಯವಾಗಿ



ಸಲು ಯೋಗದ ಕನವರಿಕೆಯಲ್ಲೇ ಯೋಗಾಸಕ್ತರು ಮುಂಜಾನೆಯೇ ನಿದ್ದೆಯಿಂದ ಎದ್ದು ಬಿಳಿಬಣ್ಣದ ಟಿ-ಶರ್ಟ್ ಧರಿಸಿ ಅರಮನೆ ಆವರಣಕ್ಕೆ ಬಂದಿದ್ದರು.

ಕಟ್ಟುನಿಟ್ಟಿನ ತಪಾಸಣೆ: ಅರಮನೆ ಆವರಣ ಪ್ರವೇಶಿಸುವ ಎಲ್ಲಾ ದ್ವಾರಗಳಲ್ಲೂ ಭದ್ರತಾ ಸಿಬ್ಬಂದಿ ಪ್ರತಿಯೊಬ್ಬರನ್ನು ಮೂರು ಬಾರಿ ತಪಾಸಣೆ ಮಾಡಿ ಅರಮನೆ ಒಳಗೆ ಬಿಟ್ಟರು. ಅರಮನೆಯ ಗೇಟ್ ಹೊರಗೆ ಒಮ್ಮೆ, ಮತ್ತೊಮ್ಮೆ ಗೇಟ್ ಪ್ರವೇಶಿಸುವ ವೇಳೆ, ಬಳಿಕ ಅರಮನೆ ಪ್ರವೇಶಿಸಿದ ನಂತರ ಮೆಟಲ್ ಡಿಟೆಕ್ಟರ್ ಹಾಗೂ ಲೋಹ ಶೋಧಕ ಉಪಕರಣದಿಂದ ತಪಾಸಣೆ ಮಾಡಿ ಯೋಗಾಸನ ಪ್ರದರ್ಶನ ಸ್ಥಳಕ್ಕೆ ಬಿಡಲಾಗುತ್ತಿತ್ತು.

ಮುದ ನೀಡಿದ ವಾತಾವರಣ: ಅರಮನೆ ಆವರಣದಲ್ಲಿ ಮುಂಜಾನೆಯೇ ಸಾವಿರಾರು ಮಂದಿ ನೆರೆದಿದ್ದರು. ಮಕ್ಕಳು, ಹಿರಿಯ ನಾಗರಿಕರಾದಿಯಾಗಿ ಎಲ್ಲಾ ವಯೋಮಾನದವರೂ ಯೋಗ ಮಾಡಲು ಬಂದಿದ್ದರು. ನೀಲಿ ಬಣ್ಣದ ಆಗಸ, ತಂಪಾದ ತಿಳಿಗಾಳಿ, ಹಕ್ಕಿಗಳ ಚಿಲಿಪಿಲಿಯ ವಾತಾವರಣ ಯೋಗಪಟುಗಳ ಉಲ್ಲಾಸ ಹೆಚ್ಚಿಸಿತು. ಇಂತಹ ಆಹ್ಲಾದಕರ ವಾತಾವರಣದಲ್ಲಿ ಅರಮನೆಯ ವೈಭವ ನೋಡುತ್ತ ಯೋಗಪಟುಗಳು ಸಂಭ್ರಮಿಸಿದರು.

ಬೆಳಗ್ಗೆ 6.26ಕ್ಕೆ ಅರಮನೆಗೆ ಮೋದಿ ಆಗಮನ: ಕಳೆದ ರಾತ್ರಿ ರ್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಪ್ರಧಾನಿ ನರೇಂದ್ರ ಮೋದಿ ಇಂದು ಬೆಳಗ್ಗೆ 6.26ಕ್ಕೆ ಜಯಮಾರ್ತಾಂಡ ದ್ವಾರದಿಂದ ಅರಮನೆ ಆವರಣ ಪ್ರವೇಶಿಸಿದರು. ಬಳಿಕ 6.32ಕ್ಕೆ ಯೋಗ ದಿನದ ವೇದಿಕೆ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಆಗಮಿಸಿ, ಯೋಗಪಟುಗಳತ್ತ ಕೈ ಬೀಸಿ ಉತ್ಸಾಹ ತುಂಬಿದರು. ಇದೇ ವೇಳೆ ಯೋಗಪಟುಗಳು ಅವರಿಗೆ ಜಯ ಘೋಷಣೆ ಕೂಗುವುದರೊಂದಿಗೆ ಸ್ವಾಗತಿಸಿದರು.

45 ನಿಮಿಷ ಯೋಗಾಸನ: 38 ನಿಮಿಷ ನಡೆದ ಸಭಾ ಕಾರ್ಯಕ್ರಮದ ಬಳಿಕ ಯೋಗಾಸನ ಪ್ರದರ್ಶನ ಆರಂಭಿಸಲಾಯಿತು. ಈ ವೇಳೆ ಯೋಗಪಟುಗಳೊಂದಿಗೆ ಪ್ರಧಾನಿ ನರೇಂದ್ರ ಮೋದಿ, 45 ನಿಮಿಷ ಯೋಗಾಸನ ಪ್ರದರ್ಶಿಸಿದರು. 4 ನಿಮಿಷ ಸಾಮಾನ್ಯ ಚಲನಕ್ರಿಯೆ ಅಭ್ಯಾಸದೊಂದಿಗೆ ದೇಹವನ್ನು ಅಣಿಗೊಳಿಸಿಕೊಂಡು 25 ನಿಮಿಷ ಕಾಲ ವಿವಿಧ ಯೋಗ ಆಸನಗಳನ್ನು ಪ್ರದರ್ಶಿಸಲಾಯಿತು. ಬಳಿಕ 14 ನಿಮಿಷ ಪ್ರಾಣಾಯಾಮ, ಧ್ಯಾನ ಮತ್ತು ಸಂಕಲ್ಪ, ಕೊನೆಗೆ ಓಂಕಾರ ಝೇಂಕರಿಸಿತು.

ಖಾಲಿಯಿದ್ದ ಯೋಗಾಸನ ಸ್ಥಳ: ಅರಮನೆ ಆವರಣದಲ್ಲಿ 53 ಬ್ಲಾಕ್‌ನಲ್ಲಿ 15 ಸಾವಿರ ಮಂದಿಗೆ ಯೋಗಾಸನ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಆದರೆ ಕೆಲವು ಗೊಂದಲ ಹಾಗೂ ನಿಗದಿತ ಸಮಯದೊಳಗೆ ಸಾಕಷ್ಟು ಮಂದಿ ಅರಮನೆ ಪ್ರವೇಶಿಸಲು ಸಾಧ್ಯವಾಗದ ಕಾರಣ, ಅರಮನೆ ಮುಂಭಾಗದ ಪ್ರಾಂಗಣದಲ್ಲಿ ವ್ಯವಸ್ಥೆ ಮಾಡಿದ್ದ 5ರಿಂದ 6 ಬ್ಲಾಕ್‌ಗಳು ಯೋಗ ಪಟುಗಳಿಲ್ಲದೆ ಖಾಲಿ ಇದ್ದವು. ಮೋದಿ ಅರಮನೆ ಪ್ರವೇಶದ ಬಳಿಕ ಭದ್ರತಾ ದೃಷ್ಟಿಯಿಂದ ಅರಮನೆ ಒಳಪ್ರವೇಶಕ್ಕೆ ಯಾರಿಗೂ ಅವಕಾಶ ನೀಡದ ಹಿನ್ನೆಲೆಯಲ್ಲಿ ಯೋಗ ಮಾಡಲು ಹೆಸರು ನೋಂದಾಯಿಸಿದ್ದ 5ರಿಂದ 6 ಸಾವಿರ ಮಂದಿ ಅವಕಾಶದಿಂದ ವಂಚಿತರಾದರು. ಹಾಗಾಗಿ ಅರಮನೆಯ ಆವರಣದಲ್ಲಿ 8ರಿಂದ 10 ಸಾವಿರ ಮಂದಿ ಯೋಗಾಸನ ಮಾಡಿರಬಹುದು ಎಂದು ಅಂದಾಜಿಸಲಾಗಿದೆ.

40 ಎಲ್‌ಇಡಿ: ಯೋಗ ಕಾರ್ಯಕ್ರಮ ವೀಕ್ಷಿಸಲು ಅರಮನೆ ಸುತ್ತ 40 ಎಲ್‌ಇಡಿ ಬೃಹತ್ ಪರದೆಯನ್ನು ಅಳವಡಿಸಲಾಗಿತ್ತು. ವಿವಿಧ ಯೋಗ ಸಂಸ್ಥೆಗಳಿಂದ ನೋಂದಾಯಿತರಾದ ಯೋಗಪಟುಗಳೇ ಇಂದಿನ ಯೋಗ ಪ್ರದರ್ಶನದಲ್ಲಿ ಹೆಚ್ಚಿದ್ದರು.

ಬೆರಳೆಣಿಕೆಯಷ್ಟು ವಿದೇಶಿಯರು: ಇಂದು ನಡೆದ ಯೋಗ ದಿನದ ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ 8 ಹಾಸ್ಟೆಲ್‌ಗಳಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹೆಚ್.ಎಸ್.ಬಿಂದ್ಯಾ ನೇತೃತ್ವದಲ್ಲಿ 600 ವಿದ್ಯಾರ್ಥಿಗಳು ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. ಸರ್ಕಾರಿ ಶಾಲೆಗಳ 2,500, ಖಾಸಗಿ ಶಾಲೆಗಳ 1,500 ಹಾಗೂ ಯೋಗ ಶಾಲೆಗಳ 3500 ಮಂದಿ ಸೇರಿದಂತೆ 13 ಮಂದಿ ತೃತೀಯ ಲಿಂಗಿಗಳು, 15ಕ್ಕೂ ಹೆಚ್ಚು ಮಂದಿ ವಿಕಲಚೇತನರು, 20ಕ್ಕೂ ಹೆಚ್ಚು ವಿದೇಶಿಗರು ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಕಪ್ಪು ಬಣ್ಣದ ಹಿಜಾಬ್ ಧರಿಸಿದ್ದವರಿಗೆ ಪ್ರವೇಶ ನಿರಾಕರಣೆ: ಪ್ರಧಾನಿ ಮೋದಿ ಪಾಲ್ಗೊಂಡಿದ್ದ ಯೋಗ ಪ್ರದರ್ಶನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಕಪ್ಪು ಬಣ್ಣದ ಹಿಜಾಬ್ ಧರಿಸಿ ಬಂದಿದ್ದ 11 ವಿದ್ಯಾರ್ಥಿನಿಯರಿಗೆ ಪಾಲ್ಗೊಳ್ಳಲು ಅವಕಾಶ ನಿರಾಕರಿಸಲಾಯಿತು. ಆದರೆ ಬಿಳಿ, ಕಂದು ಬಣ್ಣದ ಹಿಜಾಬ್ ಧರಿಸಿದ್ದ ಕೆಲವರಿಗೆ ಯೋಗ ಮಾಡಲು ಅವಕಾಶ ನೀಡಲಾಗಿತ್ತು.

ಪಾಸ್ ಗೊಂದಲ: ಅರಮನೆಯಲ್ಲಿ ನಡೆಯುವ ದಸರಾ ಸೇರಿದಂತೆ ಯಾವುದೇ ಕಾರ್ಯಕ್ರಮಗಳ ವೀಕ್ಷಣೆಗೆ ಬರುವ ಜನರಿಗೆ ಈ ಹಿಂದೆ ಆಗುತ್ತಿದ್ದಂತೆ ಯೋಗ ಕಾರ್ಯಕ್ರಮಕ್ಕೂ ಪಾಸ್ ಗೊಂದಲ ಪುನರಾವರ್ತನೆಯಾಯಿತು. ಕ್ಯೂಆರ್ ಕೋಡ್ ಇದ್ದರೂ ಸ್ಕ್ಯಾಬ್ ಕೋಡ್‌ನಲ್ಲಿ ಸ್ಕ್ಯಾನ್ ಆಗಲಿಲ್ಲ. ಇಂತಹ ಪಾಸ್ ಹೊಂದಿದವರಿಗೆ ಪೊಲೀಸರು ಒಳಗೆ ಬಿಡಲಿಲ್ಲ. ಇದರಿಂದ ಬೇಸರಗೊಂಡು ವಾಪಸ್ ತೆರಳಿದ ಯೋಗಪಟುಗಳು, ನಾವು 15 ದಿನ ಮುಂಚಿತವಾಗಿಯೇ ನೋಂದಣಿ ಮಾಡಿದ್ದೆವು. ಆದರೀಗ ತಾಂತ್ರಿಕ ಕಾರಣ ನೀಡಿ ಒಳಗೆ ಬಿಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಮತ್ತಷ್ಟು ಮಂದಿಗೆ ಯಾವ ಗೇಟ್‌ನಲ್ಲಿ ಹೋಗಬೇಕು ಎಂಬ ಗೊಂದಲ ಉಂಟಾದ ಕಾರಣ ನಿಗದಿತ ಸಮಯದಲ್ಲಿ ಅರಮನೆ ಒಳಗೆ ಪ್ರವೇಶ ಪಡೆಯಲು ಸಾಧ್ಯವಾಗದೆ ಬೇಸರದಿಂದ ವಾಪಸ್ಸಾದರು.

ವೇದಿಕೆಯಲ್ಲಿ ಸಂಸದ ಪ್ರತಾಪ ಸಿಂಹ: ಯೋಗ ದಿನಾಚರಣೆಯ ಸಭಾ ವೇದಿಕೆಯ ಮೇಲೆ ಪ್ರಧಾನಿ ಮೋದಿ ಅವರೊಂದಿಗೆ ಸ್ಥಳೀಯ ಜನಪ್ರತಿನಿಧಿಗಳಲ್ಲಿ ಸಂಸದ ಪ್ರತಾಪ ಸಿಂಹ ಮಾತ್ರ ಆಸೀನರಾಗಿದ್ದರು. ಇನ್ನಿತರ ಜನಪ್ರತಿನಿಧಿಗಳು ಜನಸಾಮಾನ್ಯರೊಂದಿಗೆ ನೆಲಹಾಸಿನ ಮೇಲೆ ಕುಳಿತುಕೊಂಡಿದ್ದರು.

ಪರಿಪಕ್ವ ಯೋಗ ಪ್ರದರ್ಶನ

71 ವರ್ಷದ ಮೋದಿ ಅವರು ಪ್ರತಿ ಆಸನವನ್ನೂ ಬಹಳ ಸುಲಲಿತವಾಗಿ ಯುವ ಜನರು ನಾಚುವಂತೆ ಮಾಡಿದರು. ನಿಂತು, ಕುಳಿತು ಮತ್ತು ಮಲಗಿ ಹಲವು ಆಸನಗಳನ್ನು ಲೀಲಾಜಾಲವಾಗಿ ಪ್ರದರ್ಶಿಸಿದರು. ಪ್ರಾಣಾಯಾಮವನ್ನು ನಿರಾಯಾಸವಾಗಿ ಮಾಡುವ ಮೂಲಕ ಗಮನ ಸೆಳೆದರು. ಅವರ ಯೋಗಾಭ್ಯಾಸವನ್ನು ಸುತ್ತ ನೆರೆದವರು ಮತ್ತು ಮಾಧ್ಯಮದವರು ಕ್ಯಾಮೆರಾದಲ್ಲಿ ಸೆರೆ ಹಿಡಿಯಲು ಮುಗಿಬಿದ್ದರು.

ಬೆಳಗ್ಗೆ 7 ಗಂಟೆಗೆ ಆರಂಭವಾದ ಯೋಗ ಪ್ರದರ್ಶನದಲ್ಲಿ ಯೋಗ ಗುರುಗಳ ಸೂಚನೆಯಂತೆ ಸಮಸ್ಥಿತಿಯಿಂದ ಕುತ್ತಿಗೆ ಮುಂದೆ, ಹಿಂದೆ, ಕುತ್ತಿಗೆ ಬಲ-ಎಡ ಹೀಗೆ 4 ನಿಮಿಷ ಲಘು ವ್ಯಾಯಾಮ ಮಾಡಿ ಮೋದಿ ತಯಾರಾದರು. ಬಳಿಕ ತಾಡಾಸನ, ವೃಕ್ಷಾಸನ, ಪಾದ ಹಸ್ತಾಸನ, ಅರ್ಧಚಕ್ರಾಸನ, ತ್ರಿಕೋಣಾಸನ, ಸಮದಂಡಾಸನವನ್ನು ಮಾಡಿದರು. ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ ಹೀಗೆ ವಿವಿಧ ಆಸನಗಳನ್ನು 25 ನಿಮಿಷ ಕಾಲ ಪ್ರದರ್ಶಿಸಿದರು. ಕಪಾಲಭಾತಿ, ನಾಡಿಶೋಧ ಪ್ರಾಣಾಯಾಮ, ಶೀತಲಿ ಪ್ರಾಣಾಮಯ, ಭ್ರಾಮರಿ ಪ್ರಾಣಾಯಾಮ ಬಳಿಕ ಧ್ಯಾನ ಮಾಡಿದರು. ಹೀಗೆ ಎಲ್ಲ ಆಸನಗಳನ್ನು ನಿರರ್ಗಳವಾಗಿ ಮಾಡಿದರು.

ದೀರ್ಘ ದಂಡ ನಮಸ್ಕಾರ: ಯೋಗಾಸನದ ಬಳಿಕ ಜನರತ್ತ ತಿರುಗಿದ ಪ್ರಧಾನಿ ಮೋದಿ, ಕೈ ಜೋಡಿಸಿ ಮುಗಿದರು. ಈ ವೇಳೆ ಸಭಿಕರು 'ಮೋದಿ ಮೋದಿ' ಎಂದು ಘೋಷಣೆ ಕೂಗಲಾರಂಭಿಸಿದರು. ಕೊನೆಗೆ ಕೈಬೀಸುತ್ತಲೇ ಜನರ ಬಳಿ ತೆರಳಿದರು. ಈ ವೇಳೆ ಅವರೊಂದಿಗೆ ಸೆಲ್ಫಿ ತೆಗೆಸಿಕೊಳ್ಳಲು ಯೋಗಪಟುಗಳು ಮುಗಿಬಿದ್ದರು. ಪೋಷಕರೊಂದಿಗೆ ಬಂದಿದ್ದ ಮಗುವಿನ ಕೆನ್ನೆ ಹಿಂಡಿದ ಮೋದಿ, ಅದರೊಂದಿಗೆ ಫೋಟೋ ತೆಗೆಸಿಕೊಂಡು ಮುನ್ನಡೆಯುತ್ತಿದ್ದಾಗ, ಯೋಗ ಮಾಡುತ್ತಿದ್ದವರೊಬ್ಬರು ಮೋದಿಯವರ ಪಾದಕ್ಕೆ ದೀರ್ಘ ದಂಡ ನಮಸ್ಕಾರ ಮಾಡಿದರು. ಅನಿರೀಕ್ಷಿತ ಈ ಬೆಳವಣಿಗೆಯಿಂದ ಎಚ್ಚೆತ್ತ ಭದ್ರತಾ ಸಿಬ್ಬಂದಿ ಮೋದಿ ಅವರ ಪಾದದ ಬಳಿ ಮಲಗಿದ್ದ ಯುವಕನನ್ನು ಮೇಲೆತ್ತಿ, ಒಂದೆಡೆ ಸರಿಸಿದರು. ಬಳಿಕ ಎಸ್ಪಿಜಿ ಬೆಂಗಾವಲಿನಲ್ಲಿ ಮೋದಿ ಅರಮನೆ ಆವರಣದಿಂದ ನಿರ್ಗಮಿಸಿದರು.

ಯೋಗದಿಂದ ಶಾಂತಿ, ಸಮಾಧಾನ

ದೇಶದ 75 ನಗರಗಳಲ್ಲಿ ಸಾಮೂಹಿಕ ಯೋಗ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನರೇಂದ್ರ ಮೋದಿ ನುಡಿದರು. ನಂತರ ಪ್ರಧಾನಿ ಮೋದಿ ಅವರು ಸಾವಿರಾರು ಜನಸಾಮಾನ್ಯರೊಂದಿಗೆ 45 ನಿಮಿಷಗಳ ಕಾಲ ಯೋಗಾಭ್ಯಾಸ ಮಾಡಿದರು. ಪ್ರಾಣಾಯಾಮ, ಸೂರ್ಯ ನಮಸ್ಕಾರ, ಶವಾಸನ ಸೇರಿದಂತೆ ಹಲವು ಆಸನಗಳನ್ನು ನಿರಾಯಾಸವಾಗಿ ಮಾಡಿದ ಪ್ರಧಾನಿಗಳನ್ನು ಕಂಡು ನೆರೆದಿದ್ದವರು ನಿಬ್ಬೆರಗಾದರು.

ಅವರೊಟ್ಟಿಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಆಯುಷ್ ಸಚಿವ ಸರ್ಬಾನಂದ ಸೋನೋವಾಲ್, ರಾಜಮಾತೆ ಪ್ರಮೋದಾದೇವಿ ಒಡೆಯರ್, ಯುವರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಚಿವರಾದ ಎಸ್.ಟಿ.ಸೋಮಶೇಖರ್, ಡಾ.ಕೆ.ಸುಧಾಕರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ನಿರಂಜನಕುಮಾರ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಸೇರಿದಂತೆ ಹಲವಾರು ಗಣ್ಯರು ಯೋಗ ಮಾಡಿದರು.

ಪ್ರಧಾನಿ ನರೇಂದ್ರ ಮೋದಿಗೆ ಮೈಸೂರು ರಾಜಮನೆತನದ ರಾಜಾತಿಥ್ಯ



ಮೈಸೂರು, ಜೂ.21(ಎಂಟಿವೈ)- ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಂಗಳವಾರ ಅರಮನೆಯಲ್ಲಿ ಮೈಸೂರು ರಾಜ ಪರಿವಾರವನ್ನು ಭೇಟಿ ಮಾಡಿದರು. ಅವರಿಗೆ ಮೈಸೂರು ರಾಜಮನೆತನದ ವತಿಯಿಂದ ರಾಜಾತಿಥ್ಯ ನೀಡಲಾಯಿತು.

ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಂಡ ಬಳಿಕ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಆಯುಷ್ ಇಲಾಖೆ ವತಿಯಿಂದ ಆಯೋಜಿಸಿದ್ದ 'ಯೋಗ ಡಿಜಿಟಲ್' ವಸ್ತುಪ್ರದರ್ಶನವನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ನಂತರ ಮೈಸೂರು ಅರಮನೆ ಆವರಣದಲ್ಲಿರುವ ರಾಜವಂಶಸ್ಥರ ನಿವಾಸಕ್ಕೆ ಭೇಟಿ ನೀಡಿದರು. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಆಹ್ವಾನದ ಮೇರೆಗೆ ಉಪಾಹಾರಕೂಟದಲ್ಲಿ ಅವರು ಭಾಗಿಯಾದರು. ಇವರಿಗೆ ವಿಶೇಷವಾಗಿ 'ಮೈಸೂರು ಪಾಕ್' ಮತ್ತು ದಕ್ಷಿಣ ಭಾರತ ಶೈಲಿಯ ಉಪಾಹಾರವನ್ನು ಬೆಳ್ಳಿ ತಟ್ಟೆಯಲ್ಲಿ ಬಡಿಸಲಾಯಿತು. ಇಡ್ಲಿ, ಸಾಂಬರ್, ಅವಲಕ್ಕಿ ಉಪ್ಪಿಟ್ಟು ಇನ್ನಿತರ ಖಾದ್ಯಗಳನ್ನು ಪ್ರಧಾನಿಗಳು ಸವಿದರು.

ಇವರೊಂದಿಗೆ ರಾಜ್ಯಪಾಲ ಥಾಮರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅವರ ಪತ್ನಿ ತ್ರಿಷಿಕಾ, ಮಗ ಆದ್ಯವೀರ ಹಾಜರಿದ್ದರು. ಇದೇ ಸಂದರ್ಭದಲ್ಲಿ ಪ್ರಮೋದಾದೇವಿ ಒಡೆಯರ್ ಅವರು ಮೈಸೂರು ರಾಜಮನೆತನದ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ರಾಕ್ಷಸ ಸಂಹಾರಕ ಐದು ಶಿರವುಳ್ಳ ಉಗ್ರ ನರಸಿಂಹ ಮೂರ್ತಿಯ ಮೈಸೂರು ಶೈಲಿಯ ಚಿತ್ರಕೃತಿ ನೀಡಿ ಗೌರವಿಸಿದರು. ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ತಮಗೆ ಹಾಕಲು ಬಂದ ಮಲ್ಲಿಗೆ ಹಾರವನ್ನು ಕೈಗೆ ತೆಗೆದುಕೊಂಡು ಅದನ್ನು ಬಾಲಕ ಆದ್ಯವೀರ ಒಡೆಯರ್‌ಗೆ ಹಾಕಿ, ಮುದ್ದಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಯೋಗ



ಮೈಸೂರು, ಜೂ.21- ಅಂತರಾಷ್ಟ್ರೀಯ ಯೋಗ ದಿನದ ಅಂಗವಾಗಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ ನಡೆಯಿತು. ಮುಡಾ ಆಯುಕ್ತ ಎಚ್.ಎಸ್.ದಿನೇಶ್‌ಕುಮಾರ್ ಯೋಗ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಯುವಜನ ಸಬಲೀಕರಣ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಕೆ.ಸುರೇಶ್ ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ಪ್ರದರ್ಶನ ಮಾಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯ. ನಿತ್ಯವೂ ಯೋಗವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಆರೋಗ್ಯ ವೃದ್ಧಿ ಆಗಲಿದೆ ಎಂದರು.

ಯೋಗವನ್ನು ವಿದೇಶಿಗರಿಗೂ ಪರಿಚಯಿಸಿದ ಕೀರ್ತಿ ಮೈಸೂರಿನದ್ದಾಗಿದೆ. ಅಂತಹ ಮೈಸೂರಿನಲ್ಲಿ ಪ್ರಧಾನಿ ಭಾಗವಹಿಸಿರುವುದು ಸಂತಸದ ಸಂಗತಿಯಾಗಿದ್ದು, ಆ ಮೂಲಕ ಮತ್ತೊಮ್ಮೆ ಮೈಸೂರಿನ ಪ್ರಗತಿ ಸಾರಿದಂತಾಗಿದೆ ಎಂದು ಹೇಳಿದರು. ಈ ವೇಳೆ 499 ಮಂದಿ ಕ್ರೀಡಾ ಉತ್ಸುಕರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಮುಕ್ತ ವಿವಿಯಲ್ಲಿ ಯೋಗ ಪ್ರದರ್ಶನ



ಮೈಸೂರು, ಜೂ.21(ಆರ್‌ಕೆಬಿ)- ಅಂತಾರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ ಮಂಗಳವಾರ ವಿವಿಯ ಘಟಿಕೋತ್ಸವ ಭವನದ ಆವರಣದಲ್ಲಿ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ವಿವಿಯ 60ಕ್ಕೂ ಹೆಚ್ಚು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಯೋಗ ಪ್ರದರ್ಶಿಸಿದರು.

ಕಾರ್ಯಕ್ರಮದ ಸಂಚಾಲಕ ಎಸ್.ಶ್ರೀಕಾಂತ್ ಅವರು ಸ್ವಯಂ ಕಷ್ಟಕರ ಆಸನಗಳಾದ ಹನುಮಾಸನ, ಉಪವಿಷ್ಠ ಕೋಣಾಸನ, ಶ್ರೀಕೃಷ್ಣಾಸನ, ಊರ್ಧ್ವ ಕುಕ್ಕುಟಾಸನ, ಏಕಪಾದ ಶೀರ್ಷಾಸನ, ಓಂಕಾರಾಸನ ಸೇರಿದಂತೆ ಬಹಳ ಕಷ್ಟಕರವಾದ ಆಸನಗಳನ್ನು ಪ್ರದರ್ಶಿಸಿದರು. ನಂತರ ಅವರ ಮಾರ್ಗದರ್ಶನದಡಿ ಕುಲಪತಿ ಪ್ರೊ.ವಿದ್ಯಾಶಂಕರ್, ಕುಲಸಚಿವ ಪ್ರೊ.ರಾಜಣ್ಣ ಸೇರಿದಂತೆ ವಿವಿಯ ಬೋಧಕ-ಬೋಧಕೇತರ ಸಿಬ್ಬಂದಿಗೆ ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಇದಕ್ಕೂ ಮುನ್ನ ಕುಲಪತಿ ಪ್ರೊ.ವಿದ್ಯಾಶಂಕರ್ ಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಯೋಗದಿಂದ ವ್ಯಕ್ತಿತ್ವ ವಿಕಸನ, ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ರಕ್ಷಣೆ, ಕೆಲಸದ ಒತ್ತಡ ನಿವಾರಣೆ ಮಾಡಿಕೊಳ್ಳಬಹುದಾಗಿದೆ. ಹಾಗಾಗಿ ತಮ್ಮ ಒತ್ತಡದ ಜೀವನದ ಮಧ್ಯೆ ಪ್ರತಿನಿತ್ಯ ಕನಿಷ್ಠ ಅರ್ಧ ಗಂಟೆಯಾದರೂ ಯೋಗಕ್ಕೆ ಮೀಸಲಿಡಬೇಕು. ಜೀವನದಲ್ಲಿ ಯೋಗವನ್ನು ಒಂದು ಭಾಗವಾಗಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶೈಕ್ಷಣಿಕ ಡೀನ್ ಪ್ರೊ.ಅಶೋಕ್ ಕಾಂಬ್ಳೆ, ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಪ್ರೊ.ಎಸ್.ಲಕ್ಷ್ಮೀ, ಸಹಾಯಕ ಗ್ರಂಥಪಾಲಕಿ ಡಾ.ವಿ.ಶೀಲಾ, ಶ್ರೀ ಮುಖ್ಯಪ್ರಾಣ ಯೋಗ ಸಂಸ್ಥೆಯ ಮಣಿಕಂಠ ಇನ್ನಿತರರು ಉಪಸ್ಥಿತರಿದ್ದರು.

ಮೋದಿ ನೇತೃತ್ವದ ಯೋಗದಲ್ಲಿ ಅವಕಾಶ ಸಿಗದೆ ನಿರಾಶರಾದ ಯೋಗ ಪಟುಗಳು



ಮೈಸೂರಿನ ಅರಮನೆ ಆವರಣದಲ್ಲಿ ನಡೆದ ಯೋಗ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರು, ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಹಲವು ಯೋಗ ಪಟುಗಳು ವಂಚಿತರಾಗಿ ವಾಪಸಾದರು.

ಮೈಸೂರು, ಜೂ.21(ಆರ್‌ಕೆಬಿ)- ಅರಮನೆ ಆವರಣದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆದ ಅಂತಾ ರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮೈಸೂರು ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ್ದ ಹಲವು ಯೋಗ ಪಟುಗಳು ಅವಕಾಶ ವಂಚಿತರಾಗಿ ನಿರಾಶೆಯಿಂದ ವಾಪಸಾದರು.

ಹಾಸನ ಜಿಲ್ಲೆಯ ಹೊಳೆನರಸೀಪುರದ ಹೆಚ್.ಎನ್.ಗಿರಿಧರ್, ಮಂಡ್ಯ ಜಿಲ್ಲೆ ಕಿರುಗಾವಲಿನ ಪುರುಷೋತ್ತಮ್, ಮೈಸೂರಿನ ಕುಂಬಾರಕೊಪ್ಪಲಿನ ಪಿ.ಆರ್.ರಮೇಶ್, ನಾಗರಾಜು, ಕುವೆಂಪುನಗರದ ಸಿ.ಕಮಲೇಶ್, ಮೈಸೂರಿನ ಜೆಎಸ್‌ಎಸ್ ಲೇಔಟ್‌ನ ರಾಜೇಶ್ವರಿ ಸೇರಿದಂತೆ ಇನ್ನಿತರರು ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಾಧ್ಯವಾಗದ ಕಾರಣ ತಾವು ಅರಮನೆ ಆವರಣದಲ್ಲಿನ ಯೋಗ ಪ್ರದರ್ಶನದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲೆಯಿಂದ ಆಗಮಿಸಿದ್ದ ಆರು ಜನರಿದ್ದ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರಿಗೆ ಮೋದಿ ಅವರನ್ನು ಹತ್ತಿರದಿಂದ ಕಾಣಲು ಅರಮನೆ ಬಳಿ ತೆರಳಲು ಅವಕಾಶ ಸಿಗಲಿಲ್ಲ. ಅವರು ಸೋಮವಾರ ಸಂಜೆಯೇ ಮೈಸೂರಿಗೆ ಆಗಮಿಸಿ ರಾಮಾನುಜ ರಸ್ತೆ, ಗಿರಿಯಾಬೋವಿ ಪಾಳ್ಯ ಇನ್ನಿತರೆ ಕಡೆಗಳಲ್ಲಿರುವ ತಮ್ಮ ನೆಂಟರ ಮನೆಯಲ್ಲಿ ವಾಸ್ತವ್ಯ ಇದ್ದು, ಮಂಗಳವಾರ ಬೆಳಗ್ಗೆ 6.30 ಗಂಟೆಗೆ ಅರಮನೆ ಒಳಗೆ ಹೋಗಲು ಭದ್ರತಾ ಸಿಬ್ಬಂದಿ ಬಿಡಲಿಲ್ಲ. ಪಾಸ್ ಇದ್ದವರಿಗೆ ಮಾತ್ರ ಒಳಪ್ರವೇಶ ಎಂದು ಪೊಲೀಸರು ಅವರಿಗೆ ಅವಕಾಶ ನೀಡದ ಕಾರಣ ಅವರೆಲ್ಲರೂ ಸಂಸ್ಕೃತ ಪಾಠಶಾಲೆ ವೃತ್ತದ ಬಳಿ ನಿರಾಶೆಯಿಂದ ಕುಳಿತಿದ್ದ ಬಗ್ಗೆ ಮಂಡ್ಯ ಜಿಲ್ಲೆಯಿಂದ ಆಗಮಿಸಿದ್ದ ಮುರುಗಮ್ಮ ಬೇಸರ ವ್ಯಕ್ತಪಡಿಸಿದರು.

ಕಳೆದ ಮೂರು ಭಾನುವಾರದಿಂದ ಯೋಗ ಪೂರ್ವಾಭ್ಯಾಸದಲ್ಲಿ ಭಾಗವಹಿಸಿದ್ದೆ. ಆದರೆ ಆಯುಷ್‌ನಿಂದ ಮಾಡಲಾದ ಆನ್‌ಲೈನ್ ನೋಂದಣಿಯಲ್ಲಿ ನನ್ನ ಹೆಸರು ನೋಂದಣಿಯಾಗದ ಕಾರಣ ನನಗೆ ಮೋದಿ ನೇತೃತ್ವದ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದ ಬಗ್ಗೆ ಶಾರದಾದೇವಿನಗರದ ರಾಮಚಂದ್ರ 'ಮೈಸೂರು ಮಿತ್ರ'ನೊಂದಿಗೆ ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಬೋಗಾದಿಯ ರೂಪನಗರದ ದೀಪಾ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಯೋಗ ದಿನವನ್ನು ಸಂಭ್ರಮ ಸಡಗರದಿಂದ ಆಚರಿಸಿದರು. ಬೆಳಗ್ಗೆ 8.30ರ ಸುಮಾರಿಗೆ ಆರಂಭವಾದ ಯೋಗ 9.45ರವರೆಗೂ ನಡೆಯಿತು. ಯೋಗದ ಎಲ್ಲಾ ಆಸನಗಳ ರಿಹರ್ಸಲ್ ನಡೆದು ಮಂಗಳವಾರ ಕೊನೆಯ ಪ್ರದರ್ಶನ ನಡೆಯಿತು. ಶಾಲಾ-ಕಾಲೇಜಿನಲ್ಲಿ ನಿತ್ಯವೂ ಯೋಗವನ್ನು ಮಾಡುವ ಬಗೆಗೆ ಮುಖ್ಯೋಪಾಧ್ಯಾಯರು ತಿಳಿ ಹೇಳಿದರು.

ಸಂಸದ ಪ್ರತಾಪ್ ಸಿಂಹರಿಗೆ ಹುಟ್ಟುಹಬ್ಬದ ಸಂಭ್ರಮ



ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ವಿಜಯನಗರದ ನಿವಾಸದಲ್ಲಿ ಬಿಜೆಪಿ ಮುಖಂಡರಾದ ಕೇಬಲ್ ಮಹೇಶ್, ಜೋಗಿ ಮಂಜು, ಜಯರಾಮ್ ಇನ್ನಿತರರು ಹೂಗುಚ್ಛ ನೀಡಿ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.



ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದರು.

ನಟ ದಿಗಂತ್ ಬೆನ್ನು ಮೂಳೆಗೆ ಪೆಟ್ಟು



ಪಣಜಿ: ಗೋವಾದ ಸಮುದ್ರ ತಟದಲ್ಲಿ ಸೋಮರ್ ಸಾಲ್ಟ್ ಹೊಡೆಯುವ ವೇಳೆ ನಟ ದಿಗಂತ್ ಕುತ್ತಿಗೆಗೆ ತೀವ್ರ ಪೆಟ್ಟು ಬಿದ್ದಿದ್ದು ಅವರನ್ನು ಬೆಂಗಳೂರಿಗೆ ಏರ್ ಲಿಫ್ಟ್ ಮಾಡಿ ಮಣಿಪಾಲ್ ಆಸ್ಪತ್ರೆಯಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಆಸ್ಪತ್ರೆಯ ಮೂಲಗಳ ಪ್ರಕಾರ, ಅವರು ತಮ್ಮ ಪತ್ನಿ ಐಂದ್ರಿತಾ ರೈ ಅವರೊಂದಿಗೆ ರಜೆಗಾಗಿ ಗೋವಾಕ್ಕೆ ಬಂದಿದ್ದರು. ಫಿಟ್‌ನೆಸ್ ಫ್ರೀಕ್ ಆಗಿರುವ ಮತ್ತು ಸಾಹಸ ಕ್ರೀಡೆಗಳನ್ನು ಇಷ್ಟಪಡುವ ದಿಗಂತ್ ಸಮ್ಮರ್‌ಸಾಲ್ಟ್ ಮಾಡುವಾಗ ಈ ಘಟನೆ ನಡೆದಿದೆ ಎಂದು ಹೇಳಲಾಗುತ್ತಿದೆ. ಈಗ ದಿಗಂತ್ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿದ್ದು, ಶೀಘ್ರವೇ ಚೇತರಿಸಿಕೊಳ್ಳುವ ವಿಶ್ವಾಸವನ್ನು ವೈದ್ಯರು ವ್ಯಕ್ತಪಡಿಸಿದ್ದಾರೆ.

ಮಾನ್ಯಗೆ ಅತ್ಯುನ್ನತ ಶ್ರೇಣಿ

ಮೈಸೂರು, ಜೂ.18- ಮೈಸೂರಿನ ಮಾನಸ ಸರೋವರ ಪುಷ್ಕರಿಣಿ ವಿದ್ಯಾಶ್ರಮ ವಿದ್ಯಾರ್ಥಿನಿ ಎಂ.ಮಾನ್ಯ ಪಿಯುಸಿ ವಿಜ್ಞಾನ ವಿಭಾಗದ ಪರೀಕ್ಷೆಯಲ್ಲಿ 600ಕ್ಕೆ



574 ಅಂಕ ಗಳಿಸಿ ಉತ್ತೀರ್ಣಳಾಗಿದ್ದಾಳೆ.

ಕನ್ನಡದಲ್ಲಿ 97, ಇಂಗ್ಲಿಷ್ 94, ಭೌತಶಾಸ್ತ್ರ 96, ರಸಾಯನ ಶಾಸ್ತ್ರ 92, ಗಣಿತ 95, ಜೀವಶಾಸ್ತ್ರ ವಿಷಯದಲ್ಲಿ 100 ಅಂಕ ಗಳಿಸಿದ್ದಾಳೆ. ಈಕೆ ಮೈಸೂರಿನ ವಿಜಯನಗರ 3ನೇ ಹಂತ 'ಜಿ' ಬ್ಲಾಕ್‌ನ ಬಿ.ಆರ್.ಮಹದೇವ-ಬಿ. ಭವ್ಯ ದಂಪತಿ ಪುತ್ರಿ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಯೋಗದಿಂದ ಶಾಂತಿ, ನೆಮ್ಮದಿ, ಉತ್ತಮ ಆರೋಗ್ಯ, ಸಮಾಜದ ಅಭಿವೃದ್ಧಿ: ಸ್ವಾಮೀಜಿ



ಮೈಸೂರು, ಜೂ.21(ಆರ್‌ಕೆಬಿ)- ಎಲ್ಲರೂ ಪ್ರತಿನಿತ್ಯ ಯೋಗಾಭ್ಯಾಸ ಮಾಡುವುದರಿಂದ ಜೀವನದಲ್ಲಿ ಶಾಂತಿ, ನೆಮ್ಮದಿ ಸಿಗುವುದರೊಂದಿಗೆ ಆರೋಗ್ಯವೂ ಉತ್ತಮವಾಗಿ, ಸಮಾಜವೂ ಅಭಿವೃದ್ಧಿ ಹೊಂದುತ್ತದೆ ಎಂದು ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಮಂಗಳವಾರ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಡೆದ ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿನಿತ್ಯ ಪ್ರಾಣಾಯಾಮ ಮಾಡುವುದರಿಂದ ಮನಸ್ಸು ಶುದ್ಧಿಯಾಗುತ್ತದೆ. ನಿಮಗೇ ಅರಿವಿಲ್ಲದ ರೀತಿಯಲ್ಲಿ ಪರಿವರ್ತನೆಯಾಗುತ್ತದೆ ಎಂದರು.

ಎಲ್ಲರ ಜೀವನದಲ್ಲಿ ಆಹಾರ, ವಿಹಾರ, ವಿಚಾರಗಳು ಉತ್ತಮವಾಗಿರಬೇಕು. ಉತ್ತಮ ಆಹಾರ, ಪ್ರತಿದಿನ ನಡಿಗೆ ಹಾಗೂ ಒಳ್ಳೆಯ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು. ಮನಸ್ಸು ಮರ್ಕಟವಿದ್ದಂತೆ, ಅದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಮನಸ್ಸನ್ನು ಕೈಗೆ ಕೊಟ್ಟು ಏನೇನೋ ಮಾಡುವ ಬದಲು ಮನಃಶುದ್ಧಿ ಅಗತ್ಯ. ಮನಸ್ಸನ್ನು ನಿಯಂತ್ರಿಸಲು ಸತತ ಯೋಗಾಭ್ಯಾಸದಿಂದ ಮಾತ್ರ ಸಾಧ್ಯ ಎಂದರು.

ಇದೇ ವೇಳೆ ಅವರು ಯೋಗಾಭ್ಯಾಸದಿಂದ ಆಗುವ ಪ್ರಯೋಜನಗಳ ಬಗ್ಗೆ ತಿಳಿಸಿ, ನಾಡಿಶುದ್ಧಿ, ಪ್ರಾಣಾಯಾಮ, ಮುದ್ರೆ ಗಳು ಹಾಗೂ ಧ್ಯಾನ ಬೋಧಿಸಿದರು. ಕಾರ್ಯಕ್ರಮದಲ್ಲಿ 3 ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಿದ್ದರು. ಯೋಗ ಶಿಕ್ಷಕರು ಯೋಗಾಭ್ಯಾಸದ ಹಲವು ಪಟ್ಟುಗಳನ್ನು ಹೇಳಿ ಕೊಟ್ಟರು.

ನಿಧನ

ಹೆಚ್.ಹನುಮಂತಯ್ಯ

ಮೈಸೂರು: ನಿವೃತ್ತ ತೋಟಗಾರಿಕಾ ಸಹಾಯಕ ನಿರ್ದೇಶಕರೂ ಆದ ವಿನಾಯಕನಗರದ (ಪಡುವಾರಹಳ್ಳಿ) ನಿವಾಸಿ ಹೆಚ್.ಹನುಮಂತಯ್ಯ ಮಂಗಳವಾರ ಮಧ್ಯಾಹ್ನ



ತಮ್ಮ ನಿವಾಸದಲ್ಲಿ ನಿಧನರಾದರು. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಇವರು ಪತ್ನಿ ರುಕ್ಮಿಣಿ, ಪುತ್ರ ಲೋಕೇಶ್, ಪುತ್ರಿಯರಾದ ಶೋಭಾ, ಶೀಲಾ, ತೇಜವತಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಬುಧವಾರ 22 ಜೂನ್ 2022

ಮೈಸೂರು ಗ್ರಾಮಾಂತರದ ವಿವಿಧೆಡೆ ಯೋಗ ವೈಭೋಗ

8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಮಂಗಳವಾರ ಮೈಸೂರು ಜಿಲ್ಲೆಯ ತಿ.ನರಸೀಪುರ, ನಂಜನಗೂಡು, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ.ಕೋಟೆ, ಸರಗೂರು ಸೇರಿದಂತೆ ವಿವಿಧೆಡೆ ಸಾಮೂಹಿಕ ಯೋಗ ಪ್ರದರ್ಶನ ಮಾಡಲಾಯಿತು.

ನಂ.ಗೂಡು: ಗಮನ ಸೆಳೆದ ಸಾಮೂಹಿಕ ಯೋಗ



ನಂಜನಗೂಡು, ಜೂ.21(ಸುದರ್ಶನ್)– ನಗರದ ತಾಲೂಕು ಕ್ರೀಡಾಂಗಣದಲ್ಲಿ ಮಂಗಳವಾರ ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ನಡೆದ ಸಾಮೂಹಿಕ ಯೋಗ ಪ್ರದರ್ಶನ ಗಮನ ಸೆಳೆಯಿತು.


ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ. ಉಡಿಗಾಲ ನೇತೃತ್ವದಲ್ಲಿ ನಡೆದ ಯೋಗಾಭ್ಯಾಸಕ್ಕೆ ವಿಶ್ವ ಯೋಗ ದಿನಾಚರಣೆ ಆಚರಣಾ ಸಮಿತಿ ನಂಜನಗೂಡು ಘಟಕದ ಕಾರ್ಯಾಧ್ಯಕ್ಷ ಡಾ.ಶ್ರೀಕಾಂತ್ ಚಾಲನೆ ನೀಡಿದರು. ಆಯುಷ್ ತಾಲೂಕು ನೋಡಲ್ ಅಧಿಕಾರಿ ಡಾ.ಅಶೋಕ್ ಪ್ರತಿಜ್ಞಾ ವಿಧಿ ಬೋಧಿಸಿದರು. ಸಮಿತಿಯ ಯೋಗ ಬಂಧುಗಳು, ಕಸ್ತೂರ ಬಾ ಬಾಲಕಿಯರ ವಸತಿ ಶಾಲೆಯ ನೂರಾರು ವಿದ್ಯಾರ್ಥಿಗಳು, ಯುವ ಬ್ರಿಗೇಡ್ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

ಇದಕ್ಕೂ ಮೊದಲು ನಡೆದ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಮಾತನಾಡಿ, ಮನುಷ್ಯನ ಅಭಿವೃದ್ಧಿಗೆ ಉತ್ಕೃಷ್ಟವಾದ ಭಾರತೀಯ ಸನಾತನ ಸಂಸ್ಕೃತಿಯನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳುವ ಮೂಲಕ ಹೆಮ್ಮೆಯ ಭಾರತೀಯರಾಗಬೇಕು ಎಂದರು.

ವಿಶ್ವ ಯೋಗ ಆಚರಣಾ ಸಮಿತಿ ಕಾರ್ಯಾಧ್ಯಕ್ಷ ಡಾ.ಎಸ್.ಶ್ರೀಕಾಂತ್ ಮಾತನಾಡಿ, ಮೈಸೂರಿನ ಅರಮನೆಯಲ್ಲಿ ಪ್ರಧಾನಿ ಮೋದಿ ಸಮ್ಮುಖದಲ್ಲಿ ನಡೆದ ವಿಶ್ವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದವರಿಗೆ ನಂಜನಗೂಡಿನಲ್ಲೇ ಯೋಗಾಭ್ಯಾಸ ಮಾಡಿಸಲು ವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜನೆ ಮಾಡಬೇಕೆಂಬ ಶಾಸಕ ಬಿ.ಹರ್ಷವರ್ಧನ್ ಆಶಯದ ಮೇರೆಗೆ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಆಯುಷ್ ತಾಲೂಕು ನೋಡಲ್ ಅಧಿಕಾರಿ ಡಾ.ಅಶೋಕ್ ಮಾತನಾಡಿ, 'ಮಾನವೀಯತೆಗಾಗಿ ಯೋಗ' ಘೋಷಣೆಯೊಂದಿಗೆ ಈ ಬಾರಿ ಯೋಗ ದಿನ ಆಚರಿಸಲಾಗುತ್ತಿದೆ. ಮಾನವೀಯತೆಯ ಬಗ್ಗೆ ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ವೇದ, ಉಪನಿಷತ್ತುಗಳಲ್ಲಿ ಉಲ್ಲೇಖವಿದೆ. ಕಳೆದ 7 ವರ್ಷಗಳ ಹಿಂದೆ ಯೋಗವನ್ನು ಜಗತ್ತೇ ಆಚರಿಸುವಂತೆ ವಿಶ್ವಕ್ಕೆ ಪರಿಚಯಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಾರಿ ಮೈಸೂರಿಗೆ ಆಗಮಿಸಿ ವಿಶ್ವ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ ಎನ್.ಆರ್. ಗಣೇಶ್‌ಮೂರ್ತಿ ಮಾತನಾಡಿದರು. ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ವಿ.ರೇವಣ್ಣ ಉಪಸ್ಥಿತರಿದ್ದರು.

ಹೊಮ್ಮರಗಳ್ಳಿ: ಯೋಗ ದಿನ ಆಚರಣೆ



ಹಂಪಾಪುರ, ಜೂ. 21– ಹೆಚ್.ಡಿ.ಕೋಟೆ ತಾಲೂಕು ಹೊಮ್ಮರಗಳ್ಳಿಯ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲೆ ವಿಭಾಗದಲ್ಲಿ ಯೋಗ ದಿನ ಆಚರಿಸಲಾಯಿತು.

ದೈಹಿಕ ಶಿಕ್ಷಣ ಶಿಕ್ಷಕಿ ಎಸ್.ಮಹಾದೇವಿ ಮಕ್ಕಳಿಗೆ ಯೋಗಾದ ವಿವಿಧ ಭಂಗಿಯ ಆಸನಗಳನ್ನು ಕಲಿಸಿದರು. ಮುಖ್ಯಶಿಕ್ಷಕ ಬಿ.ಎನ್.ನಾಗಾರ್ಜುನ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಪಿ.ಟಿ.ಚಿತ್ರಾವತಿ, ಎಂ.ವೇದಾವತಿ ಅವರು ಯೋಗದ ಉದ್ದೇಶ, ಮಹತ್ವ, ಪ್ರಯೋಜನಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಉಪಪ್ರಾಂಶುಪಾಲರಾದ ಎನ್.ಗೀತಾ, ಎಸ್‌ಡಿಎಂಸಿ ಅಧ್ಯಕ್ಷ ಜಯರಾಮ್, ಸದಸ್ಯರಾದ ಗೋವಿಂದರಾಜು, ರವಿ, ಶಿಕ್ಷಕರಾದ ಕೆ.ಸಿ.ತಾರಾ, ಎಸ್.ಶಶಿಕಲಾ, ಮಂಗಳಮ್ಮ, ಸಿ.ವಿ.ಶಶಿಕಲಾ, ಮತೀನಾ ಜಹಾಜ್, ಸಾವಿತ್ರಿಬಾಯಿ ಆಲಮೇಲಾ, ಪೋಷಕರು ಭಾಗವಹಿಸಿದ್ದರು. ಹಂಪಾಪುರ ಕ್ಲಸ್ಟರ್‌ನ ಹಂಪಾಪುರ, ಕಂಚಮಳ್ಳಿ, ಪುರ, ಶಂಕಳ್ಳಿ, ಕಾಳೇಹುಂಡಿ, ಹುಚ್ಚಗಣಿ, ಹರದನಹಳ್ಳಿ ಪ್ರೌಢಶಾಲೆಗಳಲ್ಲಿಯೂ ಯೋಗ ದಿನವನ್ನು ಆಚರಿಸಲಾಯಿತು.



ತಿ.ನರಸೀಪುರ ತಾಲೂಕಿನ ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಮಂಗಳವಾರ ವಿದ್ಯಾರ್ಥಿಗಳು, ಗ್ರಾಮಸ್ಥರು ಯೋಗ ದಿನದ ಅಂಗವಾಗಿ ಯೋಗಾಭ್ಯಾಸ ಮಾಡಿದರು.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡಿದರು.



ಆರ್‌ವೇರಿ ಆಂಟ್ ಆಫ್ ಲಿವಿಂಗ್ ಇಂಟರ್‌ನ್ಯಾಷನಲ್ ಫೌಂಡೇಶನ್ ವತಿಯಿಂದ ಹೆಚ್.ಡಿ.ಕೋಟೆಯ ಆದಿಚುಂಚನಗಿರಿ ಕಾಲೇಜು ಸೇರಿದಂತೆ ಪಟ್ಟಣದ ವಿವಿಧ ಶಾಲಾ–ಕಾಲೇಜುಗಳಲ್ಲಿ ಯೋಗ ದಿನ ಆಚರಿಸಲಾಯಿತು.

ಉನ್ನತೀಕರಿಸಲಾಗಿರುವ ಪಿರಿಯಾಪಟ್ಟಣದ ಐಟಿಐ ಕಾಲೇಜು ಲೋಕಾರ್ಪಣೆ

ಅತ್ಯಾಧುನಿಕ ತಂತ್ರಜ್ಞಾನದ ಸದ್ಬಳಕೆಗೆ ಸಲಹೆ



ಪಿರಿಯಾಪಟ್ಟಣ, ಜೂ.21(ವೀರೇಶ್)– ಪ್ರಸ್ತುತ ದಿನಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಶರವೇಗದಲ್ಲಿ ಮುನ್ನುಗ್ಗುತ್ತಿದ್ದು, ಯುವ ಪೀಳಿಗೆ ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಕೆ.ಮಹದೇವ್ ಸಲಹೆ ನೀಡಿದರು.

ಟಾಟಾ ಕಂಪನಿಯ ಸಹಭಾಗಿತ್ವದಲ್ಲಿ 31ಕೋಟಿ ರೂ. ವೆಚ್ಚದಡಿ ಉನ್ನತೀಕರಿಸಲಾಗಿರುವ ಪಿರಿಯಾಪಟ್ಟಣ ಸರ್ಕಾರಿ ಐಟಿಐ ಕಾಲೇಜು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ಒಟ್ಟು 150 ಐಟಿಐ ಕಾಲೇಜುಗಳನ್ನು ಉನ್ನತೀಕರಿಸಿ ಲೋಕಾರ್ಪಣೆ ಮಾಡಲಾಗುತ್ತಿದೆ. ಈ ಪೈಕಿ ಪಟ್ಟಣದ ಐಟಿಐ ಮತ್ತು ಬೆಟ್ಟದಪುರ ಐಟಿಐ ಕಾಲೇಜುಗಳು ಸೇರಿವೆ ಎಂದು ಮಾಹಿತಿ ನೀಡಿದರು.

ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದ್ದು, ಇಂತಹ ವಿಷಮ ಪರಿಸ್ಥಿತಿಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ತರಬೇತಿ ಕೇಂದ್ರಗಳ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ ಶ್ಲಾಘನೀಯ ಎಂದರು.

ಯುವ ಮುಖಂಡ ಗಗನ್ ಮಾತನಾಡಿ, ಶಾಸಕ ಮಹದೇವ್ ಅವರ ಹೋರಾಟದ ಪ್ರತಿಫಲದಿಂದ 2 ಉನ್ನತೀಕರಿಸಿದ ತರಬೇತಿ ಸಂಸ್ಥೆಗಳನ್ನು ಕಾಣಲು ಸಾಧ್ಯವಾಯಿತು. ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು. ಉನ್ನತ ಮಟ್ಟದ ಹುದ್ದೆ ಪಡೆದು ಸ್ವಾವಲಂಬಿ ಜೀವನ ನಡೆಸಬೇಕು ಎಂದರು.

ಸಂಸ್ಥೆಯ ಪ್ರಾಂಶುಪಾಲ ಶ್ರೀಧರ್ ಮಾತನಾಡಿ, ಪಟ್ಟಣದಲ್ಲಿ 1999ರಲ್ಲಿ ಪ್ರಾರಂಭವಾದ ಕಾಲೇಜು, ವಿದ್ಯಾರ್ಥಿಗಳಿಗೆ ಕೇವಲ ವೆಲ್ಡಿಂಗ್, ಫಿಟ್ಟರ್, ಟರ್ನರ್, ಪ್ಲಂಬಿಂಗ್ ಸೇರಿದಂತೆ ಕೆಲವೇ ತರಬೇತಿ ನೀಡಲಾಗುತಿತ್ತು. ಪ್ರಸ್ತುತ ದೇಶದ ದೊಡ್ಡ ಉದ್ಯಮವಾದ ಟಾಟಾ ಟೆಕ್ನಾಲಜಿಸ್ ಸಹಭಾಗಿತ್ವದಲ್ಲಿ ಮೋಟಾರ್ ಇಂಜಿನಿಯರಿಂಗ್, ಇಂಡಸ್ಟ್ರಿಯಲ್ ರೋಬಾಟಿಕ್, ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್, ಸಿಎನ್‌ಸಿ ಮೆಕಾನಿಕ್ ಸೇರಿದಂತೆ ಅನೇಕ ಕೋರ್ಸ್‌ಗಳನ್ನು ನೀಡಲಾಗುತ್ತಿದ್ದು, ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಉನ್ನತೀಕರಣಕ್ಕಾಗಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಪುರಸಭಾ ಅಧ್ಯಕ್ಷ ಮಹೇಶ್, ಸದಸ್ಯರಾದ ಪಿ.ಸಿ.ಕೃಷ್ಣ ಪ್ರಕಾಶ್ ಸಿಂಗ್, ಟಿ.ಭಾರತಿ, ರಾಜು, ಗೋಪಾಲ್, ಉಮೇಶ್ ಇದ್ದರು.

ಮುಳ್ಳೂರು ಸರ್ಕಾರಿ ಶಾಲೆಯಲ್ಲಿ ಯೋಗ ದಿನಾಚರಣೆ



ಸರಗೂರು, ಜೂ.21(ನಾಗೇಶ್)– ತಾಲೂಕಿನ ಮುಳ್ಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನದ ಅಂಗವಾಗಿ ಯೋಗಾಭ್ಯಾಸ ನಡೆಸಲಾಯಿತು. ಈ ವೇಳೆ ಮುಖ್ಯಶಿಕ್ಷಕಿ ಹೆಚ್.ಬಿ.ಜ್ಯೋತಿ, ಶಿಕ್ಷಕರಾದ ಶಹೀಲಾ, ಹೆಚ್.ಕೆ.ಗೀತಾ, ಹೆಚ್.ಎಂ.ಗೀತಾ, ಕೆ.ಎನ್.ನೇತ್ರಾ, ಶ್ರೀಕಂಠ, ಅಕ್ಕಮಹದೇವಮ್ಮ, ಸಣ್ಣಮ್ಮ ಹಾಜರಿದ್ದರು.

ಭೋಗೇಶ್ವರ ಅಮರ ಚಿರಸ್ಮರಣೆ, ಅನ್ನ ಸಂತರ್ಪಣೆ ಕಾರ್ಯಕ್ರಮ

ಹೆಚ್.ಡಿ.ಕೋಟೆ, ಜೂ.21(ಮಂಜು)– ರೋಟರಿ ಕ್ಲಬ್ ವತಿಯಿಂದ ಭೋಗೇಶ್ವರ ಅಮರ ಚಿರಸ್ಮರಣೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಪಟ್ಟಣದ ಹಳೆ ಆಸ್ಪತ್ರೆ ಆವರಣದಲ್ಲಿ ನಡೆಯಿತು.



ಕಾರ್ಯಕ್ರಮದಲ್ಲಿ ಗುಂಡ್ರೆ ಆರ್‌ಎಫ್‌ಓ ಅಮೃತೇಶ್, ಮೊಳೆಯೂರು ಆರ್‌ಎಫ್‌ಓ ಪುಟ್ಟರಾಜು, ರೋಟರಿ ಕ್ಲಬ್ ಅಧ್ಯಕ್ಷ ಮಹೇಶ್, ಕಾರ್ಯದರ್ಶಿ ಗಣೇಶ್ ಲಾಡ್, ಸದಸ್ಯರಾದ ಜಿ.ನಾರಾಯಣಲಾಲ್, ರವಿ, ನಿರಂಜನ್, ಕುಮಾರ್, ಬಸವರಾಜು, ಸತೀಶ್ ಸುರಬಿ, ದೀಪಕ್ ಆರ್ಮುಗಂ, ಧರ್ಮೇಶ್, ವರ್ತಕ ಸಂಘದ ಅಧ್ಯಕ್ಷ ವಿನಯ್ ಭಜರಂಗಿ ಹಾಜರಿದ್ದರು.

ತಲಕಾಡಲ್ಲಿ ವಿವಾಹಿತ ಸ್ನೇಹಿತರ ನಿಗೂಢ ಸಾವು!

ತಿ.ನರಸೀಪುರ, ಜೂ.21(ಎಸ್‌ಕೆ)– ವಿವಾಹಿತ ಸ್ನೇಹಿತರಿಬ್ಬರು ನಿಗೂಢವಾಗಿ ಸಾವಿಗೀಡಾಗಿರುವ ಘಟನೆ ತಾಲೂಕಿನ ತಲಕಾಡು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಮೈಸೂರು ತಾಲೂಕಿನ ಕೆಬ್ಬೇಹುಂಡಿ ಗ್ರಾಮದ ರವಿಶಂಕರ್ ಅವರ ಪತ್ನಿ ಸುಮಿತ್ರಾ ಹಾಗೂ ಅದೇ ಗ್ರಾಮದ ಸಿದ್ದರಾಜು(36) ಸಾವನ್ನಪ್ಪಿದವರು.

ಬೆಳಗ್ಗೆ ಅರಣ್ಯ ಇಲಾಖೆ ಸಿಬ್ಬಂದಿ ತಲಕಾಡಿನ ಹೊರವಲಯದಲ್ಲಿ ಗಸ್ತು ತಿರುಗುತ್ತಿದ್ದಾಗ ಮರವೊಂದರಲ್ಲಿ ಸಿದ್ದರಾಜು ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರೇ, ಸುಮಿತ್ರಾ ದೇಹ ಸಮೀಪದಲ್ಲೇ ಮರಳು ಗುಡ್ಡೆಯಲ್ಲಿ ಮುಚ್ಚಿದ ರೀತಿ ಕಂಡು ಬಂದಿದೆ.

ಕೂಡಲೇ ವಿಚಾರವನ್ನು ಅರಣ್ಯ ಸಿಬ್ಬಂದಿ ತಲಕಾಡಿನ ಪೊಲೀಸರಿಗೆ ತಿಳಿಸಿದ್ದಾರೆ. ಸ್ಥಳಕ್ಕೆ ಸಿಪಿಐ ಕೃಷ್ಣಪ್ಪ ಹಾಗೂ ಸಿಬ್ಬಂದಿ ಭೇಟಿ ನೀಡಿ ಎರಡು ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಕರಣ ಸಂಬಂಧ ನಿಂಗರಾಜು ಎಂಬಾತ ಪೊಲೀಸರ ಬಳಿ ಬಂದು, ಮೃತ ಸಿದ್ದರಾಜು ನನ್ನ ಸ್ನೇಹಿತ, ಈತ ಹಾಗೂ ಸುಮಿತ್ರಾ ಸೋಮವಾರ ತಲಕಾಡಿಗೆ ಬಂದಿದ್ದ ವೇಳೆ ಸಿದ್ದರಾಜುವಿಗೆ ಕುಡಿಯಲು ನೀರು ತೆಗೆದುಕೊಂಡು ಬಾ ಎಂದು ಹೇಳಿ ಕಳುಹಿಸಿ, ಆತ ಬರುವಷ್ಟರಲ್ಲಿ ಸುಮಿತ್ರಾ ಮರವೊಂದಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳಂತೆ ಇದರಿಂದ ಬೇಸತ್ತು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಆತ ನಡೆದ ಘಟನೆಯನ್ನು ನನಗೆ ವಾಟ್ಸಾಪ್‌ನಲ್ಲಿ ವಾಯ್ಸ್ ಮೆಸೇಜ್ ಮಾಡಿದ್ದಾನೆ ಎಂದು ಹೇಳಿಕೆ ನೀಡಿರುವುದಾಗಿ ಪೊಲೀಸ್ ಮೂಲದಿಂದ ತಿಳಿದು ಬಂದಿದೆ ಇವರಿಬ್ಬರ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಹೆಚ್ಚಿನ ತನಿಖೆ ನಂತರ ಪ್ರಕರಣದ ಸತ್ಯಾಂಶ ತಿಳಿಯಲಿದೆ ಎಂದು ಪಿಎಸ್‌ಐ ಸಿದ್ದಯ್ಯ ತಿಳಿಸಿದ್ದಾರೆ.

ಹುಣಸೂರಲ್ಲಿ ಬಿಎಸ್‌ಎನ್‌ಎಲ್ ಇಂಟರ್‌ನೆಟ್ ಸಮಸ್ಯೆ: ಗ್ರಾಹಕರ ಪರದಾಟ



ಹುಣಸೂರು, ಜೂ.21(ಕೆಕೆ)– ತಾಲೂಕಿನಲ್ಲಿ ಕೆಲವೆಡೆ ಕಳೆದ ಒಂದು ವಾರದಿಂದ ಬಿಎಸ್‌ಎನ್‌ಎಲ್ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸಂಪರ್ಕದ ಸಮಸ್ಯೆ ಗ್ರಾಹಕರನ್ನು ಕಾಡುತ್ತಿದೆ. ಅಂತರ್ಜಾಲ ತಾಣ ನಂಬಿಕೊಂಡ ಸಾವಿರಾರು ಬಳಕೆದಾರರು ಪರಿತಪಿಸುವಂತಾಗಿದೆ ಬಿಎಸ್‌ಎನ್‌ಎಲ್ ಅನ್ನು ಖಾಸಗಿಯವರಿಗೆ ವಹಿಸಿದಾಗಿನಿಂದ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೌಲಭ್ಯ ಸಿಗದೇ ಗ್ರಾಹಕರು ಸಮಸ್ಯೆಗೆ ಒಳಗಾಗಿದ್ದು, ಸಮರ್ಪಕ ಸೇವೆ ನೀಡದಿದ್ದರೂ, ಬಿಎಸ್‌ಎನ್‌ಎಲ್ ಅಧಿಕಾರಿಗಳು ಮಾಸಿಕ ಬಿಲ್ ವಸೂಲಿಗೆ ಮುಂದಾಗಿದ್ದಾರೆ ಎಂದು ಗ್ರಾಹಕರು ಆರೋಪಿಸಿದ್ದಾರೆ.

ಸಮಸ್ಯೆ ಬಗ್ಗೆ ಗ್ರಾಹಕರು ಬಿಎಸ್‌ಎನ್‌ಎಲ್ ಇಂಜಿನಿಯರ್‌ಗಳಿಗೆ ದೂರು ನೀಡಿದರೆ, ಮೈಸೂರಿನ ಸರ್ವೀಸ್ ಆಪರೇಟಿಂಗ್ ಸೆಂಟರ್‌ನಲ್ಲಿ ಸರ್ವರ್ ಸಮಸ್ಯೆಯಿದೆ. ನಾವು ಏನೂ ಮಾಡಲು ಸಾಧ್ಯವಿಲ್ಲ. ಅಥವಾ ನಿಮ್ಮ ಮೊಬೈಲ್‌ನಲ್ಲೇ ಸಮಸ್ಯೆ ಇದೆ ಸರಿಪಡಿಸಿಕೊಳ್ಳಿ ಎಂದು ಉಡಾಫೆಯ ಉತ್ತರ ನೀಡುತ್ತಾರೆ. ಈ ಸಮಸ್ಯೆಯಿಂದ ಕಳೆದ ಒಂದು ವಾರದಿಂದ ಗ್ರಾಹಕರಿಗೆ ಸಾಕಷ್ಟು ತೊಂದರೆಯಾಗಿದ್ದು, ಅವರ ವ್ಯವಹಾರಗಳಲ್ಲೂ ನಷ್ಟ ಸಂಭವಿಸಿದೆ. ಇದಕ್ಕೆ ಯಾರೂ ಹೊಣೆ ಎಂಬುದು ಗ್ರಾಹಕರ ಪ್ರಶ್ನೆ. ಅದರಲ್ಲೂ ಬಿಎಸ್‌ಎನ್‌ಎಲ್ ಬ್ರಾಡ್ ಬ್ಯಾಂಡ್ ಇಂಟರ್‌ನೆಟ್ ಸೇವೆ ಪಡೆದಿರುವ ಬ್ಯಾಂಕ್‌ಗಳು, ಆರ್‌ಟಿಓ ಕಚೇರಿ, ಕೆಹೆಚ್‌ಬಿ ಕಾಲೋನಿಗಳ ವ್ಯಾಪ್ತಿಯಲ್ಲಿ ಕಳೆದ ಒಂದು ವಾರದಿಂದ ಇಂಟರ್‌ನೆಟ್ ಇಲ್ಲದೆ ವಾಣಿಜ್ಯ ವ್ಯವಹಾರಗಳಿಗೆ ತೊಡಕುಂಟಾಗಿದೆ. ಇದೇ ರೀತಿ ಮುಂದುವರೆದರೆ ಬಿಎಸ್‌ಎನ್‌ಎಲ್ ತೊರೆದು ಬೇರೊಂದು ನೆಟ್‌ವರ್ಕ್ ಆಶ್ರಯಿಸುವ ಅನಿವಾರ್ಯತೆ ಇದೆ ಎಂದು ಗ್ರಾಹಕರು ತಿಳಿಸಿದ್ದಾರೆ.


ತಿ.ನರಸೀಪುರ: ವಿವಿಧ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅಶ್ವಿನ್‌ಕುಮಾರ್ ಚಾಲನೆ

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ

ತಿ.ನರಸೀಪುರ, ಜೂ.21(ಎಸ್‌ಕೆ)– ತಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಳ್ಳಿಗಳಿಗೆ ಸುಗಮ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ವಿವಿಧ ಮೂಲ ಸೌಕರ್ಯಗಳನ್ನು ನೀಡುವುದರ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುತ್ತದೆ ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ಭರವಸೆ ನೀಡಿದರು.

ಲೋಕೋಪಯೋಗಿ, ಪಂಚಾಯತ್‌ರಾಜ್, ನಿರ್ಮಿತಿ ಕೇಂದ್ರ ಹಾಗೂ ನೀರಾವರಿ ಇಲಾಖೆಯಿಂದ ತಾಲೂಕಿನ ಹ್ಯಾಕನೂರು, ಕೇತಹಳ್ಳಿ, ಬನ್ನಹಳ್ಳಿ, ಮಾವಿನಹಳ್ಳಿ, ತಲಕಾಡು, ಪರಿಣಾಮಿಪುರ, ಕಾಳಬಸವನ ಹುಂಡಿ, ಕೂರಬಾಳನಹುಂಡಿ, ಕೊಳತ್ತೂರು, ಎಸ್.ದೊಡ್ಡಪುರ, ಚಿಕ್ಕಕಲ್ಲುಣಿ, ದೊಡ್ಡೇಬಾಗಿಲು ಹಾಗೂ ಮುತ್ತಲವಾಡಿ ಗ್ರಾಮಗಳಲ್ಲಿ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ವಿವಿಧ ಯೋಜನೆ ಮೂಲಕ ಸಾಕಷ್ಟು ಅನುದಾನ ಕಲ್ಪಿಸುತ್ತಿದ್ದು, ಪ್ರತಿಯೊಂದು ಹಳ್ಳಿಯಲ್ಲಿ ಸಿಸಿ ರಸ್ತೆ, ಶುದ್ಧ ಕುಡಿಯುವ ನೀರು, ಆಶ್ರಯ ಮನೆ, ಶೌಚಾಲಯ, ಚರಂಡಿ ವ್ಯವಸ್ಥೆ, ವಿದ್ಯುತ್ ಸಂಪರ್ಕ, ನರೇಗಾ ಯೋಜನೆಯಡಿ ಉದ್ಯೋಗ ಸೇರಿದಂತೆ ಮೂಲ ಸೌಲಭ್ಯ ಕಲ್ಪಿಸಿ, ಜನರ ಆರ್ಥಿಕ ಮಟ್ಟ ಸುಧಾರಿಸಲಾಗುತ್ತಿದೆ ಎಂದರು.

> **"ತಿ.ನರಸೀಪುರ ಕ್ಷೇತ್ರ ಅಭಿವೃದ್ಧಿಗೊಳಿಸಲು ಪಣತೊಟ್ಟಿದ್ದು, ಪ್ರತಿ ಗ್ರಾಮವನ್ನೂ ಉನ್ನತ ಮಟ್ಟಕ್ಕೆ ಬೆಳೆಸಬೇಕು. ಯಾವ ನಗರಗಳಿಗೂ ಕಡಿಮೆ ಇಲ್ಲದಂತೆ ಸರ್ವ ಸೌಲಭ್ಯ ಕಲ್ಪಿಸಬೇಕು. ಈ ಮೂಲಕ ಕ್ಷೇತ್ರದ ಜನತೆ ನೆಮ್ಮದಿಯಿಂದ ಬದುಕಬೇಕು. ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಇಂದು ಚಾಲನೆ ನೀಡಿರುವ ಕಾಮಗಾರಿಗಳು ಎರಡು ವರ್ಷಗಳ ಮೊದಲೇ ಆರಂಭಗೊಳ್ಳಬೇಕಿತ್ತಾದರೂ, ಕೊರೊನಾ ಹಿನ್ನೆಲೆಯಲ್ಲಿ ವಿಳಂಬವಾಯಿತು. ಪ್ರಸ್ತುತ ಅಭಿವೃದ್ಧಿ ಕಾಮಗಾರಿ ಬಿರುಸು ಪಡೆದುಕೊಂಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ದುಡಿಯುತ್ತೇನೆ.**
> – ಎಂ.ಅಶ್ವಿನ್‌ಕುಮಾರ್, ಶಾಸಕರು.



ಕೃಷಿ ಅಭಿವೃದ್ಧಿ, ಶೈಕ್ಷಣಿಕ ಪ್ರಗತಿ, ಹಾಸ್ಟೆಲ್ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಆರೋಗ್ಯ ಸೇವೆ ಸೇರಿದಂತೆ ಸಾರ್ವಜನಿಕರಿಗೆ ಸರ್ವ ಸೇವೆಗಳನ್ನು ಕಲ್ಪಿಸುವುದರ ಮೂಲಕ ಮತ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುತ್ತಿದೆ ಎಂದರು.

ಈ ವೇಳೆ ಕರೋಹಟ್ಟಿ ಗ್ರಾಪಂ ಅಧ್ಯಕ್ಷೆ ಮಮತಾ, ಮಾಜಿ ಅಧ್ಯಕ್ಷ ರೇವಣ್ಣ, ಸದಸ್ಯ ರೇವಣ್ಣ, ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚೆನ್ನಸ್ವಾಮಿ, ಮುಖಂಡರಾದ ಬನ್ನಳ್ಳಿಹುಂಡಿ ಶಿವಕುಮಾರ್, ಗುತ್ತಿಗೆದಾರ ರಾಜಣ್ಣ, ಗೌಡ್ರ ಶಾಂತಕುಮಾರ್, ಜಯಪಾಲ್‌ಭರಣಿ, ಕೆ.ಎನ್.ಪ್ರಭುಸ್ವಾಮಿ, ನಂಜೇಗೌಡ, ವಿಶ್ವನಾಥ್, ಮನೋಹರ್, ರಾಜೇಶ್, ಶಂಭು ದೇವನಪುರ ರಮೇಶ್, ದೀಪು, ದರ್ಶನ್, ಬೇವಿನಹಳ್ಳಿ ಸತೀಶ್, ಲೋಕೋಪಯೋಗಿ ಎಇಇ ನಟೇಶ್, ಜಿಪಂ ಎಇಇ ರಾಜು ನಾಯಕ್, ಕೆಆರ್‌ಎಲ್ ಎಇಇ ದಿಲೀಪ್, ಪಿಡಿಓ ನಿಂಗರಾಜು ಇದ್ದರು.

ಮೈಸೂರು ಬೇಸಿಗೆ ರೇಸುಗಳು



6 ನೇ ದಿನ, ಬುಧವಾರ 22-06-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಕಿನ್‌ಸ್ಕಿ ಪ್ಲೇಟ್–2000 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಗ್ರೇಟ್ ಹೋಪ್ 2. ಔರೆಲಿ 3. ಬ್ರೇಕ್ ಅವೇ

II. ರೆಡ್ ರೂಫಸ್ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಕಂಟ್ರೀಸ್ ಫ್ಲಾಶ್ 2. ಡಿ ಅಡ್ಮರಲ್ 3. ಏಂಜಲ್‌ಡ್ರೀಮ್ಸ್

III. ರಿಪಬ್ಲಿಕನ್ ಪ್ಲೇಟ್–1200 ಮೀ. 3 ವರ್ಷ (ಟರ್ಮ್ಸ್) ಮ.3.00ಕ್ಕೆ
1. ಮಿಸ್ಟಿಕ್ ಡಿವೈನ್ 2. ಕಲಾಹರಿ ಗೋಲ್ಡ್ 3. ಮೇ ಬರಿ

IV. ಕೊಡ್ಲಿಪೇಟ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಆಲ್ ಗ್ರೇಟ್ ಫ್ರೆಂಡ್ಸ್ 2. ಗುಡ್ ಅರ್ತ್ 3. ಡಿ ವಾರಿಯರ್

V. Dr. N.M. ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ–2000 ಮೀ. ರೇಟೆಡ್ 60 ರಿಂದ 85. ಸಂ.4.00ಕ್ಕೆ
1. ಏಂಜಲಿನೊ 2. ಲೇಕ್‌ತವೊ 3. ಡಿ ಗೋಲ್ಡ್

VI. ಹಿರಿಯೂರ್ ಪ್ಲೇಟ್ –1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1. ಬ್ರೂನ್‌ಹೈಲ್ಡ್ 2. ಬ್ಲೂ ಬ್ಲಾಸಂ 3. ಸೌಂಡ್ ಆಫ್

VII. ತಲಕಾವೇರಿ ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಮೋರ್ಗನೈಟ್ 2. ಕೋಡ್ ಆಫ್ ಹಾನರ್ 3. ಲೈಕ್ ಮೈ ಡ್ಯಾಡಿ

ದಿನದ ಅತ್ಯುತ್ತಮ	: **ಆಲ್ ಗ್ರೇಟ್ ಫ್ರೆಂಡ್ಸ್**
ಡಬ್ಬಲ್	: **ಕಂಟ್ರೀಸ್ ಫ್ಲಾಶ್, ಬ್ರೂನ್‌ಹೈಲ್ಡ್**
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ

ಟಿ.ಜಯರಾಮ್ ನೇಮಕ



ತಿ.ನರಸೀಪುರ, ಜೂ.21(ಎಸ್‌ಕೆ)– ಪಟ್ಟಣದ ತಿರುಮಕೂಡಲು ಗ್ರಾಮದ ಟಿ.ಜಯರಾಮ್ ಅವರನ್ನು ಜಿಲ್ಲಾ ರೈತ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಜನತಾದಳದ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎನ್.ನರಸಿಂಹಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶಾಸಕ ಎಂ.ಅಶ್ವಿನ್ ಕುಮಾರ್ ಅವರ ಸೂಚನೆ ಮೇರೆಗೆ ಅವರನ್ನು ನೇಮಿಸಲಾಗಿದೆ ಎಂದು ಎನ್.ನರಸಿಂಹಸ್ವಾಮಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಗೆ ಸುವರ್ಣಾಕ್ಷರ ಕೆತ್ತನೆಯ ಸ್ಮರಣಿಕೆ



ಮೈಸೂರು, ಜೂ.21– ಐತಿಹಾಸಿಕ ಅರಮನೆ ಅಂಗಳದಲ್ಲಿ ನಡೆದ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ ಮೋದಿ ಅವರಿಗೆ ಸಂಸದ ಪ್ರತಾಪ್ ಸಿಂಹ, ಉದ್ಯಮಿಯೊಬ್ಬರು ಸ್ವರ್ಣಾಕ್ಷರಗಳಲ್ಲಿ ಕೆತ್ತನೆ ಮಾಡಿಸಿರುವ ವಿಶೇಷ ಸ್ಮರಣಿಕೆಯನ್ನು ಹಸ್ತಾಂತರಿಸಿದರು.

ವರ್ಲ್ಡ್ ಆಫ್ ಸಿಲ್ವರ್ ಮಾಲೀಕ ನವರತನ್ ಡರ್ಲಾ ಅವರು ಶುದ್ಧ ಚಿನ್ನದ ಲೇಪನ ದಿಂದ ತಯಾರಿಸಿರುವ ಅತ್ಯಾಕರ್ಷಕ ಸ್ಮರಣಿಕೆಯನ್ನು ಯೋಗ ಪ್ರದರ್ಶನದ ಬಳಿಕ ಸಂಸದ ಪ್ರತಾಪ್ ಸಿಂಹ, ಪ್ರಧಾನಿ ಮೋದಿಯವರಿಗೆ ನೀಡಿ, ಧನ್ಯವಾದ ಸಲ್ಲಿಸಿದರು.

ಚಿನ್ನಲೇಪಿತ 30 ಇಂಚು ಅಗಲ ಹಾಗೂ 17 ಇಂಚು ಎತ್ತರದ ಚೌಕಟ್ಟಿನೊಳಗೆ ಸುಂದರ ಮೈಸೂರು ಅರಮನೆ ಮತ್ತು ಯೋಗ ಭಂಗಿಯಲ್ಲಿರುವ ಹಾಗೂ ಕೇಸರಿ ವೇಸ್‌ಕೋಟ್ ಧರಿಸಿದ ಪ್ರಧಾನಿ ಮೋದಿಯವರ ಫೋಟೋಗಳಿವೆ. ಯೋಗ ಭಂಗಿಯ ಮೋದಿ ಚಿತ್ರದಡಿ 'ಋಗ್ವೇದದ ಈಶಭಾಷ್ಯ ಶ್ಲೋಕ'ವನ್ನು ಸ್ವರ್ಣಾಕ್ಷರಗಳಲ್ಲಿ ಅಳವಡಿಸಲಾಗಿದೆ. ಮತ್ತೊಂದು ಭಾಗದಲ್ಲಿ 'ಮೈಸೂರು ಬಹುದೊಡ್ಡ ಯೋಗ ಕೇಂದ್ರವಾಗಿದೆ. ಇಲ್ಲಿನ ಯೋಗ ಗುರುಗಳು ಯೋಗದ ಮಹತ್ವವನ್ನು ವಿಸ್ತಾರಗೊಳಿಸಿದ್ದಾರೆ. 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಯೋಗದ ಕೇಂದ್ರ ಬಿಂದು ಮೈಸೂರನ್ನು ಆಯ್ಕೆ ಮಾಡಿದ್ದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಮೈಸೂರಿನ ಮೇಲೆ ವಿಶೇಷ ಪ್ರೀತಿ ಹೊಂದಿರುವ ತಮಗೆ ಹೃದಯಪೂರ್ವಕ ಅಭಿನಂದನೆಗಳು' ಎಂದು ಸ್ವರ್ಣಾಕ್ಷರಗಳಲ್ಲೇ ಬರೆಯಲಾಗಿದೆ.



ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ: ವಿದ್ಯಾರ್ಥಿಗಳಿಗೆ ಉಚಿತ ಬಸ್ ಸೇವೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಉಚಿತ ಬಸ್ ಸೇವೆ ಕಲ್ಪಿಸಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ತಿಳಿಸಿದೆ. ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ಜೂ.27ರಿಂದ ಜುಲೈ4ರವರೆಗೆ ನಡೆಯಲಿದೆ. ಪರೀಕ್ಷೆ ಪ್ರವೇಶ ಪತ್ರ ತೋರಿಸಿ ವಿದ್ಯಾರ್ಥಿಗಳು ಬಸ್‌ನಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆಯಲ್ಲಿ ತಿಳಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಮೇ 19ರಂದು ಪ್ರಕಟವಾಗಿತ್ತು. ಈ ಬಾರಿ ಪರೀಕ್ಷೆಯಲ್ಲಿ ಶೇ. 85.63ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಜೂ.27ರಿಂದ ಪೂರಕ ಪರೀಕ್ಷೆ ನಡೆಯಲಿದೆ.

ನಿಧನ



ಶ್ರೀ ರಂಗರಾಜು (Rtd. Joint Director, PU Board)

ಇವರು ದಿ.21.06.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿ: 22.06.2022 ಬುಧವಾರ ಮಧ್ಯಾಹ್ನ 2 ಗಂಟೆಗೆ ನಂಜನಗೂಡು ತಾಲ್ಲೂಕಿನ ವೀರದೇವನಪುರ ಗ್ರಾಮದಲ್ಲಿ ನೆರವೇರಿಸಲಾಗುವುದು

ದುಃಖಿತಪ್ತರು: ಮೃತರ ಪತ್ನಿ, ಮಕ್ಕಳು & ಕುಟುಂಬವರ್ಗ

ಸಂಬಂಧಿಸಿದವರಿಗೆ ತಿಳುವಳಿಕೆ

ನಮ್ಮ ಕಕ್ಷಿದಾರರಾದ ಮೈಸೂರು, ರಾಜೀವ್ ನಗರ, 1ನೇ ಹಂತ, ಮನೆ ನಂ. 1716ರಲ್ಲಿ ವಾಸವಾಗಿರುವ ದಿ॥ ಮೊಹಮ್ಮದ್ ಆಲಿ ಯವರ ಮಗ 59ರ ಪ್ರಾಯದ ಮೊಹಮ್ಮದ್ ಇಸ್ಮಾಯಿಲ್ ರವರ ಸೂಚನೆಯ ಅನುಸಾರ ತಮಗೆ ಕೆಳಕಂಡಂತೆ ತಿಳಿಸಲಾಗಿದೆ :

1) ಅನುಸೂಚಿ ಸ್ವತ್ತು ನಮ್ಮ ಕಕ್ಷಿದಾರರಿಗೆ ಸೇರಿದ್ದು ಅವರು ಮತ್ತು ಅವರ ಪತ್ನಿ ಜರೀನಾ ತಾಜ್ ರವರು ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 3-4-1996 ರಂದು ಮೈಸೂರು, ದೇವರಾಜ ಮೊಹಲ್ಲಾ ಕುಂಬಾರ ಕೊಪ್ಪಲು, 1ನೇ ಹಂತ, ಮನೆ ನಂ.110 ರಲ್ಲಿ ವಾಸವಾಗಿರುವ ಶಿವೇಗೌಡರ ಮಗ ಶ್ರೀ ಶಿವಣ್ಣನವರ ಪರವಾಗಿ ಒಂದು ನೋಂದಾಯಿತ ಆಧಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ, ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸ್ವಾಧೀನ ಮತ್ತು ಅನುಭವದಲ್ಲಿ ಅಂದಿನಿಂದ ಇಂದಿನವರೆಗೂ ಮುಂದುವರಿದಿದ್ದಾರೆ ಎನ್ನುವುದು ನಿರ್ವಿವಾದ.

2) ನಂತರದಲ್ಲಿ ಕೆಲವು ಬಾರಿ ನಮ್ಮ ಕಕ್ಷಿದಾರರು ಸದರಿ ಶ್ರೀ ಶಿವಣ್ಣನವರನ್ನು ಸಂಪರ್ಕಿಸಿ ಅಸಲು ಮತ್ತು ಬಡ್ಡಿಯನ್ನು ತೆಗೆದುಕೊಂಡು ಆಧಾರ ಪತ್ರದ ತೀರುವಳಿ ಪತ್ರ ಬರೆದುಕೊಡಬೇಕೆಂದು ಪ್ರಯತ್ನಿಸಿದರೂ ಅದಕ್ಕೆ ಸೂಕ್ತ ಸಂದರ್ಭ ದೊರೆಯದ ಹಿನ್ನೆಲೆಯಲ್ಲಿ ಈಚೆಗೆ ಸದರಿಯವರಿಗೆ ಒಂದು ತಿಳುವಳಿಕೆ ಪತ್ರವನ್ನು ಕಳುಹಿಸಲು ಯತ್ನಿಸಿದರು. ಶ್ರೀ ಶಿವಣ್ಣನವರು ಆಧಾರ ಪತ್ರದಲ್ಲಿ ಬರೆಸಿದ ವಿಳಾಸದಲ್ಲಿ ಇಲ್ಲವೆಂದು ತಿಳಿದು ಬಂದಿತು.

3) ಈ ಹಿನ್ನೆಲೆಯಲ್ಲಿ ಮೇಲ್ಕಂಡ ಶಿವಣ್ಣನವರಾಗಲೀ ಅಥವಾ ಅವರ ವಾರಸುದಾರರಾಗಲೀ ನಮ್ಮನ್ನಾಗಲಿ ಅಥವಾ ನಮ್ಮ ಕಕ್ಷಿದಾರರನ್ನಾಗಲಿ ತಕ್ಷಣ ಸಂಪರ್ಕಿಸಿ ಅಸಲು ಮತ್ತು ಬಡ್ಡಿಯನ್ನು ಪಡೆದುಕೊಂಡು ನೋಂದಾಯಿತ ತೀರುವಳಿ ಪತ್ರವನ್ನು ಬರೆದುಕೊಡುವುದು. ಹಾಗೆ ಮಾಡಲು ತಪ್ಪಿದಲ್ಲಿ ಸೂಕ್ತ ಪರಿಹಾರ ಕೋರಿ ದಾವೆ ದಾಖಲಾಗುವುದು.

ಅನುಸೂಚಿ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮಕ್ಕೆ ಸೇರಿದ ಜಮೀನಿಗೆ ಚೆಕ್ಕುಬಂದಿ ಪೂರ್ವಕ್ಕೆ: ನಾಗರಾಜುರವರ ಜಮೀನು, ಪಶ್ಚಿಮಕ್ಕೆ: ಕಾಳಿಂಗೇಗೌಡರ ಜಮೀನು. ಉತ್ತರಕ್ಕೆ: ಸರ್ಕಾರಿ ಜಮೀನು. ದಕ್ಷಿಣಕ್ಕೆ: ಕೃಷ್ಣಯರವರ ಜಮೀನು. ಈ ಮಧ್ಯೆ ಇರುವ ಸರ್ವೆ ನಂ. 506/2ಎ ಖರಾಬು 0-03 ಗುಂಟೆ ಸೇರಿ ಒಟ್ಟು ವಿಸ್ತೀರ್ಣ 0 ಎಕರೆ 15 ಗುಂಟೆ ಆಕಾರ 0-28 ಪೈಸೆ ಉಳ್ಳ ಖುಷ್ಕಿ ಜಮೀನು

ಪಿ.ಡಿ.ಮೇದಪ್ಪ ನ್ಯಾಯವಾದಿ
ನಂ.1432/ಎ, 'ಅಂಬಾಸುತ ಸದನ' ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು


ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 17/MYS/2022
ದಿನಾಂಕ: 16.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನಿಂತಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಚಿಕ್ಕಜಾಜೂರು– ಕರ್‌ಜಗಿ ಸೆಕ್ಷನ್: ಅಸ್ತಿತ್ವದಲ್ಲಿರುವ 52 ಕೆಜಿ/90 ಯುಟಿಎಸ್ ರೈಲ್‌ಗಳನ್ನು ಹೊಸ 60 ಕೆಜಿ ರೈಲ್‌ಗಳೊಂದಿಗೆ ಕಿ.ಮೀ. 281/000 ರಿಂದ 285/270ಕಿಮೀ. (ಡೌನ್) ಕಿಮೀ. 316.6 ರಿಂದ 320.5(ಅಪ್), 322/000 ರಿಂದ 322/500 (ಡೌನ್), 326 ರಿಂದ 328(ಅಪ್), 332 ರಿಂದ 336.7(ಅಪ್), 347 ರಿಂದ 349), 350.7 ರಿಂದ 356.4(ಅಪ್), 362.1 ರಿಂದ 363(ಅಪ್), 366/000 ರಿಂದ 367/000(ಅಪ್), 357/800 ರಿಂದ 360/500(ಅಪ್) ವರೆಗೆ ಒಟ್ಟು 27.77 ಕಿಮೀ ಉದ್ದಕ್ಕೆ ಟಿಆರ್ ಆರ್ (ಪಿ)	ರೂ. 2,73,79,110/-
2	(ಉಪ ಕಾಮಗಾರಿ–I): ಚಿಕ್ಕಜಾಜೂರು–ಕರ್‌ಜಗಿ ಸೆಕ್ಷನ್: ಚಿಕ್ಕಜಾಜೂರು – ಮಾಯಕೊಂಡ ನಿಲ್ದಾಣಗಳ ನಡುವೆ ಕಿಮೀ 289.8 ರಿಂದ 294 (ಅಪ್) ವರೆಗೆ 4.2 ಕಿಮೀ ಉದ್ದಕ್ಕೆ 1660 ಡೆನ್ಸಿಟಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಅಸ್ತಿತ್ವದಲ್ಲಿರುವ 52 ಕೆಜಿ 90/72 ಯುಟಿಎಸ್ ರೈಲ್‌ಗಳನ್ನು 1660 ಸಂ. ಪ್ರತಿ ಕಿಮೀ ಇರುವ 60 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಇರುವ ಹೊಸ 60 ಕೆಜಿ / 90ಯುಟಿಎಸ್ ರೈಲ್‌ಗಳೊಂದಿಗೆ ಸಂಪೂರ್ಣ ಟ್ರ್ಯಾಕ್ ನವೀಕರಣ (ಪ್ರಾಥಮಿಕ). (ಉಪ ಕಾಮಗಾರಿ–II): ಚಿಕ್ಕಜಾಜೂರು–ದಾಯಮರ್ಗ ಸೆಕ್ಷನ್: ಕಿಮೀ 0/500 ರಿಂದ 1/000 ವರೆಗೆ 0.5 ಕಿಮೀ ಉದ್ದಕ್ಕೆ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಅಸ್ತಿತ್ವದಲ್ಲಿರುವ 52 ಕೆಜಿ 90/72 ಯುಟಿಎಸ್ ರೈಲ್‌ಗಳನ್ನು 1660 ಸಂ. ಪ್ರತಿ ಕಿಮೀ ಇರುವ 60 ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಮೇಲೆ ಇರುವ ಹೊಸ 60 ಕೆಜಿ /90ಯುಟಿಎಸ್ ರೈಲ್‌ಗಳೊಂದಿಗೆ ಸಂಪೂರ್ಣ ಟ್ರ್ಯಾಕ್ ನವೀಕರಣ (ಪ್ರಾಥಮಿಕ).	ರೂ. 1,87,35,624/-
3	ಸೇತುವೆ ಸಂಖ್ಯೆ 597 (ನೇತ್ರಾವತಿ) 4x45.72ಮೀ +8x24.40ಮೀ, ಸೇತುವೆ ಸಂಖ್ಯೆ 400 (ಕುಮಾರಧಾರಾ) 4x30.50ಮೀ+ 1x18.30ಮೀ ಮತ್ತು ಸೇತುವೆ ಸಂಖ್ಯೆ 118 (ಹೇಮಾವತಿ) 6x24.40ಮೀ ನಡಿಯ ಪಾತ್ರಗಳ 3ಡಿ ಸ್ಕ್ಯಾನಿಂಗ್.	ರೂ. 15,69,487/-
4	ಸಾಗರ ಜಂಬಗಾರು: ಸಾಗರ ಜಂಬಗಾರು ನಿಲ್ದಾಣದಲ್ಲಿ ಎಫ್‌ಒಬಿ ಒದಗಿಸುವುದು.	ರೂ. 1,94,26,991/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08-07-2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನಿಯರ್ / ಕೋ–ಆರ್ಡ್ ಮೈಸೂರು
PUB/164/VU/PRB/SWR/2022-23
S.W.Railways SWRRLY SWRRLY




SAD DEMISE

We regret to inform you about the sad demise of **H.Hanumaiah**

(Retired Asst. Director of Horticulture) aged 83 years residing at 34/1, 8th Cross, 4th Main (behind City Bones & Joint center) Vinayakanagar, Mysuru. passed away at 4.15 pm on 21.06.2022 Cremation will be held at 1:30 PM in Gokulam crematorium, Mysuru. Contact no: 9448051123

ಹುಟ್ಟುಹಬ್ಬದ 'ಜನ್ಮ ಶತಮಾನೋತ್ಸವ' (1922-2022)



ದಿ॥ ಶ್ರೀ ಕೆ.ಕಾಳಯ್ಯ
ರಿ॥ ಪೋಸ್ಟ್ ಮಾಸ್ಟರ್ (HSG1)
ಹುಟ್ಟಿದ ದಿನಾಂಕ: 22.06.1922
ಶುಭಕೋರುವವರು: ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಮತ್ತು ಸೊಸೆಯಂದಿರು
ಮೊ: 9663642484

1ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ. ಪರಮೇಶ್
ದುಃಖತಪ್ತರು: ಶ್ರೀಮತಿ ತ್ರಿವೇಣಿ ಎಸ್.ಎನ್., ಮಗಳು ಸೌಮ್ಯ ಎಂ.ಎನ್
ಕುಟುಂಬವರ್ಗದವರು ಮತ್ತು ಸ್ನೇಹಿತರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ: 13-06-2022 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ.23/06/2022 ಗುರುವಾರ, ಬೆಳಗ್ಗೆ 10.30 ರಿಂದ 1.00 ಗಂಟೆಗೆ ಬಳಕೆರೆ, ದೇವರಹಳ್ಳಿ ರಸ್ತೆ ತೋಟದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಶ್ರೀ ರವಿಕುಮಾರ್.ಎಸ್

ದುಃಖಿತಪ್ತರು: ಮೃತರ ತಾಯಿ, ಹೆಂಡತಿ, ಮಕ್ಕಳು ಅಕ್ಕ ತಂಗಿಯರು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು



Congratulations
For securing 575 (95.8%) Distinction in 2nd PUC EABC, Commerce at Vijaya Vittala PU College.
BHUVANA K.
D/o Smt. Sri Suchitra Keshavan
Best wishes from: MNC Seva Balaga, President : C. Prakashan

45ನೇ ವರ್ಷದ ವಿವಾಹ ವಾರ್ಷಿಕೋತ್ಸವ



ಶ್ರೀ ವಿ.ಬಿ. ಸತ್ಯನಾರಾಯಣರಾವ್ ಬಗರೆ
ಶ್ರೀಮತಿ ಹೇಮಾವತಿ ಬಾಯಿ
ಶುಭಕೋರುವವರು: ಎಸ್.ಬಿ. ದೀಪಕ್ ರಾವ್, ಎಸ್.ಬಿ. ಸಂದೀಪ್‌ರಾವ್, ಎಸ್.ಬಿ. ಸುಮೀತ್‌ಕುಮಾರ್‌ರಾವ್, ಎಸ್.ಬಿ. ಯದುನಂದನರಾವ್ ಬಗರೆ ಕುಟುಂಬಸ್ಥರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈನಪ್ರಾ/ವ.ಕ–8/106/2022–23 ದಿನಾಂಕ: 20.06.2022

ಪತ್ರಿಕಾ ಪ್ರಕಟಣೆ

ಶ್ರೀಮತಿ ಬದ್ರುನ್ನೀಸಾ ಕೋಂ ಶ್ರೀ ಅಬ್ದುಲ್ ಗಫಾರ್ ರವರಿಗೆ ಗಾಯತ್ರಿಪುರಂ 2ನೇ ಹಂತ 2ನೇ ಫೇಸ್ ಬಡಾವಣೆಯಲ್ಲಿ ನಿವೇಶನ ಸಂಖ್ಯೆ: 175 ಅಳತೆ 20 X 33 ಅಡಿ ನಿವೇಶನವು ಪ್ರಾಧಿಕಾರದಿಂದ ದಿನಾಂಕ: 14.01.1980 ರಂದು ಮಂಜೂರಾಗಿದ್ದು, ದಿ:25.11.1980 ರಂದು ನಿವೇಶನದ ಸ್ವಾಧೀನ ಪತ್ರ ಪಡೆದಿರುತ್ತಾರೆ. ನಂತರ ಮಂಜೂರಾತಿದಾರರಾದ ಶ್ರೀಮತಿ ಬದ್ರುನ್ನೀಸಾ ರವರು ತಮ್ಮ ಪ್ರತಿನಿಧಿ ಶ್ರೀ ರಾಮಚಂದ್ರಸ್ವಾಮಿ ರವರಿಗೆ ಉಪ ನೋಂದಣಾಧಿಕಾರಿ ಮೈಸೂರು ಉತ್ತರ ರವರ ಕಛೇರಿಯಲ್ಲಿ 4ನೇ ಪುಸ್ತಕದ 3ನೇ ಸಂಪುಟದಲ್ಲಿ 388 ನೇ ಪುಟದಲ್ಲಿ 731ನೇ ನಂಬರಾಗಿ ದಿನಾಂಕ: 07.12.1993 ರಂದು ನೋಂದಾಯಿತ ಜಿ.ಪಿ.ಎ ನೀಡಿರುತ್ತಾರೆ.

ನಂತರ ಜಿ.ಪಿ.ಎದಾರರಾದ ಶ್ರೀ ರಾಮಚಂದ್ರಸ್ವಾಮಿ ರವರು ಮನೆ ಸಂಖ್ಯೆ 175 ಅನ್ನು ಶ್ರೀಮತಿ ಜಾನಕಿದೇವಿ ಉರುಫ್ ಗಜಲಕ್ಷ್ಮಿ ರವರಿಗೆ ಉಪ ನೋಂದಣಾಧಿಕಾರಿ ಮೈಸೂರು ಉತ್ತರ ರವರ ಕಛೇರಿಯಲ್ಲಿ 1ನೇ ಪುಸ್ತಕದ ದಸ್ತಾವೇಜು ನಂಬರ್ ಎಂವೈಇ–02922–2006–07 ಆಗಿ ಸಿ.ಡಿ.ನಂಬರ ಎಂವೈಇಡಿ88 ಸೇದ್ದರಲ್ಲಿ ದಿನಾಂಕ:04.05.2006 ರಂದು ನೋಂದಾಯಿತ ಶುದ್ಧಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಶ್ರೀಮತಿ ಜಾನಕಿದೇವಿ ಉರುಫ್ ಗಜಲಕ್ಷ್ಮಿ ರವರು ನಗರ ಪಾಲಿಕೆಯಲ್ಲಿ ಖಾತಾವರ್ಗಾವಣೆ ಪಡೆದಿರುತ್ತಾರೆ.

ಕ್ರಯದಾರರಾದ ಶ್ರೀಮತಿ ಜಾನಕಿದೇವಿ ಉರುಫ್ ಗಜಲಕ್ಷ್ಮಿ ಕೋಂ ಶ್ರೀ ರಾಮಚಂದ್ರಸ್ವಾಮಿರವರು ಕ್ರಯವರ್ಗಾವಣೆ ಹಾಗೂ ಕ್ರಯಪತ್ರ, ಕೋರಿ ಅರ್ಜಿಸಲ್ಲಿಸಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡಬೇಕಾಗಿದ್ದು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ /– ವಿಶೇಷ ತಹಸೀಲ್ದಾರ್
ವಲಯ ಕಛೇರಿ–8, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು